ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)
ಪಾಜಕ, 89/24, 3ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-19. ದೂರವಾಣಿ : (080) 26602802; 26611011

**ಸಂಪಾದಕರು : ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

ಸಂಪುಟ -೫ ಸಂಚಿಕೆ – ೨ ಶ್ರೀನಂದನ(ಚೈತ್ರ-ವೈಶಾಖ) ಏಪ್ರಿಲ್ ೨೦೧೨

## ಶ್ರೀವ್ಯಾಸಸೂಕ್ತಿ

**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್ ।**
**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥**

–ವಿಷ್ಣುಪುರಾಣೇ(೫/೭೮)

ಜಗತ್ತಿನ ಹುಟ್ಟು, ಸಾವು, ಜೀವಿಗಳ ಗಮನ, ನಿರ್ಗಮನ, ವಿದ್ಯೆ ಹಾಗೂ ಅವಿದ್ಯೆಗಳನ್ನು ಬಲ್ಲವನನ್ನು ಭಗವಾನ್ ಎಂದು ತಿಳಿಯಬೇಕು.

## ಶ್ರೀಮಧ್ವಸೂಕ್ತಿ

**ಸ ಶಠಮತಿರುಪಯಾತಿ ಯೋಽರ್ಥತೃಷ್ಣಾಂ**
**ತಮಧಮಚೇಷ್ಟಮವೈಹಿ ನಾಸ್ಯ ಭಕ್ತಮ್ ॥**

–ಇತಿ ಹಿ ಶ್ರೀವಿಷ್ಣುಪುರಾಣೇ(೩/೮/೩೦)–ಗೀತಾಭಾಷ್ಯೇ (೯/೩೪)

ಹಣದ ಆಸೆಗೆ ಒಳಗಾಗುವ ವಂಚಕಬುದ್ಧಿಯ ಕೀಳುಪ್ರವೃತ್ತಿಯ ವ್ಯಕ್ತಿಯನ್ನು ಶ್ರೀಹರಿಯ ಭಕ್ತನೆಂದು ಸರ್ವಥಾ ತಿಳಿಯಕೂಡದು.

# ವಿಷಯಾನುಕ್ರಮಣಿಕೆ


| | | | |
|---|---|---|---|
| ೧. | ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ | | ೧ |
| ೨. | ಹರಿದಾಸರ ಸೂಕ್ತಿರತ್ನಗಳು | - ಶ್ರೀಪುರಂದರದಾಸರ ಸೂಕ್ತಿರತ್ನಗಳು | ೩ |
| ೩. | ಗಾಯತ್ರೀಭಾಷ್ಯರೂಪಃ ಅಸೌ - ೩೭: | - ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು | ೪ |
| ೪. | ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೪೦ : | - ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು | ೬ |
| ೫. | ಪ(ರ)ಶುರಾಮ | - ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು | ೧೪ |
| ೬. | ಸಂಪಾದಕೀಯ | – ಸಾರ್ಥಕನಾಮದ ಶ್ರೀವಿದ್ಯಾಮಾನ್ಯರು | ೧೬ |
| ೭. | ಭಾವಪುಷ್ಪಾರ್ಪಣೆಯ ಅನುಸಂಧಾನ | - ಪಂ.ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ | ೧೮ |
| ೮. | ಶ್ರೀಪರಶುರಾಮ ರೂಪದ ಹಿರಿಮೆ | - ವಿಪ್ರ | ೧೯ |
| ೯. | ಶ್ರೀವೇದವ್ಯಾಸರೂಪದ ವೈಭವ | - ವಿಪ್ರ | ೨೨ |
| ೧೦. | ಶ್ರೀನರಸಿಂಹ ವೈಭವ | - ವಿಪ್ರ | ೨೯ |
| ೧೧. | ಶ್ರೀಕೂರ್ಮಾವತಾರದ ಹಿರಿಮೆ | - ವಿಪ್ರ | ೩೦ |
| ೧೨. | ಚಿಕ್ಕೋಡಿ ಶ್ರೀಭಗವಂತರಾಯರು | | ೩೩ |
| ೧೩. | ಶ್ರೀಕನಕದಾಸರ ಹರಿಭಕ್ತಿಸಾರ | - ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ | ೪೧ |
| ೧೪. | ಮಾಸದ ವಿಶೇಷಗಳು | | ೪೪ |


*****

ರಕ್ಷಾಪುಟ ೪ರ ಚಿತ್ರ(ಶ್ರೀಪಂಚಮುಖಿಪ್ರಾಣದೇವರು, ಕುಂಭಕೋಣಕ್ಷೇತ್ರ)ವನ್ನು
ನೀಡಿದವರು : ಶ್ರೀ ಹನುಮಂತಜೋಯಿಸ್, ಶಿವಮೊಗ್ಗ
(ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು)

---

## ಚಂದಾ ವಿವರ

**ಆಜೀವಚಂದಾ : ರೂ ೫೦೦೦**

**ಪಂಚವಾರ್ಷಿಕ ಚಂದಾ : ರೂ. ೫೦೦; ಬಿಡಿ ಪ್ರತಿ : ರೂ. ೧೦**

**ವಿ.ಸೂ.:–**

**೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.**

**೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.**

# ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಆದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

## ಶ್ರೀಪುರಂದರದಾಸರ ಸೂಕ್ತಿರತ್ನಗಳು

ಹರಿಯೆ ನಿಮ್ಮ ಸ್ಮರಣೆಯ ಮಾಡಲು
ದುರಿತ ಪೀಡಿಪುದುಂಟೆ
ಅರಿತು ಭಜಿಪರಿಗೆಲ್ಲ ಕೈವಲ್ಯ ಜೋಕೆ
ಕರುಣವರಿತು ತನ್ನ ಮಗನ ಕೂಗಿದವಗೆ
ಮರಣಕಾಲದಿ ಒದಗಿದೆ ಪುರಂದರವಿಠಲ ||

*****

ಹರಿ ಹರಿ ಎಂದು ಕರೆಯುವುದೆ ತಡ
ಕರೆದಲ್ಲಿಗೆ ಬರುವ ನರಹರಿಯೆಂದು
ಕರೆಯುವುದೆ ತಡ ಕರೆದಲ್ಲಿಗೆ ಬರುವ
ಸುರನರಲೋಕದಲ್ಲೆಲ್ಲಿದ್ದರೂ ಕರೆದಲ್ಲಿಗೆ ಬರುವ
ಪುರಂದರವಿಠಲನೆಂದು ಕರೆಯೊ ಕರೆದಲ್ಲಿಗೆ ಬರುವ ||

*****

ಮನ ಚಂಚಲದಿ ತಪವ ಮಾಡಲಶಕ್ಯವು
ಘನ ಅಜ್ಞಾನದಿ ಸತ್ಕರ್ಮಗಳು ಹತ್ತವು
ಧನಶುದ್ಧಿಯಿಲ್ಲದೆ ದಾನವು ವ್ಯರ್ಥವು
ಮನಶುದ್ಧಿಯಿಲ್ಲದ ಧ್ಯಾನವು ವ್ಯರ್ಥವು
ಇನಿತಾದ್ದರಿಂದ ಈ ಯುಗದಿ ಪುರಂದರವಿಠಲನ
ನಾಮಸ್ಮರಣೆಯೇ ಲೇಸು ಲೇಸು ಕಾಣಾ ||

*****

# ಗಾಯತ್ರೀಭಾಷ್ಯರೂಪಃ ಅಸೌ - ೩೭

## (ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು**

**ಪಲಿಮಾರು ಮಠ, ಉಡುಪಿ.**

ದಕ್ಷನನ್ನು ಅದಕ್ಷನನ್ನಾಗಿ ಶ್ರೀಹರಿ ಯಾಕೆ ಮಾಡಿದ?

''**ನ ಮೇ ಭಕ್ತಃ ಪ್ರಣಶ್ಯತಿ**'' ಇದು ಭಗವಂತನ ಸಾರ್ವಕಾಲಿಕ ಅಭಯವಾಣಿ. ದಕ್ಷನ ಬಗ್ಗೆ ಈ ದೈವೀವಾಣಿಯು ಹುಸಿಯಾಯಿತೆ? ದಕ್ಷನ ಬಗ್ಗೆ ದೇವರ ಮೃದುಹೃದಯವೂ ಮಿಡಿಯಲಿಲ್ಲವೆ? ದಕ್ಷನು ಪಾಣಿಯ ತತ್ತ್ವದ ಅಭಿಮಾನಿದೇವತೆ. ಹಾಗಾಗಿ ಸಮಗ್ರಜೀವರಾಶಿಗಳ ಪಾಣಿಗ್ರಹಣ ಮಾಡಿ, ಸಾಧನೆ ಮಾಡಿಸಿ ಫಲ ಉಣಿಸುವವ ದಕ್ಷ. ಪಾಣಿಯ ಅಭಿಮಾನಿದೇವತೆಯ ಪಾಣಿಯನ್ನು ಚಕ್ರಪಾಣಿಯು ಕೈಬಿಟ್ಟನೆ? ದಕ್ಷನು ದೇವರ ಸಾಕ್ಷಾತ್ಕಾರ ಪಡೆದವ. ಅದಕ್ಕೆಂದೇ ಈ ದೇವಪದವಿ ಆತನಿಗೆ.

''**ನ ದೇವಪದವೀಂ ಪ್ರಾಪ್ತಾಃ ಬ್ರಹ್ಮದರ್ಶನವರ್ಜಿತಾಃ**''. ದೇವರ ಪ್ರತ್ಯಕ್ಷದರ್ಶನ ಮಾಡದವನಿಗೆ ಈ ಪದವಿ ಅತ್ಯಂತ ಅಸಂಭಾವಿತ.

ದೇವರ ಸಾಕ್ಷಾತ್ ದರ್ಶನ ಮಾಡಿದವನಿಗೆ ಪಾಪದ ಲೇಪ ಆಗದು. ಪಾಪವೂ ಆತನನ್ನು ಅಂಟಿಕೊಳ್ಳಲಾರದು.

''**ತದಧಿಗಮ ಉತ್ತರಪೂರ್ವಾಘಯೋಃ ಅಶ್ಲೇಷವಿನಾಶೌ ತದ್ವ್ಯಪದೇಶಾತ್**''. ದೇವ-ರನ್ನು ಕಂಡವನಿಗೆ ಮುಂದಿನ ಪಾಪ ಅಂಟದು. ಹಿಂದೆ ಮಾಡಿದ ಪಾಪ ಉಳಿಯದು. ಹೀಗೆ ಪಾಪವೇ ಇಲ್ಲದ ದಕ್ಷನಿಗೆ ಶಾಪ-ತಾಪಗಳು, ದುಃಖ-ದುಮ್ಮಾನಗಳು, ಮಾನಾಪಮಾನಗಳು, ಜಯ-ಅಪಜಯಗಳು, ಅಂಗವೈಕಲ್ಯಗಳು ಊಹಿಸಲೂ ಅಶಕ್ಯಗಳೇ ಸರಿ. ವಿಚಿತ್ರವಾದರೂ ಇದು ಸತ್ಯ. ಬೇಲಿಯೇ ಹೊಲ ಮೇಯ್ದರೆ ಹೇಗೆ? ಹೆತ್ತ ತಾಯಿಯೇ ಹೊತ್ತು ಹಾಕಿ ಕತ್ತು ಕಿತ್ತರೆ ಹೇಗೆ? ಹರಿಯೇ ''ಪಿತೃಮಾತೃಗತಿ''ಯಲ್ಲವೆ?

ಭಾಗವತದ ಹೃದಯವನ್ನು ಗಾಯತ್ರೀಮಾತೆ ''ಸವಿ+ತಾ'' ಎಂದು ಸಂಗ್ರಹಿಸಿದ್ದಾಳೆ. ಹರಿಯ ಭಕ್ತರು ಅರಿತು ತಪ್ಪು ಮಾಡುವುದಿಲ್ಲ; ಅರಿಯದೆ ಮಾಡಿದ್ದರೆ ಆ ಅಪರಾಧವನ್ನು ಹರಿಯು ಹಿರಿದು ಮಾಡಲಾರ.

ಭಗವಂತನ ಸಾಕ್ಷಾತ್ ದರ್ಶನ ಮಾಡಿದವರಿಗೆ ಪಾಪವು ಅಂಟುವುದಿಲ್ಲವೆಂಬುದು ಸತ್ಯ. ಆದರೆ ಹರಿಯ ಜ್ಞಾನಿಗಳು ಸ್ವ-ಉತ್ತಮರ ದ್ವೇಷ ಮಾಡಿದರೆ ಮಹಾಪರಾಧವೇ ಸರಿ; ''**ಶ್ರೇಷ್ಠಾಪರಾಧಾನ್ನಾನ್ಯದೋಷಸ್ಯ ಲೇಪಸ್ತೇಜೀಯಸಾಂ ನಿರ್ಣಯೋಽಯಂ ಹಿ ಶಾಸ್ತ್ರೇ**''.

ಮಹಾರುದ್ರದೇವರಿಗೆ ಮಾಡಿದ ಅಪಮಾನ ದಕ್ಷನಿಗೆ ಸ್ವ-ಉತ್ತಮ ಅಪರಾಧವೆನ್ನುವುದರಲ್ಲಿ ಯಾರದೂ ತಗಾದೆ-ತಕರಾರು ಇಲ್ಲ. ನವವಿಧದ್ವೇಷಗಳಲ್ಲಿ ''ತದ್ಭಕ್ತದ್ವೇಷ ಏವ ಚ'' - ವೈಷ್ಣವೋತ್ತಮರ, ಶ್ರೀಹರಿಭಕ್ತರ ದ್ವೇಷವೂ ಒಂದು. ಶ್ರೀರುದ್ರದೇವರು ವೈಷ್ಣವೋತ್ತಮರು. ''ವೈಷ್ಣವಾನಾಂ ಯಥಾ ಶಂಭುಃ'' ಎಂದೇ ಭಾಗವತ ಉಲ್ಲೇಖಿಸಿದೆ. ಸಮೀರಗುರುಗಳಲ್ಲಿ ೪೦ ಕಲ್ಪ ಶಿಷ್ಯತ್ವ ವಹಿಸಿ ನಿಖಿಲಾಗಮ ಅಧ್ಯಯನ ಮಾಡಿದ ರುದ್ರದೇವರು ವೈಷ್ಣವರಾಗದಿರಲು ಸಾಧ್ಯವೆ? ಶ್ರೀರಾಮಮಂತ್ರವನ್ನು ನಿತ್ಯ ಪಾರ್ವತೀದೇವಿಗೆ ಉಪದೇಶ ಮಾಡುತ್ತಿರುವ, ಹೃದಯದಲ್ಲಿ ನೃಸಿಂಹನನ್ನು ಆರಾ-ಧಿಸುವ ರುದ್ರದೇವರು ವೈಷ್ಣವರಾಗದಿರಲು ಸಾಧ್ಯವೆ? ಹಾಗಾಗಿ ದಕ್ಷನಿಗೆ ರುದ್ರದೇವರ ದ್ವೇಷವು ''ತದ್ಭಕ್ತದ್ವೇಷ''ದಲ್ಲಿಯೇ ಪರ್ಯವಸಿತ. ಆದಕ್ಕೆಂದೇ ಈ ಪಾಪದ ಲೇಪವಾಯಿತು.

ತಾಯಿಯ ತಲೆ ಕಡಿದ ಪರಶುರಾಮ. ಯಾಕೆ ? ಪುನಃ ಜೋಡಿಸುವ ಸಾಮರ್ಥ್ಯವಿತ್ತು ಆ ದೇವರಿಗೆ. ಪುನಃಸಂಧಾನ ಮಾಡುವ ತಾಕತ್ತಿದ್ದರೆ ಕಡಿಯುವುದಕ್ಕೇನಂತೆ? ಅದಕ್ಕೇನೇ ದಕ್ಷನ ತಲೆ ಕಡಿದು ಪಾವನವಾದ ಮೇಕೆಯ ಮುಖ ಜೋಡಿಸಿ ಆತನಿಂದ ಮಖ ಮಾಡಿಸಿದ ಶ್ರೀಹರಿ.

''ಕ್ರೋಧೋಽಪಿ ದೇವಸ್ಯ ವರೇಣ ತುಲ್ಯಃ''. ತಾಯಿ ಕೋಪ ಮಾಡಿದರೂ ಅದರ ಹಿಂದೆ ಮಹಾರಹಸ್ಯ ನಿಗೂಢವಾಗಿರುತ್ತದೆ. ಪ್ರೀತಿಯ ಪೂರ ಹರಿದಿರುತ್ತದೆ. ಮಗುವಿನ ಉಜ್ಜ್ವಲ ಭವಿಷ್ಯದ ಬೀಜಾವಾಪವೇ ಕೋಪದ ಮೂಲ. ದಕ್ಷನ ಅದಕ್ಷ ತಲೆ ಉರುಳಿತೆ? ದಕ್ಷನಿಗೆ ದಕ್ಷವಾದ ಶೀರ್ಷ ಕೂಡಿಸಿದ; ದ್ವೇಷ-ಈರ್ಷ್ಯಗಳ, ದ್ರೋಹ-ಆಕ್ರೋಶಗಳ ಶಿರಸ್ಸು ಉರುಳಿಸಿದ. ಅರಿವು-ಅನುಸಂಧಾನಗಳ, ಭಕ್ತಿ-ವಿರಕ್ತಿಗಳ ಬಲವಾಗಬೇಕಾಗಿ ಅಜದ ಆಸ್ಯ ಜೋಡಿಸಿದ. ಹರಿ-ಹರ-ಅಜರ ಸನ್ನಿಧಾನದಲ್ಲಿ ದಕ್ಷ-ಅಧ್ವರ ಸಾಂಗೋ-ಪಾಂಗವಾಗಿ ಸಮಾಪ್ತವಾಯಿತು. ಪೂರ್ಣಾಹುತಿ ಅವಭೃಥಗಳು ಸಂಪನ್ನಗಳಾದವು.

''ಸವ'' ಎಂದರೆ ಯಜ್ಞ. ''ಸ+ವ'' - (ಸ) ಸಾರನಾದ, ಹರಿಗುರುಗಳ (ವ) ಜ್ಞಾನವುಳ್ಳ 'ಸವಿ' ಎನಿಸಿದ ದಕ್ಷನನ್ನು ''ತೃ'' = ಅತಾರಯತ್ - ಸಮಸ್ಯೆಯ ಅಕ್ಷಯಸಾಗರದಿಂದ ದಾಟಿಸಿದ.

ದೇವರು ಸರ್ವೋತ್ತಮ ಎಂದು ಭಾಗವತದ ಚತುರ್ಥಸ್ಕಂಧದ ಸಾರಸರ್ವಸ್ವವನ್ನು ಗಾಯತ್ರೀಮಾತೆ ''ಸವಿ + ತಾ'' ಎಂಬ ಶಬ್ದದಿಂದ ಹೃದ್ಯವಾಗಿ ಸೆರೆ ಹಿಡಿದಿದ್ದಾಳೆ.

*****

# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೪೦

(ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು**
**ಭಂಡಾರಕೇರಿಮಠ**

## ನಂದಗೋಪಪ್ರಿಯಾತ್ಮಜಃ

ಸಭಾರ್ಯೇಣ ದ್ರೋಣವಸುನಾ ತಪಸಾ ತೋಷಿತಸ್ಯ, ಭಗವತ್ಪುತ್ರತ್ವವರಂ ತಸ್ಮೈ ದತ್ತವತಃ ಚತುರ್ಮುಖಸ್ಯ ಪ್ರಾರ್ಥನಾಂ ಮಾನಯಾನಃ ದ್ರೋಣವಸ್ವಂಶಸ್ಯ ನಂದ-ಗೋಪಸ್ಯ ಪ್ರಿಯಪುತ್ರತ್ವಂ ಪ್ರಾಪ್ತ ಇತ್ಯರ್ಥಃ । ತಥಾ ಚೋಕ್ತಮ್ ಮಹಾಭಾರತ-ತಾತ್ಪರ್ಯನಿರ್ಣಯೇ –

**''ತತ್ ತ್ವಂ ಭವಸ್ವಾಶು ಚ ದೇವಕೀಸುತಸ್ತಥೈವ ಯೋ ದ್ರೋಣನಾಮಾ ವಸುಃ ಸಃ ।**
**ಸ್ವಭಾರ್ಯಯಾ ಧರಯಾ ತ್ವತ್ಪಿತೃತ್ವಂ ಪ್ರಾಪ್ತುಂ ತಪಸ್ತೇಪ ಉದಾರಮಾನಸಃ ॥**
**ತಸ್ಮೈ ವರಃ ಸ ಮಯಾ ಸನ್ನಿಸೃಷ್ಟಃ ಸ ಚಾಸ ನಂದಾಖ್ಯ ಉತಾಸ್ಯ ಭಾರ್ಯಾ ।''**
**ಇತಿ ಏಕಾದಶೇ (೨೨೫,೨೨೬)**

ಅತ್ರ ನಂದಗೋಪಪ್ರಿಯಪುತ್ರತ್ವಂ ಪ್ರಾಪ್ತುಂ ತಸ್ಮೈ ದತ್ತವರಶ್ಚತುರ್ಮುಖಃ ಭಗವಂತಂ ಪ್ರಾರ್ಥಯಾಮಾಸ ಇತ್ಯುಕ್ತಮ್ ।

ಅಥವಾ ನಂದಗೋಪಸ್ಯ ಪ್ರಿಯಾ = ಸ್ವಪ್ರಿಯಾ ದುರ್ಗಾ, ಆತ್ಮಜಾ = ಪುತ್ರೀ ಯೇನ ಭಗವತಾ ಭವತಿ ಸಃ ನಂದಗೋಪಪ್ರಿಯಾತ್ಮಜಃ । ಭಗವತ ಆದೇಶಾದೇವ ಹಿ ಭಗವತ್ಪ್ರಿಯಾ ದುರ್ಗಾ ನಂದಗೋಪಪುತ್ರೀತ್ವೇನ ಪ್ರಾದುರ್ಬಭೂವ । ತಥಾ ಚೋಕ್ತಂ ದಶಮೇ ಭಾಗವತೇ –

**''ಅಥಾಹಂ ಸ್ವಾಂಶಭಾಗೇನ ದೇವಕ್ಯಾಂ ಪುತ್ರತಾಂ ಶುಭೇ ।**
**ಪ್ರಾಪ್ಸ್ಯಾಮಿ ತ್ವಂ ಯಶೋದಾಯಾಂ ನಂದಪತ್ನ್ಯಾಂ ಭವಿಷ್ಯಸಿ ॥''**
**(ತೃತೀಯಾಧ್ಯಾಯೇ - ೧೦)**

ತಥೈವ ಮಹಾಭಾರತತಾತ್ಪರ್ಯನಿರ್ಣಯೇ ಚ –

**''ತದೈವ ಜಾತಾ ಚ ಹರೇರನುಜ್ಞಯಾ ದುರ್ಗಾಭಿಧಾ ಶ್ರೀರನು ನಂದಪತ್ನ್ಯಾಮ್''** ಇತಿ।

ಏವಂ ಚ ಭಗವಾನ್ ಶ್ರೀಕೃಷ್ಣೋ ನ ಕೇವಲಂ ಸ್ವಾತ್ಮಾನಂ ಪುತ್ರತ್ವೇನ ದತ್ವಾ ನಂದಯಶೋದೇ ರಮಯಾಮಾಸ, ಅಪಿ ತು ಸ್ವಪತ್ನೀಭೂತಾಂ ದುರ್ಗಾಮಪಿ ಪುತ್ರೀತ್ವೇನ ದತ್ವಾ ತೌ ಆನಂದಂ ನೀತವಾನ್ ಇತಿ ನಂದಗೋಪಪ್ರಿಯಾತ್ಮಜಃ ಇತ್ಯಸ್ಯ ಹೃದಯಮ್ ।

ಅಥವಾ ನಂದಂ ಗೋಪಯತಿ ರಕ್ಷತಿ ವರುಣಭೃತ್ಯಪಾಶಾತ್, ತಥಾ ಅಂಬಿಕಾವನೇ ಅಜಗರಭಯಾಚ್ಚ ಇತಿ ನಂದಗೋಪಃ । ತಥಾ ಚೋಕ್ತಂ ದ್ವಿತೀಯೇ ಭಾಗವತೇ (ಸಪ್ತಮೇಽಧ್ಯಾಯೇ) –

**''ನಂದಂ ಚ ಮೋಕ್ಷ್ಯತಿ ಭಯಾತ್, ವರುಣಸ್ಯ ಪಾಶಾತ್''** ಇತಿ । ಮಹಾಭಾರತ–ತಾತ್ಪರ್ಯನಿರ್ಣಯೇ ಚ –

**''ಪೂರ್ವಂ ಯದಾ ಹ್ಯಜಗರೋ ನಿಜಗಾರ ನಂದಂ ಸರ್ವೇ ನ ಶೇಕುರಥ ತತ್ಪ್ರವಿಮೋಕ್ಷಣಾಯ ।**
**ಮತ್ಪಾದಸಂಸ್ಪರ್ಶತಃ ಸ ತದಾಽತಿದಿವ್ಯೋ ವಿದ್ಯಾಧರಸ್ತದುದಿತಂ ನಿಖಿಲಂ ಸ್ಮರಂತು ॥ ...**
**ನಂದಂ ಯದಾ ಚ ಜಗೃಹೇ ವರುಣಸ್ಯ ದೂತಸ್ತತ್ರಾಪಿ ಮಾಂ ಜಲಪತೇರ್ಗೃಹಮಾಶು ಯಾತಮ್ ।**
**ಸಂಪೂಜ್ಯ ವಾರಿಪತಿರಾಹ ವಿಮುಚ್ಯ ನಂದಂ ನಾಯಂ ಸುತಸ್ತವ ಪುಮಾನ್ ಪರಮಃ ಸ ಏಷಃ ॥''**
**(೧೪.೧೦೭, ೧೧೦)**

ಏಕಾದಶ್ಯಾಂ ನಿರಾಹಾರೋ ನಂದೋ ದ್ವಾದಶ್ಯಾಂ ಆಸುರವೇಲಾಯಾಂ ಸ್ನಾತುಂ ಕಾಲಿಂದೀಮಗಾತ್ । ತದಾ ವರುಣಭೃತ್ಯಃ ಕಶ್ಚನ ಅಸುರಃ ತಂ ನಿಬಧ್ಯ ವರುಣಲೋಕಂ ನೀತವಾನ್ । ತದಾ ಭಗವಾನ್ ಶ್ರೀಕೃಷ್ಣಃ ಶೀಘ್ರಂ ವರುಣಲೋಕಂ ಗತ್ವಾ ತತ್ರ ತೇನ ಭಕ್ತ್ಯಾ ಪೂಜಿತಃ ಸ್ವಪಿತರಂ ನಂದಂ ವಿಮೋಚ್ಯ ನಂದಗೋಕುಲಂ ಆನೀತವಾನ್ ।

ಅಂಬಿಕಾವನೇ ರಾತ್ರೌ ವ್ರತಾಂಗೋಪವಾಸಕರ್ಶಿತಂ ಸುಪ್ತಂ ನಂದಂ ಕಶ್ಚನ ಅಜಗರಃ ಗ್ರಸಿತುಂ ಉದ್ಯುಕ್ತಃ । ತದಾ ನಂದಂ ಅಜಗರಮುಖಾತ್ ಮೋಚಯಿತುಂ ತಂ ಉಲ್ಮುಕೈಃ ಗೋಪಾಲಾಃ ನಿಜಘ್ನುಃ । ತಥಾಽಪಿ ತೇ ನಂದಂ ಮೋಚಯಿತುಂ ನ ಶೇಕುಃ । ತದಾ ಭಗವಾನ್ ಸ್ವಪಾದೇನ ತಂ ಅಜಗರಂ ಸಂಸ್ಪೃಶ್ಯ ಸ್ವಭಕ್ತಂ ವಿದ್ಯಾಧರಂ ಶಾಪಪ್ರಾಪ್ತಾಜಗರದೇಹಾತ್ ವಿಮೋಚ್ಯ ನಂದಂ ಚ ವಿಮೋಚ್ಯ ರರಕ್ಷ । ತಸ್ಮಾತ್ ನಂದಂ ಗೋಪಯತಿ ರಕ್ಷತಿ ಅಜಗರಮುಖಾತ್ ವರುಣಭೃತ್ಯಪಾಶಾಚ್ಚ ಇತಿ ನಂದಗೋಪ ಇತಿ ಸಾಧೂಕ್ತೋ ಭಗವಾನ್ ಶ್ರೀಕೃಷ್ಣಃ ।

ಪ್ರಿಯಸ್ಯ = ಸ್ವಪ್ರಿಯಸ್ಯ ಸ್ವಭಕ್ತಸ್ಯ ಅಂಗಿರಸಃ ಶಾಪೇನ ಅಜಗರತ್ವಂ ಪ್ರಾಪ್ತಸ್ಯ ಸುದರ್ಶನಾಖ್ಯವಿದ್ಯಾಧರಸ್ಯ ಆತ್ಮಾನಂ = ದಿವ್ಯದೇಹಂ (''ಆತ್ಮಾ ಜೀವೇ ಧೃತೌ ದೇಹೇ'' ಇತ್ಯಭಿಧಾನಾತ್) ಜನಯತಿ = ಪ್ರಾದುರ್ಭಾವಯತಿ (ಜನಿ ಪ್ರಾದುರ್ಭಾವೇ ಇತಿ ಅಂತರ್ಣೀತಣಿಚ್ ಡಪ್ರತ್ಯಯಃ) ಪ್ರಕಾಶಯತೀತಿ ಇತಿ ಯಾವತ್ ಪ್ರಿಯಾತ್ಮಜಃ ಇತಿ ಭಗವಾನ್ ಶ್ರೀಕೃಷ್ಣಃ ಕಥಿತಃ ।

ಏವಂ ಚ ಭಗವಾನ್ ಶ್ರೀಕೃಷ್ಣಃ ನಂದಂ ಅಜಗರಾತ್ ಸಂರಕ್ಷ್ಯ ಸ್ವಪ್ರಿಯಂ ಸುದರ್ಶನವಿದ್ಯಾಧರಂ ಅಜಗರದೇಹಾತ್ ವಿಮೋಚ್ಯ ದಿವ್ಯದೇಹಂ ಪ್ರಕಾಶಯಾಮಾಸ ಇತಿ ''ನಂದಗೋಪಪ್ರಿಯಾತ್ಮಜಃ'' ಇತ್ಯಸ್ಯ ಹೃದಯಮ್ । ನಂದಗೋಪಶ್ಚಾಸೌ ಪ್ರಿಯಾತ್ಮಜಶ್ಚ ನಂದಗೋಪಪ್ರಿಯಾತ್ಮಜ ಇತಿ ವಿಗ್ರಹೋಽತ್ರ ಸ್ವೀಕರ್ತವ್ಯಃ । ತಥಾ

ಚೋಕ್ತಂ ಭಾಗವತೇ ದಶಮೇ –

**''ಸ ವೈ ಭಗವತಃ ಶ್ರೀಮತ್ಪಾದಸ್ಪರ್ಶಹತಾಶುಭಃ।**
**ಭೇಜೇ ಸರ್ಪವಪುರ್ಹಿತ್ವಾರೂಪಂ ವಿದ್ಯಾಧರಾರ್ಜಿತಮ್ ॥'' ಇತಿ।**

ಅಥವಾ ನಂದಸ್ಯ ಗೋಪಾನಾಂ ಚ (ಸ್ವ)ಪ್ರಿಯಃ = ಉದ್ಧವಃ = ಆತ್ಮಜಃ। ಆತ್ಮಾನಂ ಸ್ವಾತ್ಮಾನಂ ಸ್ವಸ್ವರೂಪಂ ಜನಯತಿ = ಪ್ರಾದುರ್ಭಾವಯತಿ ಪ್ರಕಾಶಯತಿ ಇತಿ ಆತ್ಮಜಃ = ಸ್ವಸ್ವರೂಪಪ್ರಕಾಶಕಃ ಯೇನ ಕೃಷ್ಣೇನ ಭವತಿ ಸಃ = ನಂದಗೋಪಪ್ರಿಯಾತ್ಮಜಃ। ಕಂಸಮರ್ದನಾರ್ಥಂ ಮಥುರಾಂ ಗತೇ ಭಗವತಿ ಶ್ರೀಕೃಷ್ಣೇ ಸ್ವವಿರಹಾಗ್ನಿನಾ ದಗ್ಧಾನಾಂ ನಂದ–ಗೋಪಾದೀನಾಂ ಸ್ವಾತ್ಮಸ್ವರೂಪೋಪದೇಶೇನ ದುಃಖಶಮನಾರ್ಥಂ ಸ್ವಪ್ರಿಯಂ ಉದ್ಧವಂ ಸ್ವಸಂದೇಶವಾಹಕಯಾ ವ್ರಜಂ ಪ್ರೇಷಯತಿ ಭಗವಾನ್ ಶ್ರೀಕೃಷ್ಣಃ। ತಥಾ ಚೋಕ್ತಂ ದಶಮೇ ಭಾಗವತೇ –

**''ಗಚ್ಛೋದ್ಧವ ವ್ರಜಂ ಸೌಮ್ಯ ಪಿತ್ರೋರ್ನಃ ಪ್ರೀತಿಮಾವಹ।**
**ಗೋಪೀನಾಂ ಮದ್ವಿಯೋಗಾಧಿಂ ಮತ್ಸಂದೇಶೈರ್ವಿಮೋಚಯ ॥''**
**ಇತಿ ಚತ್ವಾರಿಂಶೇಽಧ್ಯಾಯೇ।**

ತಥಾಚ ನಂದ–ಗೋಪಾನಾಂ ಪ್ರಿಯಃ = ಸ್ವಭಕ್ತಃ ಉದ್ಧವಃ ಆತ್ಮಜಃ = ಆತ್ಮಸ್ವರೂಪಪ್ರಕಾಶಕಃ ಯೇನ ಕೃಷ್ಣೇನ ಭವತಿ ಸಃ ಶ್ರೀಕೃಷ್ಣಃ ನಂದಗೋಪಪ್ರಿಯಾತ್ಮಜ ಇತಿ ಸಾರ್ಥಂ ಕೀರ್ತಿತ ಇತಿ ಸಿದ್ಧಮ್।

ಅಥವಾ, ನಂದ–ಗೋಪಾನಾಂ ಚ ಪ್ರಿಯಂ ಆನಂದಪ್ರದಂ ಆತ್ಮಾನಂ = ಸ್ವಲೋಕೇ ಸ್ವದಿವ್ಯಸ್ವರೂಪಂ ಜನಯತಿ = ಪ್ರಾದುರ್ಭಾವಯತಿ ಪ್ರಕಾಶಯತಿ ಇತಿ ನಂದಗೋಪಪ್ರಿಯಾತ್ಮಜಃ ಇತಿ ಕೀರ್ತಿತಃ ಶ್ರೀಕೃಷ್ಣಃ।

ವರುಣೇನ ಪೂಜಿತಂ ಕೃಷ್ಣಂ ದೃಷ್ಟ್ವಾ ವಿಸ್ಮಿತಃ ಕೃಷ್ಣಮಾಹಾತ್ಮ್ಯಂ ನಂದೋ ಗೋಪಾನಾಂ ವರ್ಣಯಾಮಾಸ। ತದಾ ತೇ ಗೋಪಾಃ ಶ್ರೀಕೃಷ್ಣಸ್ಯ ನಿಜಸ್ವರೂಪಂ ದಿದೃಕ್ಷವಃ ಸಂವೃತ್ತಾಃ। ತೇಷಾಂ ಸಂಕಲ್ಪಂ ಸಫಲೀಕರ್ತುಂ ಭಗವಾನ್ ಶ್ರೀಕೃಷ್ಣಃ ಯಮುನಾಯಾಃ ಬ್ರಹ್ಮಹ್ರದಂ ತಾನ್ ನೀತ್ವಾ ಸ್ವಾದೇಶೇನ ತತ್ರ ಮಗ್ನಾನಾಂ ನಂದ–ಗೋಪಾನಾಂ ವಿಕುಂಠಲೋಕೇ ಪ್ರಿಯಂ = ಆನಂದಪ್ರದಂ ಆತ್ಮಾನಂ = ಸ್ವದಿವ್ಯರೂಪಂ ಛಂದೋದೇವೈಃ ಸ್ತೂಯಮಾನಂ ಪ್ರಕಾಶಯಾಮಾಸ ಇತಿ ''ನಂದಗೋಪಪ್ರಿಯಾತ್ಮಜಃ'' ಇತಿ ನಾಮ್ನಃ ಹೃದಯಮ್। ತಥಾ ಚೋಕ್ತಂ ದಶಮೇ ಭಾಗವತೇ ಷಡ್ವಿಂಶೇಽಧ್ಯಾಯೇ –

**''ತೇ ತು ಬ್ರಹ್ಮಹ್ರದಂ ನೀತಾಃ ಮಗ್ನಾಃ ಕೃಷ್ಣಮಚಕ್ಷತ।**
**ದದೃಶುರ್ಬ್ರಹ್ಮಣೋ ಲೋಕಂ (ರೂಪಂ) ಯತ್ರಾಕ್ರೂರೋಽಧ್ಯಗಾತ್ ಪುರಾ ॥**
**ನಂದಾದಯಸ್ತು ತಂ ದೃಷ್ಟ್ವಾ ಪರಮಾನಂದನಿರ್ವೃತಾಃ।**
**ಕೃಷ್ಣಂ ಚ ತತ್ರ ಛಂದೋಭಿಃ ಸ್ತೂಯಮಾನಂ ಸುವಿಸ್ಮಿತಾಃ ॥'' ಇತಿ।**

ಅಥವಾ ನಂದಗೋಪಸ್ಯ ಪ್ರಿಯಂ ಕುಷ್ಠರೋಗನಿರ್ಮುಕ್ತತ್ವೇನ ಇಷ್ಟಂ ಆತ್ಮಾನಂ = ದೇಹಂ ಜನಯತಿ = ಪ್ರಕಾಶಯತಿ ಇತಿ ನಂದಗೋಪಪ್ರಿಯಾತ್ಮಜಃ ಇತಿ ಭಗವಾನ್ ಶ್ರೀಕೃಷ್ಣಃ ಕೀರ್ತಿತಃ ।

ನಂದಗೋಪರಾಜ್ಞಃ ಕುಷ್ಠರೋಗ ಆಸೀತ್ । ತಂ ಚ ದೂರೀಕೃತ್ಯ ಭಗವಾನ್ ಶ್ರೀಕೃಷ್ಣಃ ನಂದಗೋಪಕುಮಾರ ಇತಿ ಪ್ರಥಿತಃ ಇತಿ ಶ್ರೀವಿಜಯಧ್ವಜತೀರ್ಥಾಃ । ಏವಂಚ ನಂದಗೋಪರಾಜ್ಞಃ ದೇಹಸ್ಥಂ ಕುಷ್ಠರೋಗಂ ಪರಿಹೃತ್ಯ ತಸ್ಯ ದೇಹಸ್ಯ ಪ್ರಿಯತ್ವಂ ಸಂಪಾದಯನ್ ತಂ ದರ್ಶಯಾಮಾಸ ಇತಿ ಹೃದಯಮ್ । ತಥಾ ಚ ಶ್ರೀವಿಜಯಧ್ವಜ ತೀರ್ಥಕೃತಪದರತ್ನಾವಲ್ಯಾಮ್ –

''ನಂದಗೋಪನಾಮ್ನಃ ರಾಜ್ಞಃ ಕುತ್ಸಿತಂ ಕುಷ್ಠಂ ಮಾರಯತಿ – ನಾಶಯತಿ ಇತಿ ನಂದಗೋಪಕುಮಾರಃ। ತಸ್ಮೈ – ನಂದಗೋಪಕುಮಾರಾಯ। ಪುರಾಣಾಂತರಸಿದ್ಧಾರ್ಥ–ಮವಲಂಬ್ಯ ಕಥಿತೋಽಯಮರ್ಥಃ'' ಇತಿ ।

★★★★★

## ''ನಂದಗೋಪಪ್ರಿಯಾತ್ಮಜಃ''

ತನ್ನ ಹೆಂಡತಿಯಾದ ಧರೆಯೊಂದಿಗೆ ದ್ರೋಣವಸುವು ಮಾಡಿದ ತಪೋಽನುಷ್ಠಾನದಿಂದ ಬ್ರಹ್ಮದೇವನು ಪ್ರಸನ್ನನಾಗಿ ಆತನಿಗೆ ಭಗವಂತನನ್ನೇ ಪುತ್ರರೂಪದಲ್ಲಿ ಪಡೆಯುವಂತೆ ಅನುಗ್ರಹಿಸಿದನು. ಹೀಗಾಗಿ ಬ್ರಹ್ಮದೇವರ ಪ್ರಾರ್ಥನೆಯನ್ನು ಅಂಗೀಕರಿಸಿದ ಭಗವಂತನು ದ್ರೋಣವಸುಸ್ವರೂಪನಾದ ನಂದಗೋಪನಿಗೆ ಪ್ರಿಯಪುತ್ರನಾಗಿ ಸಂತೋಷಪಡಿಸಿದನು. ನಂದಗೋಪಸ್ಯ ಪ್ರಿಯಃ = ಆನಂದಪ್ರದಃ, ಆತ್ಮಜಃ = ಪುತ್ರಃ ''ನಂದಗೋಪಪ್ರಿಯಾತ್ಮಜಃ'' ಎಂಬುದಾಗಿ ಇಲ್ಲಿ ವಿಗ್ರಹವನ್ನು (ಅವಯವಾರ್ಥ ವಿಶ್ಲೇಷಣೆಯನ್ನು) ಸ್ವೀಕರಿಸಬೇಕು. ಈ ವಿಷಯವು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಉಕ್ತವಾಗಿದೆ –

**''ತತ್ ತ್ವಂ ಭವಸ್ವಾಶು ಚ ದೇವಕೀಸುತಸ್ತಥೈವ ಯೋ ದ್ರೋಣನಾಮಾ ವಸುಃ ಸಃ ।**
**ಸ್ವಭಾರ್ಯಯಾ ಧರಯಾ ತ್ವತ್ಪಿತೃತ್ವಂ ಪ್ರಾಪ್ತುಂ ತಪಸ್ತೇಪ ಉದಾರಮಾನಸಃ ॥**

**ತಸ್ಮೈ ವರಃ ಸ ಮಯಾ ಸನ್ನಿಸೃಷ್ಟಃ ಸ ಚಾಸ ನಂದಾಖ್ಯ ಉತಾಸ್ಯ ಭಾರ್ಯಾ ।''**

(ಹನ್ನೊಂದನೆಯ ಅಧ್ಯಾಯ, ೨೨೫,೨೨೬ ಶ್ಲೋಕಗಳು)

ಇಲ್ಲಿ ಬ್ರಹ್ಮದೇವನು ಮೇರುಪರ್ವತದಲ್ಲಿ ಅವತಾರಕಾರ್ಯ ಸಮಾಲೋಚನಾ–ಸಭೆಯಲ್ಲಿ ದ್ರೋಣವಸುವಿಗೆ ಭಗವಂತನೇ ಪುತ್ರನಾಗಿ ದೊರೆಯುವಂತೆ ಅನುಗ್ರಹಿಸಿದ ಪ್ರಯುಕ್ತ ''ದ್ರೋಣವಸುಸ್ವರೂಪನಾದ ನಂದನಿಗೂ ನೀನು ಪುತ್ರರೂಪನಾಗಿ ಆನಂದಪಡಿಸು ಎಂದು ಪ್ರಾರ್ಥಿಸಿದ'' ಎಂದು ಉಲ್ಲೇಖವಿದೆ.

ಅಥವಾ ''ನಂದಗೋಪಸ್ಯ ಪ್ರಿಯಾ = ಸ್ವಪ್ರಿಯಾ ದುರ್ಗಾ ಏವ ಆತ್ಮಜಾ = ಪುತ್ರೀ ಯೇನ (ಭಗವತಾ) ಭವತಿ ಸ ತಥೋಕ್ತಃ'' ಎಂಬುದಾಗಿ ಇಲ್ಲಿ ನಂದಗೋಪಪ್ರಿಯಾತ್ಮಜ

ಶಬ್ದದ ಅವಯವಾರ್ಥವಿಶ್ಲೇಷಣೆಯನ್ನು ಸ್ವೀಕರಿಸಬೇಕು. ಭಗವಂತನ ಆದೇಶದಿಂದಲೇ ಭಗವತ್ಪ್ರಿಯಳಾದ ದುರ್ಗೆಯು ನಂದಗೋಪನ ಪುತ್ರಿಯಾಗಿ ಪ್ರಾದುರ್ಭವಿಸಿದಳು. ನಂದಗೋಪನಿಗೆ ತಾನು ಪುತ್ರನಾಗಿ ಆನಂದಪಡಿಸಿದರೆ ತನ್ನ ಹೆಂಡತಿಯಾದ ದುರ್ಗೆ-ಯನ್ನು ಪುತ್ರೀರೂಪದಲ್ಲಿ ನೀಡಿ ಅನುಗ್ರಹಿಸಿದನೆಂದು ''ನಂದಗೋಪಪ್ರಿಯಾತ್ಮಜ'' ಶಬ್ದದ ಹೃದಯ. ಈ ವಿಷಯವು ದಶಮಸ್ಕಂಧದ ಭಾಗವತದಲ್ಲಿ ಉಲ್ಲೇಖಗೊಂಡಿದೆ –

**''ಅಥಾಹಂ ಸ್ವಾಂಶಭಾಗೇನ ದೇವಕ್ಯಾಂ ಪುತ್ರತಾಂ ಶುಭೇ ।**
**ಪ್ರಾಪ್ಸ್ಯಾಮಿ ತ್ವಂ ಯಶೋದಾಯಾಂ ನಂದಪತ್ನ್ಯಾಂ ಭವಿಷ್ಯಸಿ ॥''**

**(ಮೂರನೇ ಅಧ್ಯಾಯ, ಶ್ಲೋಕ ೧೦)**

ಮಹಾಭಾರತತಾತ್ಪರ್ಯನಿರ್ಣಯದ ಈ ಕೆಳಗೆ ಉಲ್ಲೇಖಿಸಲ್ಪಟ್ಟ ಶ್ಲೋಕವು ಈ ವಿಷಯದಲ್ಲಿ ಸಂವಾದಿಯಾಗುತ್ತದೆ –

**''ತದೈವ ಜಾತಾ ಚ ಹರೇರನುಜ್ಞಯಾ ದುರ್ಗಾಭಿಧಾ ಶ್ರೀರನು ನಂದಪತ್ನ್ಯಾಮ್'' ಇತಿ ।**

ಅಥವಾ ''ನಂದಂ ಗೋಪಯತಿ – ರಕ್ಷತಿ ('ಗುಪೂ ರಕ್ಷಣೇ') ವರುಣಭೃತ್ಯಪಾಶಾತ್, ಅಂಬಿಕಾವನೇ ಅಜಗರಭಯಾಚ್ಚ ಇತಿ ಭಗವಾನ್ ಶ್ರೀಕೃಷ್ಣಃ ನಂದಗೋಪ ಇತಿ ಅನ್ವರ್ಥಂ ಪ್ರಕೀರ್ತಿತಃ''.

ನಂದನನ್ನು ವರುಣಭೃತ್ಯ ಪಾಶದಿಂದ ಮತ್ತು ಅಂಬಿಕಾವನದಲ್ಲಿ ಹೆಬ್ಬಾವಿನ ಭಯದಿಂದ ಸಂರಕ್ಷಿಸುತ್ತಾನೆ. ಆದುದರಿಂದ ನಂದಂ ಗೋಪಯತೀತಿ ''ನಂದಗೋಪ'' ಎಂಬುದಾಗಿ ಸಾರ್ಥಕವಾಗಿ ಭಗವಾನ್ ಶ್ರೀಕೃಷ್ಣನು ಕೀರ್ತಿತನಾಗಿದ್ದಾನೆ.

ಈ ವಿಷಯವು ದ್ವಿತೀಯಸ್ಕಂಧ ಭಾಗವತದ ಏಳನೇ ಅದ್ಯಾಯದಲ್ಲಿ ಉಲ್ಲೇಖಗೊಂಡಿದೆ –

**''ನಂದಂ ಚ ಮೋಕ್ಷ್ಯತಿ ಭಯಾತ್, ವರುಣಸ್ಯ ಪಾಶಾತ್'' ಇತಿ ।**

ಈ ವಿಷಯದಲ್ಲಿ ಮಹಾಭಾರತತಾತ್ಪರ್ಯನಿರ್ಣಯ ವಚನವು ಸಂವಾದಿಯಾಗುತ್ತದೆ –

**''ಪೂರ್ವಂ ಯದಾ ಹ್ಯಜಗರೋ ನಿಜಗಾರ ನಂದಂ ಸರ್ವೇ ನ ಶೇಕುರಥ ತತ್ಪ್ರವಿಮೋಕ್ಷಣಾಯ ।**
**ಮತ್ಪಾದಸಂಸ್ಪರ್ಶತಃ ಸ ತದಾಽತಿದಿವ್ಯೋ ವಿದ್ಯಾಧರಸ್ತದುದಿತಂ ನಿಖಿಲಂ ಸ್ಮರಂತು ॥ ...**
**ನಂದಂ ಯದಾ ಚ ಜಗೃಹೇ ವರುಣಸ್ಯ ದೂತಸ್ತತ್ರಾಪಿ ಮಾಂ ಜಲಪತೇರ್ಗೃಹಮಾಶು ಯಾತಮ್ ।**
**ಸಂಪೂಜ್ಯ ವಾರಿಪತಿರಾಹ ವಿಮುಚ್ಯ ನಂದಂ ನಾಯಂ ಸುತಸ್ತವ ಪುಮಾನ್ ಪರಮಃ ಸ ಏಷಃ ॥''**

(೧೪.೧೦೭, ೧೧೦)

ಏಕಾದಶಿಯಲ್ಲಿ ಉಪವಾಸ ಮಾಡಿದ ನಂದನು ದ್ವಾದಶಿಯಂದು ಅಸುರ-ಸಂಚಾರಕಾಲದಲ್ಲಿ ಸ್ನಾನಮಾಡಲು ಯಮುನೆಗೆ ತೆರಳಿದನು. ಆಗ ವರುಣ ಭೃತ್ಯನಾದ ಓರ್ವ ಅಸುರನು ಆತನನ್ನು ಬಂಧಿಸಿ ವರುಣಲೋಕಕ್ಕೆ ತೆಗೆದುಕೊಂಡು ಹೋದನು.

ಆಗ ನಂದಗೋಕುಲದ ಗೋಪಾಲಕರು ಆತಂಕಕ್ಕೊಳಗಾದಾಗ ಭಗವಾನ್ ಶ್ರೀಕೃಷ್ಣನು ಶೀಘ್ರವಾಗಿ ವರುಣಲೋಕಕ್ಕೆ ಹೋದನು. ಅಲ್ಲಿ ವರುಣನಿಂದ ಪೂಜಿತನಾಗಿ ಗೌರವ-ದಿಂದ ತನ್ನ ತಂದೆಯನ್ನು ವರುಣಭೃತ್ಯನ ಪಾಶದಿಂದ ಬಿಡಿಸಿ ಸುರಕ್ಷಿತವಾಗಿ ನಂದವ್ರಜಕ್ಕೆ ಕರೆದುಕೊಂಡು ಬಂದನು. ಅಂಬಿಕಾವನದಲ್ಲಿ ವ್ರತಾಂಗ ಉಪವಾಸದಿಂದ ಕೃಶನಾಗಿ ರಾತ್ರಿ ನಂದನು ಮಲಗಿದಾಗ ಒಂದು ಹೆಬ್ಬಾವು ಆತನನ್ನು ನುಂಗಲು ಉದ್ಯುಕ್ತವಾಯಿತು. ಆಗ ಆತನು ಕೂಗಿಕೊಂಡಾಗ ಎಲ್ಲಾ ಗೋಪಾಲರು ಸೇರಿ ಆತನನ್ನು ಅಜಗರದಿಂದ ಬಿಡಿಸಲು ಪಂಜುಗಳಿಂದ ಅದನ್ನು ಹೊಡೆದರು. ಆದರೆ ಎಷ್ಟೇ ಪ್ರಯತ್ನ ಪಟ್ಟರೂ ಅವರು ಹೆಬ್ಬಾವಿನಿಂದ ನಂದನನ್ನು ಬಿಡಿಸಿ ಸಂರಕ್ಷಿಸಲು ಶಕ್ತರಾಗಲಿಲ್ಲ. ಆಗ ಭಗವಾನ್ ಶ್ರೀಕೃಷ್ಣನೇ ತನ್ನ ಪಾದಸ್ಪರ್ಶದಿಂದ ಅಂಗೀರಸರ ಶಾಪದಿಂದ ಪ್ರಾಪ್ತವಾದ ಆ ಅಜಗರದೇಹದಿಂದ ಸ್ವಪ್ರಿಯನಾದ ''ಸುದರ್ಶನ'' ಎಂಬ ವಿದ್ಯಾಧರನನ್ನು ವಿಮೋಚನೆಗೊಳಿಸಿ ತನ್ನ ತಂದೆಯಾದ ನಂದನನ್ನು ಅಜಗರಗ್ರಾಸದಿಂದ ಸಂರಕ್ಷಿಸಿದನು.

ನಂದಂ = ನಂದನನ್ನು ಗೋಪಯತಿ = ಅಜಗರ ಮುಖದಿಂದ ರಕ್ಷಿಸುತ್ತಾನೆ ಮತ್ತು ವರುಣಭೃತ್ಯನ ಪಾಶದಿಂದಲೂ ಮೋಚನೆಗೊಳಿಸಿ ಸಂರಕ್ಷಿಸುತ್ತಾನೆ ಎಂಬುದಾಗಿ ಅನ್ವರ್ಥವಾಗಿ ''ನಂದಗೋಪ'' ಪದದಿಂದ ಕೀರ್ತಿತನಾಗಿದ್ದಾನೆ.

**''ಪ್ರಿಯಾತ್ಮಜಃ ''**

ಪ್ರಿಯಸ್ಯ = ಸ್ವಭಕ್ತನಾದ ಅಂಗೀರಸರ ಶಾಪದಿಂದ ಅಜಗರತ್ವವನ್ನು ಪಡೆದ ಸುದರ್ಶನ ಎಂಬ ವಿದ್ಯಾಧರನ ಆತ್ಮಾನಂ = ದಿವ್ಯದೇಹವನ್ನು (ಆತ್ಮಾ ಜೀವೇ ಧೃತೌ ದೇಹೇ ಎಂಬ ಕೋಶಾನುಸಾರವಾಗಿ ಆತ್ಮಶಬ್ದವು ದೇಹವಾಚಿಯೂ ಆಗಿದೆ) ಜನಯತಿ(ಜನಿ ಪ್ರಾದುರ್ಭಾವೇ) ಪ್ರಾದುರ್ಭಾವಯತಿ ಅರ್ಥಾತ್ ಪ್ರಕಾಶಯತೀತಿ ಪ್ರಕಟಪಡಿಸುತ್ತಾನೆಂದು ''ಪ್ರಿಯಾತ್ಮಜಃ'' ಎಂಬುದಾಗಿ ಭಗವಾನ್ ಶ್ರೀಕೃಷ್ಣನು ಅನ್ವರ್ಥವಾಗಿ ಕೀರ್ತಿತನಾಗಿದ್ದಾನೆ.

ಒಟ್ಟಿನಲ್ಲಿ ಭಗವಾನ್ ಶ್ರೀಕೃಷ್ಣನು ನಂದನನ್ನು ಹೆಬ್ಬಾವಿನಿಂದ ಸಂರಕ್ಷಿಸಿ ಪ್ರಿಯನಾದ (ತನ್ನ ಭಕ್ತನಾದ) ಸುದರ್ಶನವೆಂಬ ವಿದ್ಯಾಧರನನ್ನು ಶಾಪಪ್ರಾಪ್ತವಾದ ಅಜಗರದೇಹದಿಂದ ಬಿಡಿಸಿ ಆತನ ದಿವ್ಯದೇಹವನ್ನು ಪ್ರಕಟಪಡಿಸುತ್ತಾನೆಂದು ನಂದಗೋಪಪ್ರಿಯಾತ್ಮಜಃ ಎಂಬ ನಾಮದ ಹೃದಯ.

ಈ ವಿಷಯವು ದಶಮಸ್ಕಂಧ ಭಾಗವತದಲ್ಲಿ ಉಲ್ಲೇಖಗೊಂಡಿದೆ –

**''ಸ ವೈ ಭಗವತಃ ಶ್ರೀಮತ್ಪಾದಸ್ಪರ್ಶಹತಾಶುಭಃ ।**
**ಭೇಜೇ ಸರ್ಪವಪುರ್ಹಿತ್ವಾರೂಪಂ ವಿದ್ಯಾಧರಾರ್ಜಿತಮ್ ॥'' ಇತಿ ।**

**(೧೦.೩೨.೯)**

ಇಲ್ಲಿ ನಂದಗೋಪಶ್ಚಾಸೌ ಪ್ರಿಯಾತ್ಮಜಶ್ಚ 'ನಂದಗೋಪಪ್ರಿಯಾತ್ಮಜಃ'' ಎಂಬುದಾಗಿ ವಿಗ್ರಹವನ್ನು ಸ್ವೀಕರಿಸಬೇಕು.

ಅಥವಾ

ನಂದಗೋಪಾನಾಂ = ನಂದಗೋಪಾಲಕರಿಗೆ ಪ್ರಿಯಃ = (ಸ್ವ)ಪ್ರಿಯನಾದ ಭಕ್ತ ಉದ್ಧವನು ಆತ್ಮಜಃ = ಆತ್ಮಾನಂ ಜನಯತಿ – ಪ್ರಾದುರ್ಭಾವಯತಿ – ಪ್ರಕಾಶಯತಿ ಇತಿ ಆತ್ಮಜಃ = ಆತ್ಮಸ್ವರೂಪಪ್ರಕಾಶಕನು ಆಗುತ್ತಾನೆ, ಯೇನ = ಯಾವ ಕೃಷ್ಣನಿಂದ ಸಃ = ಆ ಕೃಷ್ಣನೇ ನಂದಗೋಪಪ್ರಿಯಾತ್ಮಜಃ ಎಂದು ಕೀರ್ತಿತನಾಗಿದ್ದಾನೆ.

ಕಂಸಮರ್ದನಕ್ಕಾಗಿ ಭಗವಾನ್ ಶ್ರೀಕೃಷ್ಣನು ಮಥುರೆಗೆ ಹೋಗಿ ಕಾರ್ಯಗೌರವದಿಂದ ಅಲ್ಲಿಯೇ ನೆಲೆಸುತ್ತಾನೆ.

ಆಗ ಆತನ ವಿರಹಾಗ್ನಿಯಿಂದ ಸಂತಪ್ತರಾದ ನಂದಗೋಪಾಲಕರು ಹಾಗೂ ಗೋಪಿ–ಯರ ಸ್ವಸ್ವರೂಪೋಪದೇಶದ ಮೂಲಕ ದುಃಖ ಶಮನಕಾರ್ಯಕ್ಕಾಗಿ ಸ್ವಸಂದೇಶ–ವಾಹಕರೂಪದಲ್ಲಿ ಸ್ವಪ್ರಿಯನಾದ ಉದ್ಧವನನ್ನು ನಂದವ್ರಜಕ್ಕೆ ಭಗವಾನ್ ಶ್ರೀಕೃಷ್ಣನು ಕಳುಹಿಸುತ್ತಾನೆ.

ಈ ವಿಷಯವು ದಶಮಭಾಗವತದಲ್ಲಿ ಉಲ್ಲಿಖಿತವಾಗಿದೆ –

**''ಗಚ್ಛೋದ್ಧವ ವ್ರಜಂ ಸೌಮ್ಯ ಪಿತ್ರೋರ್ನಃ ಪ್ರೀತಿಮಾವಹ ।**
**ಗೋಪೀನಾಂ ಮದ್ವಿಯೋಗಾಧಿಂ ಮತ್ಸಂದೇಶೈರ್ವಿಮೋಚಯ ॥**''ಇತಿ

೪೪ನೇ ಅಧ್ಯಾಯ.

ಒಟ್ಟಿನಲ್ಲಿ ಯಾರಿಂದಾಗಿ ನಂದಗೋಪಾಲಕರಿಗೆ ಭಗವತ್ಪ್ರಿಯನಾದ ಉದ್ಧವನು ಆತ್ಮಸ್ವರೂಪಪ್ರಕಾಶಕನು ಆದನೋ, ಆ ಶ್ರೀಕೃಷ್ಣನೇ 'ನಂದಗೋಪಪ್ರಿಯಾತ್ಮಜಃ' ಎಂದು ಸಾರ್ಥಕವಾಗಿ ಕೀರ್ತಿತನಾಗಿದ್ದಾನೆ ಎಂದು ಸಿದ್ಧವಾಯಿತು.

ಅಥವಾ

ನಂದಗೋಪಾನಾಂಚ ಪ್ರಿಯಂ = ಆನಂದಪ್ರದವಾದ ಆತ್ಮಾನಂ = ತನ್ನ ವಿಕುಂಠಲೋಕದಲ್ಲಿ ತನ್ನ ದಿವ್ಯರೂಪವನ್ನು ಜನಯತಿ = ಪ್ರಕಾಶಯತಿ = ಪ್ರಕಟ ಪಡಿಸುತ್ತಾನೆಂದು ನಂದಗೋಪಪ್ರಿಯಾತ್ಮಜಃ ಎಂದು ಭಗವಾನ್ ಶ್ರೀಕೃಷ್ಣನು ಕೀರ್ತಿತನಾಗಿದ್ದಾನೆ.

ತನ್ನನ್ನು ವರುಣಪಾಶದಿಂದ ಬಿಡಿಸಲು ವರುಣಲೋಕಕ್ಕೆ ಧಾವಿಸಿದ, ಆತನಿಂದ ಪೂಜಿತನಾದ ಭಗವಾನ್ ಶ್ರೀಕೃಷ್ಣನನ್ನು ನೋಡಿ ವಿಸ್ಮಿತನಾದ ನಂದನು ತಾನು ವರುಣಲೋಕದಲ್ಲಿ ಅನುಭವಿಸಿದ ಶ್ರೀಕೃಷ್ಣನ ಮಾಹಾತ್ಮ್ಯೆಯನ್ನು ಗೋಪಾಲಕರಿಗೆ ವರ್ಣಿಸಿದನು. ಆಗ ಆ ಗೋಪಾಲಕರು ಭಗವಾನ್ ಶ್ರೀಕೃಷ್ಣನ ಸೂಕ್ಷ್ಮ ದಿವ್ಯಸ್ವರೂಪವನ್ನು ನೋಡಲು ಬಯಸಿದರು. ಅವರ ಸಂಕಲ್ಪವನ್ನು ಸಫಲಗೊಳಿಸುವ ಉದ್ದೇಶದಿಂದ ಯಮುನೆಯ ಬ್ರಹ್ಮಹ್ರದದಲ್ಲಿ ಅವರನ್ನು ಮುಳುಗಿಸಿ ವೈಕುಂಠಲೋಕದಲ್ಲಿ ವಿರಾಜಮಾನ–

ರಾದ ವೇದಾಭಿಮಾನಿಗಳಿಂದ ಸ್ತುತಿಸಲ್ಪಡುತ್ತಿರುವ ತನ್ನ ದಿವ್ಯರೂಪವನ್ನು ಪ್ರಕಟಪಡಿಸಿ ಆನಂದಪಡಿಸಿದನು ಎಂದು 'ನಂದಗೋಪಪ್ರಿಯಾತ್ಮಜಃ'' ಶಬ್ದದ ಹೃದಯವಾಗಿದೆ.

ಈ ವಿಷಯವು ದಶಮಭಾಗವತದ ೨೬ನೇ ಅಧ್ಯಾಯದಲ್ಲಿ ಪ್ರಸ್ತುತವಾಗಿದೆ –

**''ತೇ ತು ಬ್ರಹ್ಮಹ್ರದಂ ನೀತಾಃ ಮಗ್ನಾಃ ಕೃಷ್ಣಮಾಚಕ್ಷತ ।**
**ದದೃಶುರ್ಬ್ರಹ್ಮಣೋ ಲೋಕಂ (ರೂಪಂ) ಯತ್ರಾಕ್ರೂರೋಽಧ್ಯಗಾತ್ ಪುರಾ ॥**
**ನಂದಾದಯಸ್ತು ತಂ ದೃಷ್ಟ್ವಾ ಪರಮಾನಂದನಿರ್ವೃತಾಃ ।**
**ಕೃಷ್ಣಂ ಚ ತತ್ರ ಛಂದೋಭಿಃ ಸ್ತೂಯಮಾನಂ ಸುವಿಸ್ಮಿತಾಃ ॥'' ಇತಿ ।**

ಅಥವಾ

ನಂದಗೋಪಸ್ಯ = ನಂದಗೋಪರಾಜನಿಗೆ ಪ್ರಿಯಂ = ಕುಷ್ಠರೋಗದಿಂದ ದೂರವಾದುದರಿಂದ (ಹಿಂದೆ ಜಿಗುಪ್ಸಿತವಾದರೂ) ಇಷ್ಟವೆನಿಸಿದ ಆತ್ಮಾನಂ = ದೇಹವನ್ನು ಜನಯತಿ – ಪ್ರಾದುರ್ಭಾವತಿ – ಪ್ರಕಾಶಯತಿ = ಪ್ರಕಾಟಪಡಿಸುತ್ತಾನೆಂದು 'ನಂದ-ಗೋಪಪ್ರಿಯಾತ್ಮಜಃ' ಎಂದು ಸಾರ್ಥಕವಾಗಿ ಭಗವಾನ್ ಶ್ರೀಕೃಷ್ಣನು ಕೀರ್ತಿತನಾಗಿದ್ದಾನೆ.

ನಂದಗೋಪರಾಜನಿಗೆ ಕುಷ್ಠರೋಗ ಇತ್ತು. ಅದನ್ನು ಭಗವಾನ್ ಶ್ರೀಕೃಷ್ಣನು ದೂರಮಾಡಿ ನಂದಗೋಪಕುಮಾರನೆಂದು ಕೀರ್ತಿತನಾಗಿದ್ದಾನೆಂದು ವಿಜಯಧ್ವಜ-ತೀರ್ಥರು ತಿಳಿಸಿದ್ದಾರೆ.

ಶ್ರೀವಿಜಯಧ್ವಜತೀರ್ಥರ ಪದರತ್ನಾವಲಿಯ ಮಾತು ಈ ರೀತಿಯಾಗಿದೆ –

ನಂದಗೋಪನಾಮ್ನಃ – ರಾಜ್ಞಃ ಕುತ್ಸಿತಂ ಕುಷ್ಠಂ ಮಾರಯತಿ – ನಾಶಯತೀತಿ ನಂದಗೋಪಕುಮಾರಃ ತಸ್ಮೈ ನಂದಗೋಪಕುಮಾರಾಯ. ಪುರಾಣಾಂತರಸಿದ್ಧಾರ್ಥ-ಮವಲಂಬ್ಯ ಕಥಿತೋಽಯಮರ್ಥಃ ಇತಿ.

ಒಟ್ಟಿನಲ್ಲಿ ವಿಜಯಧ್ವಜತೀರ್ಥರ ಪದರತ್ನಾವಲಿಯ ಆಧಾರದಿಂದ ನಂದಗೋಪ-ರಾಜನಿಗೆ ದೇಹಸ್ಥವಾದ ಕುಷ್ಠರೋಗವನ್ನು ಭಗವಾನ್ ಶ್ರೀಕೃಷ್ಣನು ದೂರಮಾಡಿ ಹಿಂದೆ ಕುಷ್ಠರೋಗದಿಂದ ಜಿಗುಪ್ಸಿತವಾಗಿದ್ದ ದೇಹವನ್ನು ಈಗ ಇಷ್ಟವಾಗುವಂತೆ ಮಾಡಿ ಅದನ್ನು ತೋರಿಸಿದನೆಂದು ''ನಂದಗೋಪಪ್ರಿಯಾತ್ಮಜಃ'' ಶಬ್ದದ ಹೃದಯವನ್ನು ಹೇಳಬಹುದು.

*****

**ಶ್ರೀಪರಶುರಾಮಾರ್ಘ್ಯ ಮಂತ್ರ**
**(ಅಕ್ಷಯ್ಯ ತೃತೀಯಾ – ಪರಶುರಾಮಜಯಂತೀ)**

**ಜಮದಗ್ನಿಸುತೋ ವೀರ ಕ್ಷತ್ರಿಯಾಂತಕರ ಪ್ರಭೋ ।**
**ಗೃಹಾಣಾರ್ಘ್ಯಂ ಮಯಾ ದತ್ತಂ ಕೃಪಯಾ ಪರಮೇಶ್ವರ ॥**

# ಪ(ರ)ಶುರಾಮ
## (ಅನುಗ್ರಹ ಲೇಖನ)

**ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

ತಂದೆ – ಜಮದಗ್ನಿ ಮಹರ್ಷಿಗಳು ಅವರಿಗೆ ನಾಮಕರಣ ಮಾಡಿದ್ದು ''ರಾಮ'' ಎಂದು, ಮುಂದೆ ಅವರು ತಾವು ಮಾಡಿದ ಒಂದು ಮಹಾಕಾರ್ಯದಿಂದಾಗಿ ಇಂದಿಗೂ''ಪರಶುರಾಮ'' ಎಂದೆನಿಸಿಕೊಂಡು ಮೆರೆಯುತ್ತಿರುವುದು ಇತಿಹಾಸ. ಅದು ನಡೆದದ್ದು ಹೀಗೆ :–

ಹಿಂದೆ ಈ ಭೂಮಿಯಲ್ಲಿ ಕಾರ್ತವೀರ್ಯಾರ್ಜುನನೆಂಬ ಮಹಾಚಕ್ರವರ್ತಿಯೊಬ್ಬ ಆಗಿಹೋದ. ದತ್ತಾತ್ರೇಯರೂಪಿಯಾದ ಮಹಾವಿಷ್ಣುವಿನ ಪರಮಾನುಗ್ರಹಕ್ಕೆ ಪಾತ್ರನಾಗಿ ಮಹಾಪರಾಕ್ರಮಿಯಾಗಿ ಮೆರೆದ ಪುಣ್ಯಶಾಲಿ. ಭಗವದನುಗ್ರಹದಿಂದಾಗಿ ರಣಾಂಗಣ–ದಲ್ಲಿ ಬಯಸಿದಾಗ ಚಿಗಿತುಕೊಳ್ಳುವ ಸಹಸ್ರಬಾಹುಗಳು ಆತನಿಗೆ. ರಾವಣನಂತಹ ರಾವಣನನ್ನೇ ಹೆಡೆಮುರಿಕಟ್ಟಿ ಸೆರೆಯಲ್ಲೆಸೆದ ಪರಾಕ್ರಮಿ. ಇಂತಹ ವೀರನಿಗೂ ಅವಸಾನ–ಕಾಲ ಸಮೀಪಿಸಿದ್ದು ಆತನ ವಿಪರೀತಬುದ್ಧಿಯಿಂದಾಗಿ.

ಒಮ್ಮೆ ಬೇಟೆಯಾಡಿ ಬಸವಳಿದು ಕಾಡಿನಲ್ಲಿ ಮಹರ್ಷಿಗಳೊಬ್ಬರ ಆಶ್ರಮವನ್ನು ಹೊಕ್ಕ. ಸುದೈವವಶಾತ್ ಅಲ್ಲಿ ನೆಲೆಸಿ ತಪೋನಿರತರಾಗಿದ್ದವರು ಜಮದಗ್ನಿ ಮಹರ್ಷಿಗಳು. ಬಂದ ಅತಿಥಿಯನ್ನು ದೇವರನ್ನೆಂಬಂತೆ ಸತ್ಕರಿಸಿದರು. ಸಸ್ತ್ರೀಕಾಯ, ಸಪರಿವಾರಾಯ. ಎಲ್ಲರೂ ಉಂಡರು, ಕುಡಿದರು, ತಿಂದರು, ತೇಗಿದರು. ತಿಂದೂ ಉಂಡೂ ದಣಿದರು. ಏಕೆಂದರೆ, ಸಾಕ್ಷಾತ್ ಅಖಂಡ ಭೂಮಂಡಲದೊಡೆಯನಾದ ಆ ಚಕ್ರವರ್ತಿಯೂ, ತಾನು ತನ್ನ ಅರಮನೆಯಲ್ಲೂ ಈ ವೈಭವವನ್ನು ಎಂದೂ ಕಂಡದ್ದಿಲ್ಲ, ಉಂಡದ್ದಿಲ್ಲ.

ಹೊಟ್ಟೆತುಂಬಿದ ಬಳಿಕ ತಲೆ ಕೆಲಸಮಾಡಲಾರಂಭಿಸಿತು. ಈ ಮುನಿ ಈ ಅರಣ್ಯದಲ್ಲಿ ಇಂತಹ ಆತಿಥ್ಯವನ್ನು ನೀಡುವುದು ಸಾಧ್ಯವಾದದ್ದು ಹೇಗೆ? ಪ್ರಶ್ನೆಯನ್ನು ಮುನಿಗಳಲ್ಲೇ ಕೇಳಿದ. ಉತ್ತರರೂಪದಲ್ಲಿ ಅವರು ಕಾಮಧೇನುವನ್ನು ತೋರಿದ್ದರು. ರಾಜನ ರಾಜಸ–ಬುದ್ಧಿ ಜಾಗೃತವಾಯಿತು; ತಾಮಸಪ್ರವೃತ್ತಿಯನ್ನು ಮಾಡಿಸಿತು. ''ಅದು ಹೋಮದ ಕಾಮಧೇನುವೇ ಹೊರತು ಕಾಮದ ಕಾಮಧೇನುವಲ್ಲ'' ಎಂದು ಪರಿಪರಿಯಲ್ಲಿ ಬಿನ್ನವಿಸಿಕೊಂಡರೂ ಕೇಳದೆ, ಸ್ವಯಂ ಕಾಮಧೇನುವಿನ ಅಸಮ್ಮತಿಯನ್ನೂ ಲೆಕ್ಕಿಸದೆ, ಬಲಾತ್ಕರಿಸಿ ಸೆಳೆದೊಯ್ದ ತನ್ನರಮನೆಗೆ, ಭೋಗದ ಮನೆಗೆ.

ಬುದ್ಧಿ ಹೇಳಿ ತಿದ್ದಿ ಮರಳಿ ಆ ಹಸುವೆಂಬ ವಸ್ತುವನ್ನು ಯೋಗದ ಮನೆಗೆ ಸೇರಿಸೋಣವೆಂದು ಬಗೆದು ಮಗ – ರಾಮನು ರಾಜನ ಬಳಿ ಸಾರಿದರೆ ಬುದ್ಧಿಕೆಟ್ಟು

ಯುದ್ಧಸನ್ನದ್ಧನಾಗಿ ಸಮರವನ್ನೇ ಸಾರಿದನಾತ. ರಾಮನಾದರೋ ಮುಗಿಬಿದ್ದ ರಾಜನ ಸಹಸ್ರತೋಳುಗಳನ್ನು ತಾನೆತ್ತಿದ ಜಪಗೊಡಲಿಯಿಂದಲೇ ಕತ್ತರಿಸಿ ಪರಶುರಾಮನೆನಿಸಿದ. ಆವನ್ನು ಕದ್ದ ಅಪ್ಪನ ಸಹಾಯಕ್ಕೆ ನಿಂತ ಅವನ ಮಕ್ಕಳೆಲ್ಲರನ್ನೂ ಅದೇ ಕೊಡಲಿಯಿಂದ ಕಡಿದುರುಳಿಸಿದ. ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆಗೈದು ಅಂತಹ ಅವನ ಸಂತತಿ-ಯವರನ್ನೆಲ್ಲಾ ಸವರಿ ಗೋವಿನ ಅಭಿಮಾನವನ್ನುಳಿಸಿದ.

ಕೊಡಲಿ – ರಾಮನ ಕೊಡಲಿ, ನಮಗೆಲ್ಲ ಸದ್ಬುದ್ಧಿಯನ್ನು ಕೊಡಲಿ.

ಗೋರಕ್ಷಣೆ – ಪರಶುರಾಮಜಯಂತಿಯ ಆಚರಣೆ.

*****


**ಗೋಮಾತೆಯ ಸೇವೆಗೆ ಒಂದು ಸುವರ್ಣಾವಕಾಶ**

## ಗೋವರ್ಧನ ಗಿರಿ ವಿಶ್ವಸ್ತ ಮಂಡಳಿ

**ಶ್ರೀಪೇಜಾವರ ಅಧೋಕ್ಷಜ ಮಠ, ಉಡುಪಿ**

ಶ್ರೀಮನ್ಮಧ್ವಾಚಾರ್ಯರಿಂದ ಸಂದರ್ಶಿತವಾದ ಕೊಡವೂರಿನಲ್ಲಿ ಸುಮಾರು ಎರಡು ಎಕರೆ ಜಾಗದಲ್ಲಿ ಗೋಶಾಲೆಯನ್ನು ಹದಿನೇಳು ವರ್ಷಗಳಿಂದ ನಡೆಸುತ್ತಿರುವ ಗೋವರ್ಧನಗಿರಿ ವಿಶ್ವಸ್ತ ಮಂಡಳಿಯು ಉಡುಪಿಯಿಂದ ಇಪ್ಪತ್ತು ಕಿ.ಮೀ. ದೂರದ ನೀಲಾವರದಲ್ಲಿ ಇಪ್ಪತ್ತೆಂಟು ಎಕರೆ ಪ್ರದೇಶದಲ್ಲಿ ನಾಲ್ಕು ಹಟ್ಟಿಗಳುಳ್ಳ ಗೋಶಾಲೆಯೊಂದನ್ನು ತೆರೆದಿದೆ. ಈಗ ಅಲ್ಲಿ ಒಟ್ಟು ೬೫೦ಕ್ಕಿಂತ ಹೆಚ್ಚು ಗೋವುಗಳ ಸಂರಕ್ಷಣೆ ನಡೆದಿದೆ. ಅದಕ್ಕೆ ಪ್ರತಿ ತಿಂಗಳು ಸುಮಾರು ಎರಡು ಲಕ್ಷ ರುಪಾಯಿಗಳ ಖರ್ಚು ತಗಲುತ್ತಿದೆ. ಅದನ್ನು ನಿರ್ವಹಿಸಲು ನಮ್ಮ ವಿಶ್ವಸ್ತ ಮಂಡಳಿಯು ಯೋಜನೆಯೊಂದನ್ನು ರೂಪಿಸಿದ್ದು ಅದರ ಸದುಪಯೋಗ ಪಡೆಯಲು ಆಸ್ತಿಕರನ್ನು ವಿನಂತಿಸಿಕೊಳ್ಳಲಾಗಿದೆ. ಗೋವುಗಳಲ್ಲಿ ಸಮಸ್ತ ದೇವತೆ-ಗಳ ಸನ್ನಿಧಾನ ಹಾಗೂ ಶ್ರೀಲಕ್ಷ್ಮೀನಾರಾಯಣರ ವಿಶೇಷ ಸನ್ನಿಧಾನ. ಈ ಗೋಸೇವೆಯ ಅವಕಾಶ ಜನ್ಮಜನ್ಮಾಂತರದ ಸುಕೃತದ ಫಲ.

| | |
|---|---|
| **೧. ಮಹಾಪೋಷಕರು (ಆಜೀವ ಸದಸ್ಯರು)** | **ರೂ. ೧,೦೦,೦೦೦** |
| **೨. ಪೋಷಕರು (೧೦ ವರ್ಷಗಳ ಸದಸ್ಯತ್ವ)** | **ರೂ. ೫೦,೦೦೦** |
| **೩. ವಾರ್ಷಿಕ ಸದಸ್ಯರು** | **ಪ್ರತಿವರ್ಷ ರೂ. ೧೦,೦೦೦** |
| **೪. ಸಾಮಾನ್ಯ ಸದಸ್ಯರು** | **ಪ್ರತಿವರ್ಷ ರೂ. ೨,೫೦೦** |

ವಿ.ಸೂ. : ಆಸಕ್ತರು 'ಗೋವರ್ಧನಗಿರಿ ವಿಶ್ವಸ್ತ ಮಂಡಳಿ', ಶ್ರೀಪೇಜಾವರಮಠ, ಉಡುಪಿ - ಇವರಿಗೆ ನಗದು, ಚೆಕ್, ಡಿಡಿ ಮೂಲಕ ಸೇವೆ ಸಲ್ಲಿಸಬಹುದು.

## ಸಂಪಾದಕೀಯ –

# ಸಾರ್ಥಕನಾಮದ ಶ್ರೀವಿದ್ಯಾಮಾನ್ಯರು

ಶ್ರೀವಿದ್ಯಾಮಾನ್ಯತೀರ್ಥರು ಪ್ರಾತಃಸ್ಮರಣೀಯರಾದ ಮಹನೀಯರು. ಯತಿಗಳು, ಬ್ರಹ್ಮಚಾರಿಗಳು, ಪೀಠಾಧೀಶರು, ಉಭಯಪೀಠಾಧೀಶರು, ವಿದ್ವಾಂಸರು, ವಾಕ್ಯಾರ್ಥಕೋವಿದರು, ಗ್ರಂಥರಚನಾಪ್ರವೀಣರು, ಮಹಾತಪಸ್ವಿಗಳು, ಅಪಾರ ಉದಾರಿಗಳು, ಸಹೃದಯರು, ಪಾಠಪ್ರವಚನಶೀಲರು ಮೊದಲಾದ ಅನೇಕ ಬಗೆಯ ಹಿರಿಮೆಯನ್ನು ಹೊಂದಿದ ವಿಶಿಷ್ಟವ್ಯಕ್ತಿತ್ವದ ಮಹಾನುಭಾವರು ಇವರು. ಒಂದೇ ಮಾತಿನಲ್ಲಿ ಹೇಳುವುದಾದರೆ ಆದರ್ಶಪ್ರಾಯರಾದ ಯತಿಶೇಖರರು ಇವರು. ನೋಟಮಾತ್ರದಿಂದಲೇ ಉಲ್ಲಾಸ ಉಕ್ಕಿಸುವ ಹಿರಿಮೆ ಒಂದುಕಡೆಯಾದರೆ, ಕೇವಲ ನೋಟಕ್ಕೇ ಅಪಾರ ಗೌರವ ಉಕ್ಕಿಸುವಂತಹ ಮಹಿಮೆ ಮತ್ತೊಂದು ಕಡೆ. ಅವರ ತೇಜೋಮಯವಾದ ವ್ಯಕ್ತಿತ್ವ ಈ ಶತಮಾನದ ಅದ್ಭುತಗಳಲ್ಲೊಂದು. ಮಗುವಿನಂತಹ ಮುಗ್ಧತೆ, ಎಂತಹ ಪ್ರತಿವಾದಿಗಳನ್ನೂ ಮಣಿಸಬಲ್ಲ ವೈದುಷ್ಯ ಎರಡರ ಅಪೂರ್ವ ಸಂಗಮ ಇವರು. ಶ್ರೀಮದ್ಭಾಗವತದ ಅವಧೂತ ಗೀತೆಯಲ್ಲಿ ಬರುವ ಬಾಲಕನ ನಿದರ್ಶನಕ್ಕೆ ಅದ್ಭುತ ನಿದರ್ಶನದಂತಿದ್ದವರು. ನಿಷ್ಕಪಟವಾದ ಅವರ ವ್ಯಕ್ತಿತ್ವ ಎಂತಹ ಕಪಟಿಗಳನ್ನೂ ಮೂಕವಿಸ್ಮಿತರನ್ನಾಗಿ ಮಾಡುತ್ತಿತ್ತು. ಯತ್ಯಾಶ್ರಮಕ್ಕೆ ನ್ಯಾಯಸುಧಾದಿ ಗ್ರಂಥಗಳ ತಲಸ್ಪರ್ಶಿಪಾಂಡಿತ್ಯ ಮೂಲಭೂತ ಅರ್ಹತೆ ಎಂಬುದಾಗಿ ಪ್ರತಿಪಾದನೆ ಮಾಡಿ ಅಂತಹ ಯತಿವೃಂದವನ್ನು ಸಿದ್ಧಪಡಿಸುವ ಮೂಲಕ ಸ್ವತಃ ಆಚರಿಸಿ ತೋರಿಸಿದ್ದ ಹಿರಿಮೆ ಅವರದು. ಪ್ರಾತಃಸ್ಮರಣೀಯರಾದ ಶ್ರೀಸತ್ಯಧ್ಯಾನತೀರ್ಥರ ನಂತರ ಅತಿಹೆಚ್ಚು ಪೀಠಾಧೀಶರಿಗೆ ಪಾಠಹೇಳಿದ ಹಿರಿಮೆಯೂ ಅವರದೇ. ಅವರ ಶಾಸ್ತ್ರೀಯ ಉಪನ್ಯಾಸ ಸರಣಿ ಉಪನ್ಯಾಸಕರಿಗೆ ಆದರ್ಶ. ತಾವು ಸ್ವತಃ ಪಾಠಪ್ರವಚನಗಳನ್ನು ಅಪಾರ ಸಂಖ್ಯೆಯಲ್ಲಿ ಮಾಡಿದ್ದುದಲ್ಲದೆ ಅಂತಹ ಪಾಠಪ್ರವಚನಶೀಲರಿಗೆ ಅವಕಾಶವನ್ನು ಕಲ್ಪಿಸಿ, ಅಪಾರ–ಸ್ಫೂರ್ತಿಯನ್ನು ಹುಟ್ಟಿಸುವ ವ್ಯಕ್ತಿತ್ವ ಅವರದಾಗಿತ್ತು. ತಾವು ಏರ್ಪಡಿಸುವ ಪ್ರವಚನಗಳಲ್ಲಿ ತಪ್ಪದೆ ತಾವು ಸಹ ಉಪಸ್ಥಿತರಿದ್ದು ಆದರ ಯಶಸ್ಸಿಗೆ ಕಾರಣವಾಗುತ್ತಿದ್ದ ಹೃದಯವೈಶಾಲ್ಯ ಅವರದು. ದೇವರಿಗೆ ಒಂದೆರಡು ಆರತಿ ಕಡಿಮೆಯಾದರೂ ಚಿಂತೆ ಇಲ್ಲ; ಪಾಠಪ್ರವಚನಗಳಿಗೆ ಸಂಕೋಚವಾಗಬಾರದು ಎಂಬ ದೀಕ್ಷೆ ಅವರದು. ಉಡುಪಿಯಲ್ಲಿ ಕೆಲವು ವರ್ಷಗಳವರೆಗೆ ವಿಚ್ಛಿನ್ನವಾಗಿದ್ದ ಪಾಠಪ್ರವಚನದ ಪರಂಪರೆಯನ್ನು ತಮ್ಮ ಪರ್ಯಾಯದ ಅವಧಿಯಲ್ಲಿ ಪುನರುತ್ಥಾನಗೊಳಿಸಿದ ಹಿರಿಮೆ ಅವರದು. ನ್ಯಾಯಾಮೃತಾದಿ ವಾದಗ್ರಂಥಗಳ ಬಗ್ಗೆ ಇದ್ದ ಪ್ರೌಢಿಮೆಯನ್ನೇ ಮಹಾಭಾರತತಾತ್ಪರ್ಯ–ನಿರ್ಣಯದಂತಹ ಪ್ರಮೇಯಗ್ರಂಥಗಳ ಹೊಂದಿದ್ದುದು ಅವರ ವಿದ್ವತ್ತಿನ ಇನ್ನೊಂದು ಮುಖ. ವಾದಗ್ರಂಥಗಳಲ್ಲಿನ ಅವರ ಕೌಶಲವನ್ನು ಅನುಕರಿಸಲು ಯತ್ನಿಸಿದ ಪಂಡಿತರು ಅಸಂಖ್ಯ. ಆದರೆ ಅವರ ತಾತ್ಪರ್ಯನಿರ್ಣಯದಲ್ಲಿನ ತಲಸ್ಪರ್ಶಿ ಪಾಂಡಿತ್ಯವನ್ನು ಅನುಕರಿಸಲು ಪ್ರಯತ್ನ ಮಾಡಿದ ಪ್ರಯತ್ನರು ಮಾತ್ರ ವಿರಳಾತಿವಿರಳ.ಅವರು ನೆಲೆಸಿದ ಕಡೆಯಲ್ಲೆಲ್ಲಾ ಧರ್ಮಪ್ರಜ್ಞೆ ಜಾಗೃತವಾಗುತ್ತಿದ್ದುದು ಮಾತ್ರವಲ್ಲದೆ ಅವಿಚ್ಛಿನ್ನವಾಗಿ

ಇಂದಿಗೂ ನಡೆದುಕೊಂಡು ಬರುತ್ತಿದೆ. ಮಾನ್ವಿ ಮೊದಲಾದ ಅನೇಕ ಸ್ಥಳಗಳಲ್ಲಿ ಬ್ರಾಹ್ಮಣೇತರರಿಗೂ ವೈಷ್ಣವದೀಕ್ಷೆಯನ್ನು ನೀಡಿ ಅವರು ಮಾಡಿದ ಕ್ರಾಂತಿ ಅಪೂರ್ವ-ವಾದುದು. ಗ್ರಂಥಪ್ರಕಾಶನ ಪ್ರವಚನಗಳಿಗೆ ಅವರಿಂದ ನನಗೆ ದೊರೆತ ಸ್ಫೂರ್ತಿಯಂತೂ ವರ್ಣನೆಗೆ ಮೀರಿದ್ದು. ಪ್ರತಿಬಾರಿ ಕಂಡಾಗಲೂ ''ಈಗ ಯಾವ ಗ್ರಂಥ ಪ್ರಕಾಶನಕ್ಕೆ ಸಿದ್ಧವಾಗುತ್ತಿದೆ, ಈಗ ಎಲ್ಲಿ ಯಾವ ಪ್ರವಚನ ನಡೆಯುತ್ತಿದೆ'' ಎಂಬುದಾಗಿ ಪ್ರಶ್ನಿಸುತ್ತಾ ಆ ಬಗ್ಗೆ ಎಚ್ಚರಿಕೆ ಮೂಡಿಸುತ್ತಿದ್ದರು. ನಾನು ಅವರನ್ನು ಕೊನೆಯ ಬಾರಿಗೆ ಸಂದರ್ಶನ ಮಾಡಿದ್ದಾಗಲೂ ಅವರು ಆಡಿದ ಮಾತುಗಳು ಆ ಎರಡೇ. ಹೀಗೆ ಜ್ಞಾನಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ವಿದ್ವಚ್ಛೇಖರರಲ್ಲಿ ಅವರಿಗೆ ಅವರೇ ಸಾಟಿ. ಅವರು ಹರಿಪದ ಸೇರಿ ೧೨ ವರ್ಷಗಳು ಗತಿಸಿವೆ, ಅವರಿಂದ ಮೂಡಿಬಂದ ಸಿದ್ಧಾಂತಪ್ರಸಾರದ ಹೊಸ ಸಾಧ್ಯತೆಗಳು ಅವರ ಶಿಷ್ಯವರೇಣ್ಯರಾದ ಶ್ರೀವಿಶ್ವೇಶತೀರ್ಥರು, ಶ್ರೀವಿಶ್ವಪ್ರಿಯತೀರ್ಥರು, ಶ್ರೀವಿದ್ಯಾಧೀಶತೀರ್ಥರು, ಶ್ರೀವಿದ್ಯೇಶತೀರ್ಥರು ಮೊದಲಾದ ವಿದ್ವನ್ಮಣಿಗಳಿಂದ ಮುಂದುವರೆಯುತ್ತಿದೆ. ಜನಸಾಮಾನ್ಯರಿಂದ ಪ್ರಕಾಂಡ ಪಂಡಿತರವರೆಗೆ ಅವರಿಂದ ಪ್ರಭಾವಿತರಾಗದ ಜನರು ವಿರಳ ಎಂಬುದು ನಿಶ್ಚಿತ : **ತದಲಂ ಬಹುಲೋಕ-ವಿಚಿಂತನಯಾ ಪ್ರವಣಂ ಕುರು ಮಾನಸಮೀಶಪದೇ** ಎಂಬ ಮಧ್ವಸಂದೇಶ ಅವರಲ್ಲಿ ನಿಜ ಅರ್ಥದಲ್ಲಿ ಸಾರ್ಥಕವಾಗಿತ್ತು.

******


|| ಹರಿ ಸರ್ವೋತ್ತಮ ||　　|| ವಾಯು ಜೀವೋತ್ತಮ ||

# G.R. CONSULTANTS

No. 278, 80 Ft. Road, Opp. BATA Showroom, BSK I Stage, Srinivasanagar, Bangalore - 50

## SALE/PURCHASE

20X30, 30X40, 40X60, 50X80

BDA Sites, Houses, Sale/Purchase at BSK 6th Stage, **Pavamanapura Layout, near BSK 6th Stage.** Visveshwaraiah Layout, Anjanapura and other BDA approved layouts (Bangalore South),

We also help you in obtaining Khatha Certificate, Tax Paid receipts, Building Plans from BBMP, BDA and also contact for Registration, Gift Deed, Will and other allied services.

Contact : **Nagaraj, Cell : 93412 59590**

**e-mail : grconsultants99@gmail.com**

# ಭಾವಪುಷ್ಪಾರ್ಪಣೆಯ ಅನುಸಂಧಾನ

**- ಸಗ್ರಿ ರಾಘವೇಂದ್ರ ಉಪಾಧ್ಯಾಯ**

**ಭಾವೈರೇವಾರ್ಚಯಂತಿ ಜ್ಞಾನವಿಜ್ಞಾನಕೌಶಲಾಃ** - ಎಂಬುದಾಗಿ ಯೋಗದೀಪಿಕಾದಲ್ಲಿ (೩-೬೯) ಭಾವಪುಷ್ಪಾರ್ಚನದ ಪ್ರಸ್ತಾವದಲ್ಲಿ **ಜ್ಞಾನವಿಜ್ಞಾನಕೌಶಲಾಃ** – ಜ್ಞಾನಿಗಳಷ್ಟೇ ನಡೆಸಲು ಸಾಧ್ಯವಾದುದು ಭಾವಪುಷ್ಪಾರ್ಚನೆ ಎಂದು ಪ್ರತಿಪಾದಿಸುವ ಮೂಲಕ ಭಾವಪುಷ್ಪಾರ್ಚನೆಗೆ ಮುಖ್ಯವಾಗಿ ಅನುಸಂಧಾನಕ್ಕೆ ಸಂಬಂಧಪಟ್ಟದ್ದೆಂದು ಸೂಚಿಸಲಾಗಿದೆ.

ಅಹಿಂಸಾ, ಇಂದ್ರಿಯನಿಗ್ರಹ, ಸರ್ವಭೂತದಯ, ಕ್ಷಮಾ, ಜ್ಞಾನ, ತಪಸ್ಸು, ಧ್ಯಾನ, ಹಾಗೂ ಸತ್ಯ – ಈ ಎಂಟು ಭಾವಪುಷ್ಪಗಳಿಂದ ಕೇಶವನು ತುಷ್ಟನಾಗುವನು.

**''ಓಂ ನಮೋ ನಾರಾಯಣಾಯ ಓಂ - ಅಹಿಂಸಾಪುಷ್ಪಂ ಸಮರ್ಪಯಾಮಿ''** .... ಇತ್ಯಾದಿ ಪ್ರಕ್ರಿಯೆಯಿಂದಷ್ಟೇ ಭಾವಪುಷ್ಪಗಳ ಸಮರ್ಪಣೆ ನಡೆದಂತಾಗದು.

**''ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಂ .... ತದ್ಭಕ್ತಿಃ ತತ್ಫಲಂ ಮಹ್ಯಂ ತತ್ಪ್ರಸಾದಃ ಪುನಃ ಪುನಃ ...''** – ಎಂದು ಬ್ರಹ್ಮತರ್ಕ ಸಂಹಿತದ ಬಗ್ಗೆ ಸ್ಪಷ್ಟಪಡಿಸಿರುವ ಸೂತ್ರವನ್ನು ಭಾವಪುಷ್ಪಾರ್ಪಣೆಗೂ ಅನ್ವಯಿಸಿಕೊಳ್ಳಬೇಕು. ಆಗಷ್ಟೇ ಅವುಗಳ ಸಮರ್ಪಣೆ ನಡೆದಂತಾಗುವುದು **''ಇಂದ್ರಿಯನಿಗ್ರಹ''** - ಎಂಬ ಭಾವಪುಷ್ಪವನ್ನೇ ತೆಗೆದುಕೊಳ್ಳೋಣ. ನಾವು ಶಾಸ್ತ್ರಕ್ಕೆ ಭಯಪಟ್ಟು ಜಿಹ್ವೆ , ಉಪಸ್ಥ ಮುಂತಾದ ಇಂದ್ರಿಯಗಳನ್ನು ಆದಷ್ಟು ಹಿಡಿತದಲ್ಲಿಟ್ಟುಕೊಳ್ಳುವೆವು.

ಈ ನಮ್ಮ ಸಾಧನೆಯನ್ನು ನಾವು ಪೂಜಾಕಾಲದಲ್ಲಿ ಅನುಸಂಧಾನವಾಗಿ ಭಾವಪುಷ್ಪವಾಗಿ ಹೀಗೆ ಸಮರ್ಪಿಸಬೇಕು.. ನನ್ನ ಮೂಲಕ ನಡೆದ ಇಂದ್ರಿಯನಿಗ್ರಹಕ್ಕೆ ಮುಖ್ಯ ಕಾರಣ **ಹೃಷೀಕೇಶ** ಎನಿಸಿರುವ ಭಗವಂತನೇ. ಅವನು ವಿವೇಕಾದಿಗಳನ್ನು ನೀಡಿ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಳ್ಳುವಂತೆ ಮಾಡಿರುವನು.

ಹೀಗೆ ಹೃಷೀಕೇಶನ ಅನುಗ್ರಹದಿಂದಾಗಿ ನಾನು ಅಳವಡಿಸಿಕೊಂಡ ಆ ''ಇಂದ್ರಿಯನಿಗ್ರಹ''ದ ಮುಖ್ಯ ಉದ್ದೇಶ ಭಗವಂತನ ಪ್ರೀತಿಯಾಗಿದ್ದು , ಅವನಿಗೆ ಪ್ರೀತಿಕರವಾದ ಅದು ಅವನ ಪೂಜೆಯಂತೆ.

ಇಂದ್ರಿಯನಿಗ್ರಹದ ಮುಖ್ಯ ಉದ್ದೇಶ ಅವನಲ್ಲಿ ಮತ್ತೆ ಮತ್ತೆ ಭಕ್ತಿ ಉಂಟಾಗಬೇಕು ; ಅವನ ಅನುಗ್ರಹ ಹೆಚ್ಚುತ್ತಿರಬೇಕು. ಇಂದ್ರಿಯವನ್ನು ಹಿಡಿತದಲ್ಲಿಟ್ಟುಕೊಳ್ಳದಿದ್ದರೆ ಪ್ರಪಂಚದಲ್ಲಿ ಮುಳುಗುವಿಕೆಗೆ ಪ್ರಯೋಜಕವಾಗಬಲ್ಲ ಅದು ಭಗವಂತನ ಆಸಕ್ತಿಯನ್ನು ಕಡಿಮೆಮಾಡಿ ಭಕ್ತಿಗೆ ಮಾರಕವಾದೀತು !

ಹೀಗೆ ಇಂದ್ರಿಯನಿಗ್ರಹದ ಕರ್ತೃ, ಸ್ವರೂಪ, ಹಾಗೂ ಉದ್ದೇಶ ಈ ಮೂರನ್ನು ಭಗವಂತನಿಗೆ ಸಂಬಂಧಿಸಿ, ಅನುಸಂಧಾನ ನಡೆಸುವ ಮೂಲಕ ಇಂದ್ರಿಯನಿಗ್ರಹವನ್ನು ಆನುಸಂಧಾನಿಕವಾಗಿ ಅವನಿಗೆ ಸಮರ್ಪಿಸಬಹುದಾಗಿದೆ.

ಹೀಗೆಯೇ ಉಳಿದ ಭಾವಪುಷ್ಪಗಳನ್ನು ಆನುಸಂಧಾನಿಕವಾಗಿ ಸಮರ್ಪಿಸಬಹುದಾಗಿದೆ.

(ಮುಂದಿನ ಸಂಚಿಕೆಯಲ್ಲಿ: **ಭಾವಪುಷ್ಪಾರ್ಪಣೆಯ ಅಧಿಕಾನುಸಂಧಾನ**)

*****

# ಶ್ರೀಪರಶುರಾಮ ರೂಪದ ಹಿರಿಮೆ

**(೨೪.೦೪.೧೨ರಂದು ಶ್ರೀಪರಶುರಾಮಜಯಂತಿಯ ನಿಮಿತ್ತ ವಿಶೇಷ ಲೇಖನ)**

**– ವಿಪ್ರ**

ಶ್ರೀಪರಶುರಾಮರೂಪವು ದಶಾವತಾರಗಳಲ್ಲಿ ಒಂದು. ಭೃಗುವಂಶದಲ್ಲಿ ಅವತರಿಸಿದ್ದರಿಂದ ಭಾರ್ಗವರಾಮ ಜಮದಗ್ನಿಪುತ್ರತ್ವೇನ ಅವತರಿಸಿದ್ದರಿಂದ ಜಾಮದಗ್ನ್ಯ, ಪ್ರಧಾನವಾಗಿ ಪರಶುವನ್ನು ಆಯುಧವನ್ನಾಗಿ ಉಪಯೋಗಿಸಿದ್ದರಿಂದ ಪರಶುರಾಮ ಮೊದಲಾದ ಹೆಸರುಗಳಿಂದಲೂ ಇದು ಪ್ರಸಿದ್ಧ.

ರಕ್ಷಿಸಬೇಕಾದ ಕ್ಷತ್ರಿಯರು ಭಕ್ಷಕರಾದಾಗ ಪ್ರಾದುರ್ಭವಿಸಿದ್ದು ಈ ರೂಪದ ವೈಶಿಷ್ಟ್ಯ. ಕಾರ್ತವೀರ್ಯಾರ್ಜುನ ಹಾಗೂ ಅವನ ಪುತ್ರರ ನೇತೃತ್ವದಲ್ಲಿ ನಡೆದ ಲೋಕನಾಶದ ಕಾರ್ಯವನ್ನು ತಡೆದು ಲೋಕಸಂರಕ್ಷಕವಾದದ್ದು ಇದರ ಹಿರಿಮೆ. ಕ್ಷತ್ರಿಯ ದಾರಿತಪ್ಪಿದಾಗ ಬ್ರಾಹ್ಮಣ ಲೋಕೋದ್ಧಾರಕ್ಕಾಗಿ ಶಸ್ತ್ರ ಹಿಡಿಯಬೇಕು ಎಂಬುದು ಇದು ತೋರಿದ ತತ್ತ್ವ.

ಕಾರ್ತವೀರ್ಯಾರ್ಜುನ ಶ್ರೀಹರಿಯ ದತ್ತಾತ್ರೇಯರೂಪದ ಶಿಷ್ಯ; ಸಂಹರಿಸಿದ್ದು ಅದೇ ಶ್ರೀಹರಿಯ ಪರಶುರಾಮ ರೂಪ; ಭಗವಂತನಿಗೆ ಒಳಿತು ಕೆಡಕುಗಳ ಹೊರತು ಶಿಷ್ಯತ್ವಾದಿಗಳು ಅನುಗ್ರಹ ನಿಗ್ರಹಗಳ ಕಾರಣಗಳಲ್ಲ ಎಂಬದಕ್ಕೆ ಇದು ಸಂಕೇತ. ಅದಕ್ಕೆಂದೇ ಅವನು ''ಸಮ'' ಎನ್ನಿಸಿರುವನು (ಶಾಶ್ವತಃ ಸಮಃ – ವಿ.ಸ.).

ಭೀಷ್ಮ, ದ್ರೋಣ ಮತ್ತು ಕರ್ಣ ಈ ಮೂವರು ಪರಶುರಾಮರೂಪದ ಬಳಿ ಅಸ್ತ್ರವಿದ್ಯೆ ಕಲಿತವರು. ಭೀಷ್ಮರು ಪರಶುರಾಮರ ಶಿಷ್ಯರಾದದ್ದು ಒಟ್ಟು ೪೨೫ವರ್ಷಗಳಷ್ಟು ದೀರ್ಘಕಾಲ; ಅದರಲ್ಲಿ ಶಸ್ತ್ರಾಸ್ತ್ರ ತಿಳಿದದ್ದು ಒಟ್ಟು ೭೫ವರ್ಷಗಳ ಕಾಲ; ದ್ರೋಣರು ಕಲಿತದ್ದು ೧೨ವರ್ಷಗಳ ಕಾಲ; ಕರ್ಣ ೪ವರ್ಷಗಳ ಕಾಲ. ಇವರು ಕಲಿತಕ್ರಮದಲ್ಲಿಯೇ ಮುಂದೆ ಕುರುಕ್ಷೇತ್ರಯುದ್ಧದಲ್ಲಿ ಕ್ರಮವಾಗಿ ಸೇನಾಪತ್ಯವಹಿಸಿದ್ದು ಗಮನಾರ್ಹ (ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ).

ಕುರು–ಪಾಂಡವರು ಸೇರಿದಂತೆ ಆಗಿನ ಕಾಲದ ರಾಜಮಹಾರಾಜರು ರಾಜಕುಮಾರರೆ ದ್ರೋಣಾಚಾರ್ಯರ ಶಿಷ್ಯರು; ದ್ರೋಣರು ಪರಶುರಾಮರ ಶಿಷ್ಯರು; ಎಂದರೆ ಅಸ್ತ್ರವಿದ್ಯೆಯಲ್ಲಿ ಎಲ್ಲರೂ ಪರಶುರಾಮರ ಶಿಷ್ಯಪರಂಪರೆಯವರೇ ಎಂದಾಯಿತು. ಶಾಸ್ತ್ರಪರಂಪರೆಯವರೆಲ್ಲ ವ್ಯಾಸರೂಪದ ಶಿಷ್ಯರಾದರೆ, ಶಸ್ತ್ರಪರಂಪರೆಯವರೆಲ್ಲ ಪರಶುರಾಮರೂಪದ ಶಿಷ್ಯರಾದರು. ಹೀಗೆ ಶಸ್ತ್ರಶಾಸ್ತ್ರ ಮೊದಲಾಗಿ ಎಲ್ಲಕ್ಕೂ ಶ್ರೀಹರಿಯೇ ಮೂಲಪ್ರವರ್ತಕ ಎಂಬುದಕ್ಕೆ ಇವು ದ್ಯೋತಕ.

ಶ್ರೀ ಪರಶುರಾಮರೂಪವು ಅಗ್ನ್ಯಂತರ್ಗತರೂಪ ಎಂಬುದು ವಿಶೇಷ. ಋಗ್ವೇದದ ಮೊದಲ ಸೂಕ್ತ ಅಗ್ನಿಸೂಕ್ತ ಎಂದರೆ, ಪರಶುರಾಮಸೂಕ್ತ ಎಂದಾಗುವುದು. ಅದರಂತೆ ಋಗ್ವೇದದಲ್ಲಿನ ಅಗ್ನಿಪರವಾದ ಸಕಲ ಸೂಕ್ತಗಳೂ ಮಂತ್ರಗಳೂ ಮುಖ್ಯವಾಗಿ ಶ್ರೀಪರಶುರಾಮರೂಪದ ಸ್ತವನಗಳು ಎಂದು ತಿಳಿಯಬೇಕು.

ಪ್ರತಿನಿತ್ಯ ಶ್ರೀಹರಿಯನ್ನು ಹನ್ನೊಂದು ಅಧಿಷ್ಠಾನಗಳಲ್ಲಿ ಆರಾಧಿಸಬೇಕು ಎಂಬುದು ಶ್ರೀಕೃಷ್ಣ ಉದ್ಧವನಿಗೆ ನೀಡಿದ ಸಂದೇಶ. ಅದರಲ್ಲಿ ಅಗ್ನಿಯೂ ಒಂದು. ಎಂದರೆ ಅಗ್ನ್ಯಂತರ್ಗತ ಪರಶುರಾಮರೂಪದ ಆರಾಧನೆ ಪ್ರತಿನಿತ್ಯದ ಮುಖ್ಯಕರ್ತವ್ಯ-ಗಳಲ್ಲೊಂದು; ವಟುವಿಗೆ ಅಗ್ನಿಕಾರ್ಯ, ಗೃಹಸ್ಥನಿಗೆ ವೈಶ್ವದೇವ ಇದರಲ್ಲಿ ಸೇರಿವೆ.

ಮೃತದೇಹ ಅಗ್ನಿಗೆ ಅರ್ಪಿತವಾಗುವುದರಲ್ಲೂ ಪರಶುರಾಮರೂಪದ ಆರಾಧನೆ ಸೂಚಿತ. 'ಅಗ್ನ್ಯಂತರ್ಗತ ಪರಶುರಾಮದೇವ' ಎಂಬ ದಾಸರ ವಚನದಲ್ಲೂ ಈ ವಿಷಯ ಬಂದಿದೆ.

ಬ್ರಹ್ಮದೇವರ ಶಾಪದಿಂದಾಗಿ ವಿರಹಿಗಳಾಗಿದ್ದ ಅಂಬೆ(ವರಾಂಗಿ) ಹಾಗೂ ಭೀಷ್ಮ (ದ್ಯುನಾಮಕ ವಸು) ಇಬ್ಬರೂ ಪುನಃ ಒಂದುಗೂಡಲು ಅಂಬೆಯು ಪರಶುರಾಮ-ದೇವರನ್ನು ಶರಣುಹೊಕ್ಕಿದ್ದು ಕಾರಣವಾಯಿತು ಎಂದರೆ ಪರಶುರಾಮರೂಪದ ಆರಾಧನೆಯಿಂದ ದಾಂಪತ್ಯದಲ್ಲಿನ ವೈಮನಸ್ಯ ದೂರಾಗಿ ಸಾಮರಸ್ಯ ಮೂಡುವುದು ಎಂದು ತಿಳಿಯಬಹುದು.

ಭೀಷ್ಮ ಪರಶುರಾಮರಿಗೆ ಯುದ್ಧ ನಡೆದು ಪರಶುರಾಮದೇವರು ಪರಾಜಿತರಾಗಿ ಅವರ ಗರ್ವಭಂಗವಾಯಿತು ಎಂದು ಜನ ತಪ್ಪಾಗಿ ತಿಳಿದಿರುವರು. ವಸ್ತುಸ್ಥಿತಿಯಂತೆ ಪರಶುರಾಮರೊಂದಿಗೆ ಯುದ್ಧ ಪ್ರಾರಂಭಿಸುವ ಮುನ್ನ ಭೀಷ್ಮರು ರಥದಿಂದ ಕೆಳಗಿಳಿದು ಬಿಲ್ಲುಬಾಣಗಳನ್ನು ಕೆಳಗಿರಿಸಿ ಕವಚವನ್ನೂ ತೆಗೆದಿರಿಸಿ ಪಾದರಕ್ಷೆಗಳನ್ನು ಕಳಚಿ ಶ್ರೀಪರಶುರಾಮರ ಬಳಿಗೆ ಧಾವಿಸಿ ಪ್ರದಕ್ಷಿಣೆಗಳನ್ನು ಸಮರ್ಪಿಸಿ, ಸಾಷ್ಟಾಂಗ ವಂದಿಸಿ ಶರಣಾಗುವರು. ಶ್ರೀಪರಶುರಾಮರು ಅವರಿಗೆ ಅಭಯಪ್ರದಾನ ನೀಡುವರು. ಬಳಿಕ ನಡೆದದ್ದು ಅವರಿಬ್ಬರ ಯುದ್ಧ. ಎಂದರೆ ಯುದ್ಧಕ್ಕಿಂತ ಮುಂಚೆಯೇ ತಮ್ಮ ಪರಾಭವವನ್ನು ಒಪ್ಪಿಕೊಂಡು ರಕ್ಷಿಸಲು ಪ್ರಾರ್ಥಿಸಿದ್ದು ಭೀಷ್ಮರ ಕಾರ್ಯದ ಆಂತರ್ಯ. ಅವರ ಪ್ರಾರ್ಥನೆಯನ್ನು ಮನ್ನಿಸಿ ರಕ್ಷಿಸಿದ್ದು ಶ್ರೀಪರಶುರಾಮರ ಅನುಗ್ರಹ ಎಂದರೆ ಇದು

ಶ್ರೀಪರಶುರಾಮವಿಜಯವೇ ಹೊರತು ಭೀಷ್ಮರ ವಿಜಯವಲ್ಲ. ಇದು ಮಹಾಭಾರತದಿಂದ ತಿಳಿದು ಬರುವ ಸಂಗತಿ.

ಇಷ್ಟಾಗಿಯೂ ಭೀಷ್ಮರು ಪರಶುರಾಮರನ್ನು ಗೆದ್ದಿದ್ದು ಮಾತ್ರ ನಿಜ. ಆದರೆ ಅದು ಶಕ್ತಿಯಿಂದ ಗೆದ್ದುದ್ದಲ್ಲ. ಕೇವಲ ಭಕ್ತಿಯಿಂದ ಎಂಬುದು ಮಾತ್ರ ವಿಶೇಷ :

**‘ಯೋಽಜಿತೋ ವಿಜಿತೋ ಭಕ್ತ್ಯಾ ಗಾಂಗೇಯಂ ನ ಜಘಾನ ಹ ।**
**ನ ಚಾಂಬಾಂ ಗ್ರಾಹಯಾಮಾಸ ಕರುಣಃ ಕೋಽಪರಸ್ತತಃ ॥’(ಗೀತಾಭಾಷ್ಯ)**

ಅದರಂತೆ ಶ್ರೀರಾಮ ಪರಶುರಾಮರಿಗೆ ನಡೆದದ್ದೂ ಸಹ ಸಮರವೇ ಅಲ್ಲ. ಅದನ್ನೂ ಸಹ ಜನ ಪರಶುರಾಮಗರ್ವಭಂಗ ಎಂದು ತಪ್ಪಾಗಿ ತಿಳಿದಿರುವುದುಂಟು. ಅಲ್ಲಿಯೂ ನಡೆದದ್ದೇ ಬೇರೆ. ಶಿವಧನುರ್ಭಂಗ ಮಾಡಿದ ರಾಮ ಸಾಕ್ಷಾತ್ ಶ್ರೀಹರಿ ಎಂಬುದು ಜನತೆಗೆ ಒಂದು ರೀತಿಯಿಂದ ತಿಳಿದಂತಾಗಿತ್ತು. ಆದರೆ ಅದು ಖಚಿತಪಡುವ ಅಗತ್ಯ ಉಳಿದಿತ್ತು. ಅದನ್ನು ಪೂರೈಸಿದ್ದು ಈ ಪ್ರಸಂಗ.

ಪರಶುರಾಮರು ನುಡಿದರು ''ರಾಮ! ನೀನು ಮುರಿದದ್ದು ಶಿವಧನುಸ್ಸನ್ನು. ಇದರಿಂದ ನೀನು ಹರನಿಗಿಂತ ಪರನಾದ ಹರಿಯೆಂದು ಜನ ತಿಳಿಯುವಂತಾಗಿದೆ. ಅದನ್ನು ದೃಢಪಡಿಸಲೆಂದು ನಾನು ಬಂದಿರುವೆ. ಇದೋ ನನ್ನ ಕೈಯಲ್ಲಿರುವುದು ವಿಷ್ಣುವಿನ ಶಾರ್ಙ್ಗಧನುಸ್ಸು. ಇದು ಶಿವಧನುಸ್ಸಿಗಿಂತ ಕೋಟಿಪಟ್ಟು ಮಿಗಿಲಾದದ್ದು. ಇದನ್ನು ಧರಿಸಿದ ನಾನು ಹರಿಯೆಂಬುದು ಜನಕ್ಕೆ ತಿಳಿದಿದೆ. ಇದನ್ನು ನೀನೂ ಧರಿಸಿ ನೀನು ಶ್ರೀಹರಿ ಎಂದು ಜಗತ್ತಿಗೆ ತಿಳಿಸು''. ಮುಂದೆ ನಡೆದದ್ದು ಇತಿಹಾಸ.

ವಾಸ್ತವವಾಗಿ ಅತುಲ ಎಂಬ ರಾಕ್ಷಸ ಬ್ರಹ್ಮ ಹಾಗೂ ಶಿವರ ವರದಿಂದ ಕೊಬ್ಬಿ ಶ್ರೀಪರಶುರಾಮರ ಉದರದಲ್ಲಿ ರಕ್ಷಣೆಗೆಂದು ನೆಲೆಸಿದ್ದ. ಹರಿಯು ಸೋಲುವನೆಂದು ತಪ್ಪು ತಿಳಿಯುವವರೆಗೂ ಅವನು ಸಾಯುವಂತಿರಲಿಲ್ಲ. ಅದರಂತೆ ಅವನು ಅವರ ಉದರದಿಂದ ಹೊರ ಬೀಳುವವರೆಗೂ ಅವನು ಬದುಕಬೇಕಿತ್ತು. ಅದಕ್ಕೆ ಅನುವಾಗಲೆಂದು ಶ್ರೀರಾಮ ಧನುಸ್ಸಿನಲ್ಲಿ ಬಾಣ ಹೂಡಿ, ತಾನು ಗೆದ್ದಂತೆ ತೋರಿದ. ಅದನ್ನು ಪರಶುರಾಮರ ಪರಾಭವ ಎಂದು ತಪ್ಪಾಗಿ ತಿಳಿದ ಅತುಲ ಅವರ ಉದರದಿಂದ ಕೆಳಕ್ಕೆ ಹಾರಿದ. ರಾಮಬಾಣಕ್ಕೆ ಸಿಲುಕಿ ಶಾಶ್ವತವಾಗಿ ಅಳಿದ.

ಪರಶುರಾಮ ಸೋತ ಎಂದು ತಿಳಿದ ಅತುಲ ಸತ್ತ. ಅದರಂತೆ ಪರಶುರಾಮರ ಗರ್ವಭಂಗ ಎಂದು ತಿಳಿಯುವ ಜನರೂ ಸಹ ಶಾಶ್ವತಪರಾಭವಕ್ಕೆ ಗುರಿಯಾಗುವರು.

ರಾಮಪರಶುರಾಮರಿಬ್ಬರೂ ಸಾಕ್ಷಾತ್ ಶ್ರೀಹರಿಯ ದಶಾವತಾರದ ರೂಪಗಳು. ಎಂದಮೇಲೆ ಅವರಲ್ಲಿ ಸೋಲು ಗೆಲವು ಎಂಬ ಮಾತಿಗೆ ಎಡೆಯೆಲ್ಲಿದೆ? ಹರಿಯು ಸೋಲುವವನಾದರೂ ಎಂತು. ಈ ವಿವೇಕವಿರುವವರಿಗೆ ಇಲ್ಲಿ ಯಾವ ಗೊಂದಲಕ್ಕೆ ಅವಕಾಶವಿಲ್ಲ.

*****

# ಶ್ರೀವೇದವ್ಯಾಸರೂಪದ ವೈಭವ

**(೦೪.೦೫.೧೨ರಂದು ಶ್ರೀವೇದವ್ಯಾಸಜಯಂತಿಯ ನಿಮಿತ್ತ ವಿಶೇಷ ಲೇಖನ)**

**-ವಿಪ್ರ**

ಶ್ರೀವೇದವ್ಯಾಸರೂಪವು ಶ್ರೀಹರಿಯ ವಿಶಿಷ್ಟಜ್ಞಾನಕಾರ್ಯದ ರೂಪಗಳಲ್ಲೊಂದು; ಕಪಿಲ, ದತ್ತಾತ್ರೇಯ, ಹಯಗ್ರೀವ ಮೊದಲಾದ ರೂಪಗಳೂ ಸಹ ಈ ಬಗೆಯವು :

**ದತ್ತವ್ಯಾಸಾದಿರೂಪೇಷು ಜ್ಞಾನಕಾರ್ಯಸ್ತಥಾ ಪ್ರಭುಃ। (ಮ.ಭಾ.ತಾ.ನಿ.)**

ಇಪ್ಪತ್ತೆಂಟನೆಯ ದ್ವಾಪರಯುಗದ ಅಂತ್ಯಕಾಲ. ಮೊದಲೇ ಜ್ಞಾನ ಖಿಲವಾಗುವ ಮುಸ್ಸಂಜೆಯಂತಹ ದುಷ್ಕಾಲ. ಅದರೊಂದಿಗೆ ಗೌತಮಮುನಿಗಳು ನೀಡಿದ ಶಾಪ. ಇದರಿಂದಾಗಿ ದ್ವಾಪರದ ಆ ಸಮಯದಲ್ಲಿ ಅಖಿಲ ಜ್ಞಾನಕ್ಕೂ ಲೋಪವೊದಗಿತ್ತು. ಆಗ ಬ್ರಹ್ಮಾದಿಗಳ ಪ್ರಾರ್ಥನೆಯಂತೆ ಪ್ರಾದುರ್ಭವಿಸಿದ ರೂಪ ಈ ವೇದವ್ಯಾಸರೂಪ.

ದ್ವೈಪಾಯನ, ಕೃಷ್ಣದ್ವೈಪಾಯನ, ಬಾದರಾಯಣ, ವಾಸಿಷ್ಠಕೃಷ್ಣ, ಪಾರಾಶರ್ಯ ಮೊದಲಾದ ಹೆಸರುಗಳಿಂದಲೂ ಇದು ಪ್ರಸಿದ್ಧ.

ಯಮುನಾನದಿಯ ದ್ವೀಪದಲ್ಲಿ ಪ್ರಾದುರ್ಭವಿಸಿದ್ದರಿಂದ ದ್ವೈಪಾಯನ. ಕೃಷ್ಣವರ್ಣದ ರೂಪವಾದ್ದರಿಂದ ಕೃಷ್ಣದ್ವೈಪಾಯನ. ಒಂದರ್ಥದಲ್ಲಿ ಇದು ತಾನು ಶ್ವೇತದ್ವೀಪಾಯನ-ನಾದ ಶ್ರೀಹರಿ ಎಂದು ತೋರಿಸುವ ಪರಿ ಎಂದೂ ತಿಳಿಯಬಹುದು.

ಬ್ರಹ್ಮಪುತ್ರ ವಸಿಷ್ಠರು. ವಸಿಷ್ಠಪುತ್ರ ಶಕ್ತಿಮುನಿ. ಶಕ್ತಿಮುನಿಯ ಪುತ್ರ ಪರಾಶರ. ಪರಾಶರರಿಗೆ ಪುತ್ರತ್ವೇನ ಅವತರಿಸಿದ್ದರಿಂದ ಪಾರಾಶರ್ಯ ಎಂದು ಹೆಸರು. ವಸಿಷ್ಠ ಮುನಿಯ ಪೌತ್ರನೆಂಬ ಕಾರಣದಿಂದ ವಾಸಿಷ್ಠ. ಕೃಷ್ಣವರ್ಣದವನಾದ್ದರಿಂದ ಕೃಷ್ಣ. ಎರಡೂ ಸೇರಿ ವಾಸಿಷ್ಠಕೃಷ್ಣ.

ವೇದವ್ಯಾಸಾವತಾರಕ್ಕೆ ಪರಾಶರ ಸತ್ಯವತಿಯರು ನಿಮಿತ್ತಮಾತ್ರ. ಕೃಷ್ಣಾವತಾರಕ್ಕೆ ವಸುದೇವ ದೇವಕಿಯರು ಹೇಗೋ ಹಾಗೆ. ಕೃಷ್ಣ ಸಾಕ್ಷಾತ್ತಾಗಿ ಪ್ರಾದುರ್ಭವಿಸಿದಂತೆ ವೇದವ್ಯಾಸರೂಪವೂ ಸಾಕ್ಷಾತ್ತಾಗಿಯೇ ಪ್ರಾದುರ್ಭವಿಸಿತ್ತು.

ಶ್ರೀಕೃಷ್ಣ ಅವತರಿಸುತ್ತಲೇ ಶಂಖಚಕ್ರಗದಾಪದ್ಮಭೂಷಿತನಾಗಿ, ಪೀತಾಂಬರಧಾರಿಯಾಗಿ ಶ್ರೀವತ್ಸಲಾಂಛನನಾಗಿ ಕಂಗೊಳಿಸಿದಂತೆ ಶ್ರೀವೇದವ್ಯಾಸರು ಅವತರಿಸುತ್ತಲೇ ಜಟಾ-ಚರ್ಮಧರರಾಗಿದ್ದರು. ಯಜ್ಞೋಪವೀತ ಧರಿಸಿದ್ದರು. ಸಕಲವೇದಗಳನ್ನೂ ಏಕಕಾಲಕ್ಕೆ ಮುಖದಿಂದ ಉಚ್ಚರಿಸುತ್ತಿದ್ದರು; ಎಂದರೆ ಕೃಷ್ಣನಂತೆಯೇ ಇದು ಶ್ರೀಹರಿಯ ಸಾಕ್ಷಾದ್ರೂಪ ಎಂದಾಗುವುದು. ಮೂಢ ಜನ ತಿಳಿದಿರುವಂತೆ ವ್ಯಾಸರು ಯಾವುದೋ ಒಬ್ಬ ಸಾಮಾನ್ಯ ಋಷಿಯಲ್ಲ.

ಶ್ರೀವ್ಯಾಸರೂಪ ಸಾಕ್ಷಾದ್ರೂಪ ಎಂಬ ಮಾತು ಭಗವದ್ಗೀತೆಯಲ್ಲಿ ಎರಡು ಬಾರಿ ಬಂದಿದೆ : ''**ಮುನೀನಾಮಪ್ಯಹಂ ವ್ಯಾಸಃ**'', ''**ವೇದಾಂತಕೃದ್ವೇದವಿದೇವ ಚಾಹಂ**''. ಮುನೀನಾಮಪ್ಯಹಂ ವ್ಯಾಸಃ ಎಂಬಲ್ಲಿ ''**ರಾಮಃ ಶಸ್ತ್ರಭೃತಾಮಹಂ, ಸಿದ್ಧಾನಾಂ ಕಪಿಲೋ ಮುನಿಃ, ವಾಸುದೇವೋಸ್ಮಿ ವೃಷ್ಣೀನಾಂ**'' ಎಂಬಲ್ಲಿ ಹೇಗೋ ಹಾಗೆ ಸಾಕ್ಷಾದ್ವಿಭೂತಿರೂಪ ಎಂದರ್ಥ.

ವೇದಾಂತಕೃತ್ ಎಂಬಲ್ಲಿ ವೇದಾಂತ ಎಂದರೆ ಬ್ರಹ್ಮಸೂತ್ರ. ವೇದಾಂತಕೃತ್ ಎಂದರೆ ಬ್ರಹ್ಮಸೂತ್ರ ರಚಿಸಿದವರು ಶ್ರೀವೇದವ್ಯಾಸರು ಎಂದರ್ಥ.

ಬದರಿಯಲ್ಲಿ ಮುಖ್ಯವಾಗಿ ನೆಲೆಸಿದ್ದರಿಂದ ಬಾದರಾಯಣ ಎಂದು ವೇದವ್ಯಾಸ -ರೂಪಕ್ಕೆ ಮತ್ತೊಂದು ಹೆಸರು. ಇದೂ ಅವರ ಸರ್ವೋತ್ತಮತ್ವವನ್ನೇ ಸೂಚಿಸುವುದು. ಬದರಿ ಸರ್ವೋನ್ನತವಾದ ವೈಷ್ಣವ ಕ್ಷೇತ್ರ. ಅದಕ್ಕೆ ಮಿಗಿಲಾದ ಪಾಪನಾಶಕವಾದ ಮತ್ತೊಂದು ಕ್ಷೇತ್ರವಿಲ್ಲ ಎಂಬುದು ಮಧ್ವಸಂದೇಶ (''ನೇದೃಶಂ ಸ್ಥಲಮಲಂ ಶಮಲಘ್ನಂ''). ಅದರ ಅಧಿಪತಿಯಾದ ಶ್ರೀಹರಿ ಸಂಸಾರ ಮೂಲವಾದ ಸಕಲಪಾಪಗಳನ್ನು ಪರಿಹರಿಸುವುದರಿಂದ ಸರ್ವೋತ್ತಮ ಎಂದಾಗುವುದು.

ಬದರಿ ಶೀತಕ್ಕೆ ಹೆಸರಾದ ವಿಶಿಷ್ಟಕ್ಷೇತ್ರ. ಅಲ್ಲಿಯ ಶೀತಲಗಂಗೆಯಾದ ಅಲಕನಂದೆಯಲ್ಲಿ ಅರುಣೋದಯಸ್ನಾನವನ್ನು ವಿಧ್ಯುಕ್ತವಾಗಿ ಮಾಡುವ ಮೂಲಕ ಶ್ರೀಮನ್ಮಧ್ವಾಚಾರ್ಯರು ತಾವು ಸಾಕ್ಷಾತ್ ಜೀವೋತ್ತಮರಾದ ವಾಯುದೇವರ ಅವತಾರರು ಎಂದು ಸೂಚಿಸಿದ ವಿವರ ಸುಮಧ್ವವಿಜಯದಲ್ಲಿ ಬಂದಿದೆ (ಅಂಶ ಏಷ ಪೃಷತಾಮಧಿಪಸ್ಯ). ಅದರಂತೆ ಬದರಿಯಲ್ಲಿ ತಾನು ಸದಾ ಸ್ವಾಮಿಯಾಗಿ ನೆಲೆಸಿರುವ ಮೂಲಕ ಸರ್ವೋತ್ತಮನಾದ ಶ್ರೀಹರಿ ಎಂದು ಶ್ರೀವೇದವ್ಯಾಸರು ಸೂಚಿಸಿರುವರು ಎಂದು ತಿಳಿಯಬಹುದು.

ಬದರಿಯಲ್ಲಿ ನರ ಮೊದಲಾದ ಇತರರೂ ಇರುವರಾದರೂ ಅವರಿಗೆ ಹಾಗೆ ಅಲ್ಲಿ ನೆಲೆಸಿರಲು ಸಾಧ್ಯವಾಗಿರುವುದು ಸರ್ವೋತ್ತಮನಾದ ಶ್ರೀಹರಿಯ ಜೊತೆ ಇರುವುದ-ರಿಂದಾಗಿ ಮಾತ್ರ ಎಂದಾಗುವುದರಿಂದ ಅದು ಮೂಲತಃ ಶ್ರೀಹರಿಯ ಹಿರಿಮೆಯೇ ಆಗುವುದು ಎಂಬುದನ್ನು ಗಮನಿಸಬೇಕು.

ಶ್ರೀವೇದವ್ಯಾಸರೂಪ ಉಪಲಬ್ಧ ವೇದಭಾಗಗಳನ್ನು ಮಾತ್ರ ಸಂಕಲಿಸಿದ ರೂಪ-ವಾಗಲೀ ಅಥವಾ ನಷ್ಟವಾಗಿದ್ದ ಕೆಲವು ವೇದಭಾಗಗಳನ್ನು ಪ್ರಕಟಿಸಿದ ರೂಪವಾಗಲೀ ಆಗಿರದೆ ಸೃಷ್ಟಿಯ ಪ್ರಾರಂಭದಲ್ಲಿದ್ದಂತೆ ಸಕಲವೇದಗಳನ್ನೂ ಸಹ ಪ್ರವರ್ತಿಸಿದ ಅದ್ಭುತರೂಪ. (ಯಥಾಽಽದಿ ಸೃಷ್ಟೌ - ಮ.ಭಾ.ತಾ.ನಿ.) ಆದ್ದರಿಂದಲೇ ಇದು ಸಾಮಾನ್ಯ ಋಷಿಯ ರೂಪವಾಗಿರದೆ ಸಕಲವೇದಪ್ರತಿಪಾದ್ಯನಾದ ಶ್ರೀಹರಿಯ ರೂಪ ಎಂದಾಗುವುದು.

ಶ್ರೀವೇದವ್ಯಾಸರೂಪದಿಂದ ಮಹಾಭಾರತವನ್ನು ರಚಿಸಿದಾಗ ಅವರಿಗೆ ಕೇವಲ ೩ ವರ್ಷ ವಯಸ್ಸಾಗಿತ್ತು ಎಂಬ ಮಾತು ಮಹಾಭಾರತದಲ್ಲಿದೆ. ಆ ಮುನ್ನವೇ ಅವರು

ಸಕಲ ವೇದಗಳನ್ನು ಪ್ರಕಟಿಸಿಯಾಗಿತ್ತು. ಎಂದರೆ ಅವರು ಸಾಕ್ಷಾದ್ಭಗವಂತನೇ ಎಂದಾಗುವುದಲ್ಲವೇ ! ಇದು ಬಾಲಕೃಷ್ಣರೂಪದಿಂದ ಬ್ರಹ್ಮಾಂಡವನ್ನು ಬಾಯಲ್ಲಿ ತೋರಿದ ಹಿರಿಮೆಯನ್ನು ಜ್ಞಾಪಿಸುವಂತಿದೆ.

ಶ್ರೀವೇದವ್ಯಾಸರು ವೇದಗಳನ್ನು ಪ್ರಕಟಿಸಿದವರು ಮಾತ್ರವಾಗಿರದೆ, ಅವುಗಳ ಅರ್ಥವನ್ನೂ ಪ್ರಕಟಿಸಿದವರು. ಮಹಾಭಾರತವನ್ನು ರಚಿಸಿದವರು. ಶ್ರೀಮದ್ಭಾಗವತಾದಿ ಹದಿನೆಂಟು ಮಹಾಪುರಾಣಗಳನ್ನೂ ಮಹಾವರಾಹ ಮೊದಲಾದ ಹದಿನೆಂಟು ಉಪಪುರಾಣಗಳನ್ನೂ ರಚಿಸಿದವರು. ಅದರೊಂದಿಗೆ ಮೂಲರಾಮಾಯಣಾದಿ ಇತರ ಆಕರಗ್ರಂಥಗಳನ್ನೂ ಪ್ರಸಾರಕ್ಕೆ ತಂದವರು. ಹೀಗೆ ಅವರು ಮಾಡಿದ ಜ್ಞಾನಕಾರ್ಯ ಅನನ್ಯಸಾಧ್ಯವಾಗಿತ್ತು. ಅವರನ್ನು ಶ್ರೀಹರಿ ಎಂದು ಸ್ಫುಟಪಡಿಸುವಂತಿತ್ತು.

ಜ್ಞಾನಪ್ರಪಂಚದ ವಿಶ್ವರೂಪವನ್ನು ಪ್ರಕಟಿಸಿದ್ದು ಶ್ರೀವ್ಯಾಸರೂಪದ ಹಿರಿಮೆ. ಅನಂತರದ ಸಮಸ್ತ ಜ್ಞಾನಪ್ರಪಂಚವು ಇವರ ಉಪದೇಶದಿಂದಲೇ ಬೆಳೆದು ಬಂದದ್ದು. ಅದಕ್ಕೆಂದೇ 'ವ್ಯಾಸೋಚ್ಛಿಷ್ಟಂ ಜಗತ್ಸರ್ವಂ' ಎಂಬ ಮಾತು ವಿದ್ವದ್ರೂಢಿಯಲ್ಲಿದೆ.

ಗ್ರಂಥರಚನೆಯಿಂದ ಮಾತ್ರವಲ್ಲದೆ ಸಕಲರಿಗೂ ಉಪದೇಶಕರಾದ ಗುರುಗಳಾಗಿಯೂ ಸಹ ಶ್ರೀವೇದವ್ಯಾಸರು ಜಗದ್ಗುರುಗಳಾಗಿ ಮಾನ್ಯರಾಗಿರುವರು. ಆ ಕಾಲದ ಭೀಮಸೇನಾದಿ ಪಾಂಡವರೊಂದಿಗೆ ಸಮಸ್ತ ವಿದ್ವಜ್ಜನತೆಯೆಲ್ಲ ಶ್ರೀವೇದವ್ಯಾಸರ ಶಿಷ್ಯರಾಗಿದ್ದರು ಎಂಬ ವಿವರ ಇದಕ್ಕೆ ಸಾಕ್ಷಿ :

**ಯೇ ಯೇ ಹಿ ದೇವಾಃ ಪೃಥಿವೀಂ ಗತಾಸ್ತೇ ಸರ್ವೇ ಶಿಷ್ಯಾಃ ಸತ್ಯವತೀಸುತಸ್ಯ ।**
**(ಮ.ಭಾ.ತಾ.ನಿ)**

ವಿಚಿತ್ರವೀರ್ಯನ ಅಕಾಲಮೃತ್ಯುವಿನಿಂದಾಗಿ ನಷ್ಟಪ್ರಾಯವಾಗಿದ್ದ ಕುರುವಂಶವನ್ನು ಪುನಃ ಮುಂದುವರೆಸಿದ್ದು ಈ ರೂಪದ ಮತ್ತೊಂದು ಹಿರಿಮೆ. ಅಂಬಿಕೆಯಲ್ಲಿ ಧೃತರಾಷ್ಟ್ರ, ಅಂಬಾಲಿಕೆಯಲ್ಲಿ ಪಾಂಡುರಾಜ, ಹಾಗು ಅಂಬಿಕೆಯ ದಾಸಿಯಲ್ಲಿ ವಿದುರ ಜನಿಸಿದ್ದು ಶ್ರೀವೇದವ್ಯಾಸರ ಅನುಗ್ರಹದಿಂದಲೇ. ಹೀಗೆ ಸಮಸ್ತ ಕುರುವಂಶವನ್ನು ಉಳಿಸಿದ ಶ್ರೇಯಸ್ಸು ಈ ರೂಪದ್ದು.

ತಮ್ಮ ರೂಪವನ್ನು ಕಂಡು ಅಂಜಿದ ಅಂಬಿಕೆಗೆ ಹುಟ್ಟು ಕುರುಡನಾಗಿ ಧೃತರಾಷ್ಟ್ರ ಜನಿಸಿದ. ಇದು ವೇದವ್ಯಾಸರ ಪ್ರತಿಕೃತಿಗಳಂತಿರುವ ಮಹಾಭಾರತಾದಿಗಳನ್ನು ಕಾಣದ ಜನ ಕುರುಡರಾಗುವುದಕ್ಕೆ ಸೂಚಕ ಎಂಬಂತಿದೆ.

ಅಂಬಿಕೆಯ ದಾಸಿ ಶ್ರೀವೇದವ್ಯಾಸರ ಬಳಿಗೆ ತೆರಳಲು ಸಮ್ಮತಿಸಿದಾಗಲೇ ಅವಳಿಗೆ ಮಹಾರಾಣಿಯ ವೇಷಭೂಷಣಗಳೆಲ್ಲ ಲಬ್ಧವಾದವು ಎಂದರೆ ಶ್ರೀವೇದವ್ಯಾಸರ ಕೃತಿಗಳನ್ನು ಶ್ರವಣಾದಿಗಳನ್ನು ಮಾಡಲು ಸಂಕಲ್ಪಿಸಿದಾಗಲೇ ಸಕಲ ಭೋಗಭಾಗ್ಯಗಳು ಲಭಿಸುವವು ಎಂಬುದಕ್ಕೆ ಸೂಚಕ.

ದಾಸಿಯು ಕಣ್ಣು ಮುಚ್ಚಲಿಲ್ಲ. ಭೀತಿಗೂ ಒಳಗಾಗಲಿಲ್ಲ. ಭಕ್ತಿಯಿಂದ ಸೇವಿಸಿದಳು. ಫಲವಾಗಿ ವಿದುರನಂತಹ ಧರ್ಮಮೂರ್ತಿ ಪುತ್ರನಾಗಿ ಜನಿಸಿದ. ಶ್ರೀವೇದವ್ಯಾಸರ ಕೃತಿಗಳನ್ನು ಪ್ರೀತಿಯಿಂದ ಓದುವವರಿಗೆ ಧರ್ಮಾದಿ ಸಕಲಪುರುಷಾರ್ಥಗಳೂ ಲಭ್ಯವಾಗುವವು ಎಂದರ್ಥ.

ಶ್ರೀವೇದವ್ಯಾಸರು ಧೃತರಾಷ್ಟ್ರಾದಿಗಳಿಗೆ ಜನ್ಮ ನೀಡಿದ್ದು ಮಾತ್ರವಲ್ಲದೆ ಕಾಲಕಾಲಕ್ಕೆ ಅವರ ಬಳಿ ಆಗಮಿಸಿ ಉಪದೇಶ ನೀಡಿ ಅನುಗ್ರಹಿಸುತ್ತಿದ್ದರು. ಇದು ಮಹಾಭಾರತ-ದೊಂದಿಗೆ ಅವರ ಪಾತ್ರ ಔಪಚಾರಿಕವಾಗಿರದೆ ಅತ್ಯಂತ ಪ್ರಧಾನವಾಗಿತ್ತು ಎಂಬುದಕ್ಕೆ ನಿದರ್ಶನ.

ಶ್ರೀವೇದವ್ಯಾಸರನ್ನು ನೋಡಲಾಗದೆ ಕಣ್ಣುಗಳನ್ನು ಮುಚ್ಚಿಕೊಂಡಿದ್ದಕ್ಕೆ ಅಂಬಿಕೆಗೆ ಕುರುಡನಾದ ಧೃತರಾಷ್ಟ್ರ ಜನಿಸಿದ. ಅವನಿಗೆ ಅಂತರಂಗದಲ್ಲಿ ಹರಿಯನ್ನು ಎಂದೂ ಕಾಣಲಾಗದ ದುರ್ಯೋಧನಾದಿ ದುಷ್ಟಮಕ್ಕಳು ಜನಿಸಿದರು. ಶ್ರೀವೇದವ್ಯಾಸರ ಕೃತಿಗಳನ್ನು ಕಾಣದ ಜನ ದೈವದರ್ಶನ ವಿಮುಖರಾಗುವುದಕ್ಕೆ ಇದು ದ್ಯೋತಕ.

ಪಾಂಡವರು ಪಾಂಡುರಾಜನ ಪುತ್ರರಾದರೆ, ಕೌರವರು ಧೃತರಾಷ್ಟ್ರನ ಪುತ್ರರು. ಎಂದರೆ ಪಾಂಡವರಂತೆ ಕೌರವರೂ ಶ್ರೀವೇದವ್ಯಾಸರ ಮೊಮ್ಮಕ್ಕಳು. ಆದರೆ ವ್ಯಾಸಾನುಗ್ರಹ ಲಭಿಸಿದ್ದು ಪಾಂಡವರಿಗೆ ಹೊರತು ಕೌರವರಿಗಲ್ಲ. ಇದು ಎಲ್ಲರೂ ಭಗವಂತನ ಸೃಷ್ಟಿಯೇ ಆದರೂ ಭಗವದನುಗ್ರಹಕ್ಕೆ ಪಾತ್ರರಾಗುವವರು ಪಾಂಡವರಂತಹ ಧರ್ಮಾತ್ಮರೇ ಹೊರತು ಕೌರವರಂತಹ ಪಾಪಾತ್ಮರಲ್ಲ ಎಂಬುದಕ್ಕೆ ಸೂಚಕ.

ವಾಲ್ಮೀಕಿ ಮುನಿಯು ರಾಮಾಯಣವನ್ನು ರಚಿಸಿ ಶ್ರೀರಾಮದೇವರ ಮುಂದೆಯೇ ಲವಕುಶರಿಂದ ಹಾಡಿಸಿದ ಮಹಾತ್ಮ. ಎಂದರೆ ಶ್ರೀರಾಮದೇವರ ಸಮಕಾಲಿಕ ಭಕ್ತ. ಆದರೆ ವೇದವ್ಯಾಸರು ಮಹಾಭಾರತವನ್ನು ಬರೆದವರು ಮಾತ್ರವಲ್ಲದೆ ಅದರ ಮುಖ್ಯಸೂತ್ರ-ಧಾರರೂ ಸಹ ಎಂಬುದು ವಿಶೇಷ. ಇಂತಹ ಹಿರಿಮೆ ವಾಲ್ಮೀಕಿಯದಾಗಿಲ್ಲ ಎಂಬುದನ್ನು ಗಮನಿಸಬೇಕು.

ವೇದವ್ಯಾಸರು ಮಹಾಭಾರತ ಬರೆದಾಗ ಇನ್ನೂ ಧೃತರಾಷ್ಟ್ರಾದಿಗಳೇ ಹುಟ್ಟಿರಲಿಲ್ಲ. ಮಹಾಭಾರತ ರಚಿಸಿದಾಗ ಅವರಿಗೆ ಮೂರುವರ್ಷಗಳಾಗಿದ್ದರೆ ಧೃತರಾಷ್ಟ್ರಜನಿಸಿದಾಗ ಅವರಿಗೆ ೬೦೦ವರ್ಷಗಳಾಗಿದ್ದವು. ಎಂದರೆ ಅನೇಕ ಶತಮಾನಗಳ ಮುಂಚೆಯೇ ಮಹಾಭಾರತದ ರಚನೆಯನ್ನು ಅವರು ಮಾಡಿದ್ದರು.

ಮಹಾಭಾರತ ಘಟನೆ ನೋಡಿ ರಚಿತವಾದ ಕೃತಿಯಲ್ಲ. ಅದು ರಚಿತವಾದಂತೆ ಮುಂದಿನ ಘಟನೆ ನಡೆಯಿತು ಎಂಬುದು ಸೋಜಿಗ. ಇದು ವ್ಯಾಸರ ಸರ್ವಜ್ಞತ್ವಕ್ಕೆ ಹಿಡಿದ ಕನ್ನಡಿ.

ಪಾಂಡವರು ವಿಶೇಷವಾಗಿ ಶ್ರೀವೇದವ್ಯಾಸರ ಬಳಿ ಸಾಕ್ಷಾತ್ ಶಿಷ್ಯರಾಗಿ ಅಧ್ಯಯನ ಮಾಡಿದ ಮಹಾನುಭಾವರು. ಭೀಮಸೇನ ಪಾಂಡವಶ್ರೇಷ್ಠ. ಮಧ್ವರೂಪದಿಂದಲೂ ವೇದವ್ಯಾಸರ ಬಳಿ ಅಧ್ಯಯನ ಮಾಡಿದ್ದು ಭೀಮಸೇನನ ವೈಶಿಷ್ಟ್ಯ. ಅದಕ್ಕೆಂದೇ

ಮಹಾಭಾರತಕ್ಕೆ ತಾತ್ಪರ್ಯನಿರ್ಣಯ ರಚಿಸುವ ಮಹಾಕಾರ್ಯವನ್ನು ಶ್ರೀವ್ಯಾಸರು ತಮ್ಮ ಶಿಷ್ಯಾಗ್ರೇಸರರಾದ ಅವರಿಗೇ ವಹಿಸಿದರು ಎಂದು ತಿಳಿಯಬಹುದು. ಈ ಅರ್ಥದಲ್ಲಿ ಅವರು ನಿಜವಾದ ಅರ್ಥದಲ್ಲಿ ಅಭಿನವವೇದವ್ಯಾಸರು.

ಏಕಚಕ್ರನಗರದಿಂದ ಪಾಂಚಾಲನಗರಕ್ಕೆ ದ್ರೌಪದಿಯ ಸ್ವಯಂವರಕ್ಕೆ ಪಾಂಡವರನ್ನು ಕಳುಹಿಸಿಕೊಟ್ಟವರೂ ಶ್ರೀವೇದವ್ಯಾಸರೇ. ದ್ರೌಪದಿಯ ಮೂಲರೂಪವನ್ನು ಪಾಂಡವರ ಮೂಲರೂಪಗಳನ್ನೂ ದ್ರುಪದರಾಜನಿಗೆ ಸಾಕ್ಷಾತ್ತಾಗಿ ದರ್ಶನ ಮಾಡಿಸುವ ಮೂಲಕ ದ್ರೌಪದಿ ಕಲ್ಯಾಣವನ್ನು ಮಾಡಿಸಿದ್ದು ಶ್ರೀವೇದವ್ಯಾಸರೇ. ವಿವಾಹಸಮಯದಲ್ಲಿ ಸ್ವತಃ ಉಪಸ್ಥಿತರಿದ್ದು ಅನುಗ್ರಹಿಸಿದ್ದೂ ಅವರೇ. ಹೀಗೆ ವೇದವ್ಯಾಸರ ಪಾತ್ರ ದ್ರೌಪದೀಕಲ್ಯಾಣದ ಪೂರ್ವಾಪರಗಳಲ್ಲಿ ಎದ್ದು ಕಾಣುವಂತಹದು.

ದ್ರೌಪದಿಯು ಭಾವಿ ಸರಸ್ವತೀ. ಎಂದರೆ ವಿದ್ಯೆಯ ಸಂಕೇತ. ದ್ರೌಪದೀ ಕಲ್ಯಾಣವೆಂದರೆ ವಿದ್ಯಾಪ್ರಾಪ್ತಿ. ಅದರ ಪೂರ್ವಾಪರಗಳಲ್ಲಿ ಶ್ರೀವೇದವ್ಯಾಸರ ಪಾತ್ರ ಎಂದರೆ ಜ್ಞಾನಪ್ರಾಪ್ತಿಗೆ ಶ್ರೀವೇದವ್ಯಾಸರೇ ಮುಖ್ಯ ಆಸರೆ ಎಂದು ಇದರ ಆಂತರ್ಯ.

ಸಭಾಪರ್ವದಲ್ಲಿ ರಾಜಸೂಯಯಾಗದ ಮಹಾಸಭೆಯಲ್ಲಿ ನಡೆದ ಅತ್ಯಂತ ಮುಖ್ಯಕಾರ್ಯ ತತ್ತ್ವನಿರ್ಣಯದ ವಾದಗೋಷ್ಠಿಗಳು. ಅದರ ಸಮಸ್ತನಿರ್ಣಯ ಕಾರ್ಯದ ಸಂಪೂರ್ಣಜವಾಬ್ದಾರಿ ಶ್ರೀವೇದವ್ಯಾಸರದಾಗಿದ್ದಿತು. ಅದರಲ್ಲಿ ಪಾಲ್ಗೊಂಡಿದ್ದವರು ಬ್ರಹ್ಮಾದಿದೇವತೆಗಳಿಂದ ಪ್ರಾರಂಭಿಸಿ ಸಮಸ್ತ ಋಷಿಮುನಿ- ಗಳೊಂದಿಗೆ ದುರ್ಯೋಧನನಂತಹ ದುಷ್ಟವರ್ಗ. ಇಡೀ ವಿದ್ವತ್ಸಭೆಯನ್ನು ಮಹಾಧ್ಯಕ್ಷರಾಗಿ ನಿರ್ವಹಿಸಿದ ಹಿರಿಮೆ ಶ್ರೀವೇದವ್ಯಾಸರದು. ಹೀಗೆ ಒಬ್ಬನೇ ಪ್ರಾಶ್ನಿಕ ಸಭೆಯನ್ನು ನಿರ್ವಹಿಸಿದಾಗ ಆತ ಸರ್ವಜ್ಞನೇ ಆಗಿರಬೇಕು ಎಂಬುದು ನಿಯಮ. ಇದು ಶ್ರೀವೇದವ್ಯಾಸರ ಸರ್ವಜ್ಞತ್ವಕ್ಕೂ ಸಾಕ್ಷಾದ್ಭಗವತ್ಸ್ವರೂಪತ್ವಕ್ಕೂ ನಿದರ್ಶನ.

ಪಾಂಡವರನ್ನು ದುರ್ಯೋಧನ ದ್ಯೂತದ ವಂಚನೆಯಿಂದ ವನಕ್ಕೆ ಕಳುಹಿಸಿದಾಗ ವೇದವ್ಯಾಸರು ಹಸ್ತಿನಾವತಿಗೆ ಆಗಮಿಸಿ ಧೃತರಾಷ್ಟ್ರನನ್ನು ಎಚ್ಚರಿಸಿದರು. ನೀನು ಮಾಡಿದ ಈ ಕಾರ್ಯ ನನಗೆ ಮೆಚ್ಚುಗೆಯಾಗದು. ಪಾಂಡವರ ಮೇಲಿನ ತಮ್ಮ ಅಗಾಧಪ್ರೀತಿಯನ್ನು ಅವರು ಈ ರೀತಿ ವ್ಯಕ್ತಪಡಿಸುತ್ತಾ ಧರ್ಮಾದಿಗಳನ್ನು ಕಾಡುಪಾಲು ಮಾಡುವ ಕುರುಡು ಪ್ರವೃತ್ತಿಯನ್ನು ತಾವು ಎಂದೂ ಸಹಿಸುವುದಿಲ್ಲ ಎಂದು ಜಗತ್ತಿಗೆ ಸಾರಿದರು.

ದುರ್ಯೋಧನನಿಗೆ ಉಪದೇಶಿಸುವಂತೆ ಧೃತರಾಷ್ಟ್ರ ಪ್ರಾರ್ಥಿಸಿದಾಗ ವೇದವ್ಯಾಸರು ನಿರಾಕರಿಸಿ ನುಡಿದರು. ''ಅವನಿಗೆ ಕೇಳುವ ಬಯಕೆಯೇ ಇಲ್ಲ, ಅವನೊಂದಿಗೆ ನಾನು ಮಾತನಾಡಲಾರೆ''. ಈ ಮೂಲಕ ಅವರು ದುರ್ಯೋಧನಪ್ರವೃತ್ತಿಯ ಜನರಿಗೆ ಮಹಾಭಾರತಾದಿಗಳ ಭಾವ ಎಂದೂ ತಿಳಿಯದು ಎಂಬ ತತ್ತ್ವವನ್ನು ಸೂಚಿಸಿದರು.

ಕುರುಕ್ಷೇತ್ರಯುದ್ಧದ ಪ್ರಾರಂಭದಲ್ಲಿ ಧೃತರಾಷ್ಟ್ರನ ಬಳಿಗೆ ಆಗಮಿಸಿದ ಶ್ರೀವೇದವ್ಯಾಸರು ನುಡಿದರು. ಧೃತರಾಷ್ಟ್ರ ! ನೀನು ಕುರುಪಾಂಡವ ಯುದ್ಧವನ್ನು ನೋಡಬಯಸುವಿಯೋ.

ಅದರ ವಿವರಗಳನ್ನು ಕೇಳಬಯಸುವಿಯೋ? ಹೀಗೆ ಕೇಳುವ ಮೂಲಕ ತಾವು ಕೇಳಿಸಬಲ್ಲ, ನೋಡಿಸಬಲ್ಲ ಮಹಾಸಮರ್ಥರು ಎಂಬುದನ್ನು ಸೂಚಿಸಿದರು.

ಧೃತರಾಷ್ಟ್ರ ಯುದ್ಧದ ವಿವರಗಳನ್ನು ಕಾಣಬಯಸದೆ ಕೇವಲ ನೋಡಬಯಸಿದಾಗ ತಮ್ಮ ಶಿಷ್ಯ ಸಂಜಯನಿಗೆ ದಿವ್ಯದೃಷ್ಟಿಯನ್ನು ನೀಡಿ ಧೃತರಾಷ್ಟ್ರ ಬಯಸುವ ಯುದ್ಧದ ಸಕಲವಿವರಗಳನ್ನು ತಿಳಿಸುವಂತೆ ಆದೇಶಿಸಿದರು. ಹೀಗೆ ಒಬ್ಬನಿಗೆ ಕೇಳುವ ಭಾಗ್ಯ ಮತ್ತೊಬ್ಬನಿಗೆ ನೋಡುವ ಭಾಗ್ಯವನ್ನು ನೀಡಿ ತಮ್ಮ ವಚನವನ್ನು ಸತ್ಯಮಾಡಿ ತೋರಿಸಿದರು.

ಸಂಜಯ ಯುದ್ಧಮಾಡದ ಒಬ್ಬ ಸೂತ. ಅವನು ನಿರ್ವಹಿಸಬೇಕಾದ ಕಾರ್ಯ ಪರಶುರಾಮರ ದಿವ್ಯಾಸ್ತ್ರಗಳ ಪ್ರಯೋಗಗಳಿಂದ ಕೂಡಿದ ವಿಶ್ವ ಕಂಡ ಮಹಾಸಮರದ ವೀಕ್ಷಕವಿವರಣೆ. ತಜ್ಞನಲ್ಲದ ಅವನಿಂದ ಅಂತಹ ಅತ್ಯಂತ ಅಸಾಧ್ಯವಾದ ಕಾರ್ಯವನ್ನು ಲೀಲಾಜಾಲವಾಗಿ ಮಾಡಿಸಿದ ಹಿರಿಮೆ ಶ್ರೀವೇದವ್ಯಾಸರದು : 'ಕರ್ತುಂ ಅಕರ್ತುಂ ಅನ್ಯಥಾಕರ್ತುಂ ಅಪಿ ಸಮರ್ಥಃ' ಎಂಬ ಶ್ರೀಹರಿಯ ಲಕ್ಷಣ ಇಲ್ಲಿ ಸ್ಪಷ್ಟ ಕಂಡಿದೆ.

ಸಂಜಯನಿಗೆ ದಿವ್ಯದೃಷ್ಟಿ ನೀಡಿದ್ದು ಮಾತ್ರವಲ್ಲದೆ ಅವನು ಸಮರದ ವಿವರಗಳನ್ನು ನೀಡುತ್ತಿದ್ದಾಗ ಅಲ್ಲಿಯೇ ಸನ್ನಿಹಿತರಾಗಿದ್ದು ಅನುಗ್ರಹಿಸಿದರು. ಆ ಮೂಲಕ ಮಹಾಭಾರತಾದಿ ಗ್ರಂಥಗಳ ಪ್ರವಚನ ನಡೆಯುವಾಗ ತಾವು ವ್ಯಾಸಪೀಠದ ರೂಪದಲ್ಲಿ ಉಪಸ್ಥಿತರಿರುವುದನ್ನು ಜಗತ್ತಿಗೆ ಸಾರಿದರು.

ಸಂಜಯನಿಗೆ ದೊರೆತಭಾಗ್ಯ ಮೇಲ್ನೋಟಕ್ಕೆ ಯುದ್ಧದ ವಿವರಣೆ ನೀಡುವ ಕಾರ್ಯ. ಆದರೆ ಅವನಿಗೆ ಸಿಕ್ಕ ಮಹಾಭಾಗ್ಯ ಶ್ರೀಕೃಷ್ಣ ಉಪದೇಶಿಸಿದ್ದಂತೆಯೇ ಗೀತೆಯನ್ನು ಸಾಕ್ಷಾತ್ ಶ್ರವಣ ಮಾಡುವ ಯೋಗ, ಶ್ರೀಕೃಷ್ಣ ತೋರಿದ ವಿಶ್ವರೂಪವನ್ನು ಕಣ್ಣಾರೆ ಕಾಣುವ ಮಹಾಯೋಗ. ಮುಂದೆ ಭೀಮಸೇನಾದಿಗಳ ಅಖಂಡಯುದ್ಧವೈಭವ, ಕೃಷ್ಣನ ಬಗೆ ಬಗೆಯ ಮಹಿಮೆಗಳ ಅವಲೋಕನ. ಹೀಗೆ ಸಂಜಯ ಜೀವನದ ಪರಮಸಾರ್ಥಕ್ಯವನ್ನೇ ಅದರಿಂದ ಕಾಣುವಂತಾಯಿತು. ವ್ಯಾಸಾನುಗ್ರಹದ ವೈಖರಿಯೆಂದರೆ ಇದೇ.

ಕುರುಕ್ಷೇತ್ರಯುದ್ಧ ನಡೆಯುವಾಗ ಧರ್ಮರಾಜನ ಪಾಲಿನ ಅತ್ಯಂತ ದುರ್ಭರಕ್ಷಣಗಳಲ್ಲಿ ಒಂದು ಅಭಿಮನ್ಯುವಿನ ಸಾವು ಮತ್ತೊಂದು ಘಟೋತ್ಕಚನ ಸಾವು. ಆ ಎರಡೂ ಪ್ರಸಂಗಗಳಲ್ಲೂ ಯುಧಿಷ್ಠಿರ ಅತ್ಯಂತ ಹತಾಶನಾದಾಗ ಆ ಕೂಡಲೇ ಅಲ್ಲಿಗೆ ಧಾವಿಸಿ ಅವನಿಗೆ ತತ್ತ್ವೋಪದೇಶಮಾಡಿ ನೆಮ್ಮದಿ ಕರುಣಿಸಿದ ಹಿರಿಮೆ ಶ್ರೀವೇದವ್ಯಾಸರದು. ಸಂಸಾರಕುರುಕ್ಷೇತ್ರದಲ್ಲಿ ಪುತ್ರಶೋಕಾದಿಗಳಿಂದ ಕಂಗೆಡುವ ಜನತೆಗೆ ಶ್ರೀವೇದವ್ಯಾಸರ ಗ್ರಂಥಗಳು ನೀಡುವ ಸಾಂತ್ವನ ಈ ಬಗೆಯದು ಎಂದು ಅರಿಯಬೇಕು.

ಅಶ್ವತ್ಥಾಮರು ಭೀಮನಿಗೆ ಅಂಜಿ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸಿದಾಗ ಅರ್ಜುನ ಅದಕ್ಕೆ ಪ್ರತಿಯಾಗಿ ತಾನೂ ಸಹ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸಿದ. ಅವೆರಡೂ

ಒಂದನ್ನೊಂದು ಸಂಧಿಸುವ ಮುನ್ನ ಅವೆರಡರ ಮಧ್ಯದಲ್ಲಿ ಕಾಣಿಸಿಕೊಂಡು ಅವುಗಳ ಸಂಘರ್ಷದಿಂದಾಗುವ ಲೋಕನಾಶವನ್ನು ತಪ್ಪಿಸಿದ ಮಹಾಕರುಣಾಳುಗಳು ಶ್ರೀವೇದವ್ಯಾಸರು.

ಅಮೋಘವಾದ ಎರಡು ಬ್ರಹ್ಮಶಿರೋಸ್ತ್ರಗಳ ಮಧ್ಯೆ ಹಾಗೆ ಅನಾಯಾಸವಾಗಿ ನಿಲ್ಲುವ ಮೂಲಕ ತಾವು ಸಾಕ್ಷಾತ್ಪರಬ್ರಹ್ಮನಾದ ನಾರಾಯಣ ಎಂದು ಮತ್ತೊಮ್ಮೆ ರುಜುವಾತು ಮಾಡಿಕೊಟ್ಟ ಪ್ರಸಂಗವೂ ಇದಾಯಿತು.

ಯುಧಿಷ್ಠಿರ ಪಟ್ಟಾಭಿಷಿಕ್ತನಾದಮೇಲೂ ಬಂಧುವಧೆಯ ವ್ಯಥೆಯಿಂದ ರಾಜ್ಯತ್ಯಾಗಕ್ಕೆ ಮನಸ್ಸು ಮಾಡಿದಾಗ ಅವನಿಗೆ ಉಪದೇಶ ಮಾಡಿದ ಪ್ರಸಂಗದಲ್ಲೂ ಶ್ರೀವೇದವ್ಯಾಸರ ಪಾತ್ರದ ಹಿರಿಮೆ ಗೋಚರಿಸುವುದು. ಧರ್ಮಿಷ್ಠರನ್ನು ಅವರು ಸಕಲ ಹಂತಗಳಲ್ಲೂ ಕಾಪಿಡುವುದಕ್ಕೆ ಇದು ನಿದರ್ಶನ.

ಪ್ರಾಯಶ್ಚಿತ್ತವಾಗಿ ಯುಧಿಷ್ಠಿರ ಅಶ್ವಮೇಧಯಾಗವನ್ನು ಕೈಗೊಂಡಾಗ ಸೂಕ್ತವಾದ ಆರ್ಥಿಕ ನೆರವು ಕಾಣದೆ ಕಂಗೆಟ್ಟಿದ್ದ ಅವನಿಗೆ ಹಿಮಾಲಯದಲ್ಲಿದ್ದ ಅಪೂರ್ವವಾದ ಅಪಾರವಾದ ನಿಧಿಯನ್ನು ತೋರಿ ಅನುಗ್ರಹಿಸಿದವರೂ ಶ್ರೀವೇದವ್ಯಾಸರು. ತಮ್ಮನ್ನು ನಂಬಿದವರಿಗೆ ಧನವನ್ನು ಅನುಗ್ರಹಿಸುವ ಅವರ ಪರಿಗೂ ಇದು ನಿದರ್ಶನ.

ನಿಧಿಯನ್ನು ತೋರಿದ್ದು ಮಾತ್ರವಲ್ಲದೆ ಪಾಂಡವರೊಂದಿಗೆ ತಾವೂ ತೆರಳಿ ವಿಧ್ಯುಕ್ತವಾಗಿ ಅದು ಅವರಿಗೆ ದೊರೆಯುವಂತೆ ಮಾಡಿದ್ದ ಕೃಪಾಳುಗಳೂ ಶ್ರೀವೇದವ್ಯಾಸರು. ಈ ಬಗೆಯ ಅವರ ಕಾರ್ಯಗಳು ಅವರ ಅಪಾರ ಭಕ್ತವಾತ್ಸಲ್ಯಕ್ಕೆ ನಿದರ್ಶನ.

ಅಶ್ವಮೇಧಯಾಗದ ವಿಧಿವಿಧಾನಗಳ ಉಪದೇಶದೊಂದಿಗೆ ಸ್ವತಃ ತಾವೂ ಅಲ್ಲಿ ಉಪಸ್ಥಿತರಿದ್ದು ಅದನ್ನು ಸಾಂಗವಾಗಿ ನಡೆಸಿಕೊಟ್ಟ ಹಿರಿಮೆಯು ಶ್ರೀವೇದವ್ಯಾಸರದು. ಇದು ಪರಮಾತ್ಮ ತನ್ನ ಭಕ್ತರನ್ನು ಪ್ರತಿಕ್ಷಣದಲ್ಲೂ ಪಾಲಿಸುವ ರೀತಿಗೆ ನಿದರ್ಶನ.

ಭೀಮ ನೀಡಿದ ಎಚ್ಚರಿಕೆಯಿಂದ ವಿರಕ್ತಿ ಹೊಂದಿ ಧೃತರಾಷ್ಟ್ರ ಕಾಡಿಗೆ ತೆರಳಲು ಸಿದ್ಧನಾದಾಗ ಯುಧಿಷ್ಠಿರ ಅದಕ್ಕೆ ಸಮ್ಮತಿಸದಾದ ಪ್ರಸಂಗದಲ್ಲಿ ಕೂಡಲೇ ಅಲ್ಲಿಗೆ ಧಾವಿಸಿ ಹಾಗೆ ಮಾಡದಿರಲು ಉಪದೇಶ ನೀಡಿದವರು ವೇದವ್ಯಾಸರು. ಭೀಮನ ಕಾರ್ಯ ತಮಗೆ ಸಮ್ಮತ ಎಂಬುದನ್ನು ಆ ಮೂಲಕ ಅವರು ತೋರಿಕೊಟ್ಟರು : **ಹನುಮನ ಮತವೇ ಹರಿಯ ಮತವು.**

ಕುಂತಿ, ಗಾಂಧಾರೀ, ಸಂಜಯರೊಂದಿಗೆ ಧೃತರಾಷ್ಟ್ರ ವ್ಯಾಸಾಶ್ರಮದಲ್ಲಿ ತಪೋನಿರತನಾಗಿದ್ದಾಗ ಅಲ್ಲಿಗೆ ಧಾವಿಸಿದ ವೇದವ್ಯಾಸರು ಎಲ್ಲರಿಗೂ ಅವರು ಕೇಳಿದ್ದನ್ನು ನೀಡುವ ವರವನ್ನು ಕೊಟ್ಟಾಗ ಧೃತರಾಷ್ಟ್ರ ಗಾಂಧಾರಿಯರು ಬಯಸಿದ್ದು ಕುರುಕ್ಷೇತ್ರ ಯುದ್ಧದಲ್ಲಿ ಮಡಿದ ಸಮಸ್ತ ೧೮ ಅಕ್ಷೋಹಿಣೀ ಸೇನೆಯನ್ನು ಜೀವಂತ ಕಾಣಲು. ಕೂಡಲೇ ವೇದವ್ಯಾಸರು ಆ ಕ್ಷಣದಲ್ಲಿಯೇ ಅವರೆಲ್ಲರನ್ನೂ ಅಲ್ಲಿಗೆ ಜೀವಂತ ತರಿಸಿ ತಮ್ಮ ಅದ್ಭುತವಾದ ಸಾಮರ್ಥ್ಯವನ್ನು ತೋರಿದರು. ತಾವು ಜಗಜ್ಜನ್ಮಾದಿಕರ್ತನಾದ ಸಾಕ್ಷಾತ್

ನಾರಾಯಣ ಎಂದು ತಿಳಿಸಿಕೊಟ್ಟರು. ಶ್ರೀವ್ಯಾಸರ ಈ ಮಹಿಮೆ ಅವರ ಸರ್ವೋತ್ತಮತ್ವ-ವನ್ನು ಸ್ಫುಟಪಡಿಸುವ ಮತ್ತೊಂದು ಅದ್ಭುತಪ್ರಸಂಗ.

ಇದನ್ನು ಕೇಳಿ ತನ್ನ ಮೃತತಂದೆಯಾದ ಪರೀಕ್ಷಿದ್ರಾಜನನ್ನು ಕಾಣಲು ಜನಮೇಜಯ ರಾಜ ಬಯಸಿದಾಗ ಕೂಡಲೇ ಅವನನ್ನೂ ಅಲ್ಲಿಗೆ ಜೀವಂತ ಕರೆಸಿದ ಹಿರಿಮೆ ಶ್ರೀವೇದವ್ಯಾಸರದು. ಇದು ಮತ್ತೊಂದು ರೀತಿಯಲ್ಲಿ ಪರೀಕ್ಷಿದ್ರಾಜ ಭಾಗವತವನ್ನು ಕೇಳಿ ಸದ್ಗತಿಗೆ ತೆರಳಿದ್ದ ಎಂಬುದನ್ನು ರುಜುವಾತು ಮಾಡುವ ಪ್ರಸಂಗವಾಯಿತು ಎಂಬುದು ವಿಶೇಷ.

*****

# ಶ್ರೀನರಸಿಂಹ ವೈಭವ

**(೦೪.೦೫.೧೨ರಂದು ಶ್ರೀನರಸಿಂಹಜಯಂತಿಯ ನಿಮಿತ್ತ ವಿಶೇಷ ಲೇಖನ)**

**-ವಿಪ್ರ**

ಶ್ರೀಹರಿಯ ಶ್ರೀನರಸಿಂಹರೂಪ ಅತ್ಯದ್ಭುತವಾದದ್ದು. ನೇರವಾಗಿ ಸ್ತಂಭದಿಂದಲೇ ಪ್ರಾದುರ್ಭವಿಸುವ ಮೂಲಕ ತನಗೆ ಸರ್ವಥಾ ಪ್ರಾಕೃತದೇಹವಿಲ್ಲವೆಂದು ನಿರೂಪಿಸಿದ ಹಿರಿಮೆ ಇದರದು.

ಸಿಂಹದ ಮುಖ ಮನುಷ್ಯನ ದೇಹದಿಂದ ಕೂಡಿದ ಇದು ವಿರುದ್ಧಧರ್ಮಗಳ ಸಮಾವೇಶ ಭಗವಂತನಲ್ಲಿ ಸರ್ವಥಾ ಸಾಧ್ಯ ಎಂಬ ಪ್ರಮೇಯವನ್ನು ಇದು ಸೂಚಿಸುತ್ತದೆ – ಸರ್ವಧರ್ಮೋಪಪತ್ತೇಃ ಎಂಬ ಬ್ರಹ್ಮಸೂತ್ರಕ್ಕೆ ಇದು ನಿದರ್ಶನ.

ನರಸಿಂಹರೂಪ ಹಿರಣ್ಯಕಶಿಪುವಿಗೆ ಸಿಂಹದಂತೆ ಉಗ್ರವಾದರೆ, ಪ್ರಹ್ಲಾದನಿಗೆ ಮನುಷ್ಯ ಹೃದಯದಂತೆ ಮೃದುವಾಯಿತು. ಶ್ರೀಹರಿಯು ದ್ವೇಷಿಗಳಿಗೆ ಉಗ್ರ, ಭಕ್ತರಿಗೆ ಸೌಮ್ಯ ಎಂಬುದಕ್ಕೂ ಇದು ನಿದರ್ಶನ.

ಹಿರಣ್ಯಕಶಿಪುವನ್ನು ತೊರೆದಿದ್ದರಿಂದ ಪ್ರಹ್ಲಾದನಿಗೆ ಶ್ರೀನರಸಿಂಹನ ದರ್ಶನವಾಯಿತು. ಹಿರಣ್ಯಕಶಿಪುಗಳನ್ನು ತೊರೆಯುವವರಿಗೆ ಮಾತ್ರವೇ ಶ್ರೀಹರಿಗೆ ದಯೆ ತೋರುವನು ಎಂಬುದಕ್ಕೆ ಇದು ಸೂಚಕ.

ನರಸಿಂಹ ಎಂದರೆ ಪುರುಷಶ್ರೇಷ್ಠ, ಪುರುಷೋತ್ತಮ ಎಂದರ್ಥ; ಅದಕ್ಕೆ ಭಗವದ್ಗೀತೆಯ ೧೫ನೆಯ ಅಧ್ಯಾಯದ ಕೊನೆಯಲ್ಲಿ ಬಂದಿರುವಂತೆ ಕ್ಷರಪುರುಷರಾದ ಬ್ರಹ್ಮಾದಿಗಳಿಗಿಂತಲೂ ಅಕ್ಷರಪುರುಷಳಾದ ಮಹಾಲಕ್ಷ್ಮೀಗಿಂತಲೂ ಬಹಳ ಮಿಗಿಲಾದವನು ಎಂದು ತಾತ್ಪರ್ಯ.

ವೇದವ್ಯಾಸರೂಪ ದ್ವೀಪದ ಮಧ್ಯೆ ಪ್ರಾದುರ್ಭವಿಸಿದಂತೆ, ನರಸಿಂಹರೂಪವು ಕಂಭದ ಮಧ್ಯೆ ಪ್ರಾದುರ್ಭವಿಸಿತು. ಇವೆರಡೂ ಸಾಕ್ಷಾತ್ ಶ್ರೀಹರಿಯ ರೂಪಗಳೇ ಅಲ್ಲವೆ.

ಶ್ರೀನರಸಿಂಹರೂಪದ ಉಪಾಸನೆಯಿಂದ ಸಾಧನೆಗೆ ಬರುವ ವಿಘ್ನಗಳು ನಾಶ-ಗೊಳ್ಳುವವು ಎಂಬ ವಿಶೇಷ ಪ್ರಮೇಯವನ್ನು ಶ್ರೀಮದಾಚಾರ್ಯರು ತಿಳಿಸಿರುವರು : ನೃಸಿಂಹಾದಿಕಮನ್ಯಚ್ಚ ದುರಿತಾದಿ ನಿವೃತ್ತಯೇ.

*****

# ಶ್ರೀಕೂರ್ಮಾವತಾರದ ಹಿರಿಮೆ

**(೦೫.೦೫.೧೨ರಂದು ಶ್ರೀಕೂರ್ಮಜಯಂತಿಯ ನಿಮಿತ್ತ ವಿಶೇಷ ಲೇಖನ)**

**- ವಿಪ್ರ**

**'ಕೂರ್ಮಸ್ವರೂಪಕಮಂದರಧಾರಿನ್**
**ಲೋಕವಿಧಾರಕ ದೇವವರೇಣ್ಯ'**

**'ಸುರದಿತಿಜಸುಬಲವಿಲುಲಿತಮಂದರಧರ-**
**ವರಕೂರ್ಮ ಹೇ ಭವ ಮಮ ಶರಣಮ್ ।**
**ಶುಭತಮಕಥಾಶಯ ಪರಮಸದೋದಿತ-**
**ಜಗದೇಕಕಾರಣ ರಾಮ ರಮಾರಮಣ ॥'**

**– ಶ್ರೀಮದಾನಂದತೀರ್ಥಭಗವತ್ಪಾದರು (ದ್ವಾದಶಸ್ತೋತ್ರ)**

ಕೂರ್ಮಾವತಾರವು ಶ್ರೀಹರಿಯ ದಶಾವತಾರಗಳಲ್ಲಿ ಮೂರನೆಯದು.

ಶ್ರೀಹರಿಯ ಕೂರ್ಮರೂಪಗಳಲ್ಲಿ ಮೊದಲನೆಯದು ಇಡೀ ಬ್ರಹ್ಮಾಂಡವನ್ನೇ ಹೊರಗಿನಿಂದ ಧರಿಸಿರುವ ಅದ್ಭುತರೂಪ.

ಎರಡನೆಯದು ಬ್ರಹ್ಮಾಂಡದ ಒಳಗಿದ್ದು ಅದನ್ನು ಧರಿಸಿರುವ ರೂಪ. ಎರಡನೆಯ ರೂಪವು ಶ್ರೀವಾಯುದೇವರ ಕೂರ್ಮರೂಪವನ್ನು ಧರಿಸಿದೆ. ಶ್ರೀವಾಯುದೇವರ ಕೂರ್ಮರೂಪವನ್ನಾಧರಿಸಿ ಶ್ರೀಶೇಷದೇವರು ಇರುವರು. ಶ್ರೀಶೇಷದೇವರ ಸಾವಿರ ಹೆಡೆಗಳಲ್ಲಿ ಒಂದರ ಮೇಲೆ ಸಪ್ತದ್ವೀಪ, ಸಪ್ತಸಮುದ್ರಸಮೇತವಾದ ಭೂಮಿ ಒಂದು ಸಾಸಿವೆ ಕಾಳಿನಂತೆ ಧರಿಸಲ್ಪಟ್ಟಿರುವುದು.

ಸುರಾಸುರರು ಕ್ಷೀರಸಮುದ್ರಮಥನವನ್ನು ಮಾಡಿದ ಪ್ರಸಂಗದಲ್ಲಿ ಕಡೆಗೋಲಾಗಿ ಉಪಯೋಗಿಸಲ್ಪಟ್ಟದ್ದು ಮಂದರಪರ್ವತ. ಅದು ಶಿವನ ವರದಿಂದಾಗಿ ಇತರರಿಂದ ಅಧಾರ್ಯವೆನ್ನಿಸಿದ ಕುಲಪರ್ವತ.

ಮಂದರಪರ್ವತವು ಕ್ಷೀರಸಾಗರದಲ್ಲಿ ಮುಳುಗದಂತೆ ತನ್ನ ಬೆನ್ನ ಮೇಲೆ ಧರಿಸಿ ಸಮುದ್ರಮಥನದ ಕಾರ್ಯವನ್ನು ಸುಗಮಗೊಳಿಸಿದ್ದು ಕೂರ್ಮರೂಪದ ಮತ್ತೊಂದು ಹಿರಿಮೆ.

ಅಂತಹ ಅಗಾಧವಾದ ಮಂದರಪರ್ವತದ ಮಥನ ಕಾರ್ಯ ನಡೆದಿದ್ದಾಗ ಕೂರ್ಮರೂಪಕ್ಕೆ ಸ್ವಲ್ಪವೂ ಆಯಾಸ, ನೋವುಗಳ ಸಂಪರ್ಕವೇ ಇಲ್ಲದೆ ಸುಖಕರವೇ

ಆಗಿದ್ದಿತು ಎಂಬುದು ವಿಶೇಷ. ಇದು ಶ್ರೀಹರಿಯ '**ಚಿಂತಾಸಂತಾಪಲೇಪೋದ್ಭವಮೃತಿ-ಮುಖರಾಶೇಷದೋಷಾತಿದೂರಂ**' ಎಂಬ ನಿರ್ದೋಷತ್ವಕ್ಕೆ ಅಪೂರ್ವನಿದರ್ಶನ.

ಶ್ರೀಕೂರ್ಮರೂಪದ ಅನುಗ್ರಹವಿಲ್ಲದೆ ಸಮುದ್ರಮಥನ ಸಾಧ್ಯವಿರಲಿಲ್ಲ, ಶ್ರೀಕೂರ್ಮರೂಪದ ಚಿಂತನೆಯಿಲ್ಲದೆ ಸಂಸಾರಸಾಗರದಿಂದ ಪಾರಾಗಲು ಸಾಧ್ಯವಾಗುವುದಿಲ್ಲ.

ಶ್ರೀಕೂರ್ಮರೂಪದ ಚಿಂತನೆ ಭಗವದ್ಗೀತೆಯಲ್ಲಿ ಸೂಚಿತವಾಗಿರುವಂತೆ ಜಿತೇಂದ್ರಿಯತ್ವಸಾಧನೆಗೂ ಅತ್ಯಂತ ಉಪಯುಕ್ತ :

**ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ ।**
**ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**

ಕೂರ್ಮವು ತನ್ನ ಅವಯವಗಳನ್ನು ಸ್ವೇಚ್ಛೆಯಿಂದ ಒಳಗೆ ಸೆಳೆದುಕೊಳ್ಳಲು ಹೊರಗೆ ಬಿಡಲು ಸಮರ್ಥವಾಗಿರುವಂತೆ ಜ್ಞಾನಿಯಾದವನು ತನ್ನ ಇಂದ್ರಿಯಗಳನ್ನು ಹತೋಟಿ-ಯಲ್ಲಿಟ್ಟುಕೊಳ್ಳುವನು ಎಂಬುದು ಇದರ ಭಾವ. ಈ ಸಿದ್ಧಿಗೆ ಶ್ರೀಹರಿಯ ಕೂರ್ಮರೂಪದ ಚಿಂತನೆ ಸಾಧನೆ ಎಂಬುದು ಆದರೊಳಗಿನ ಸೂಚನೆ ಎಂದು ತಿಳಿಯಬಹುದು.

ಶ್ರೀಹರಿಕಥಾಮೃತಸಾರದಲ್ಲಿ ಚಿತ್ರಿತವಾಗಿರುವ ಕೂರ್ಮರೂಪದ ಹಿರಿಮೆ ಹೀಗಿದೆ :

**ಕೊಟ್ಟುದನು ಕೈಗೊಂಬರಕ್ಷಣ**
**ಬಿಟ್ಟಗಲ ತನ್ನವರ ದುರಿತಗ-**
**ಳಟ್ಟುವನು ದೂರದಲಿ ದುರಿತಾರಣ್ಯಪಾವಕನು ।**
**ಬೆಟ್ಟ ಬೆನ್ನೊಳು ಹೊರಿಸಿದವರೊಳು**
**ಸಿಟ್ಟುಮಾಡಿದನೇನೋ ಹರಿ ಕಂ-**
**ಗೆಟ್ಟ ಸುರರಿಗೆ ಸುಧೆಯನುಣಿಸಿದ ಮುರಿದನಹಿತರನು ॥ (ಕರುಣಾಸಂಧಿ)**

*****


**ನವಪ್ರಕಾಶನ**

## ಶ್ರೀಮನ್ನ್ಯಾಯಮಾಧುರ್ಯ

(ಸೂತ್ರಪ್ರಸ್ಥಾನದ ಕುರಿತು ಚಿಂತನೆಗಳು)

**ಸಂಗ್ರಹ-ಸಂಪಾದನೆ : ಸಗ್ರಿ ಆನಂದತೀರ್ಥ**

**ಪ್ರಕಾಶನ : ಸುಧಾವಿದ್ಯಾರ್ಥಿಗಳು-೨೦೧೨**

ಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

ಬೆಲೆ : ರೂ.೫೦.೦೦

॥ ಶ್ರೀವ್ಯಾಸರಾಮೌ ವಿಜಯೇತೇ ॥

# ಶ್ರೀಭಂಡಾರಕೇರಿಮಠ, ಉಡುಪಿ

ಶ್ರೀಜಗದ್ಗುರು ಶ್ರೀಮಧ್ವಾಚಾರ್ಯ - ಶ್ರೀಸತ್ಯತೀರ್ಥ ಸಂಸ್ಥಾನಮ್

## ಶ್ರೀವೇದವ್ಯಾಸಜಯಂತೀ -
## ೭೦ನೇ ಮಾಧ್ವಸಿದ್ಧಾಂತಸಂವರ್ಧಿನಿಸಭಾ ಹಾಗೂ
## ಶ್ರೀವಿದ್ಯಾಮಾನ್ಯತೀರ್ಥರ ೧೨ನೇ
## ಆರಾಧನಾಮಹೋತ್ಸವ

**ಸ್ಥಳ : ಶ್ರೀಸಂಜೀವರಾಯರ ಗುಡಿ, ಮಾನ್ವಿ, ರಾಯಚೂರು**

**ದಿನಾಂಕ : ೨೮.೪.೨೦೧೨ ರಿಂದ ೪.೫.೨೦೧೨ರವರೆಗೆ**

**ದಿವ್ಯ ಉಪಸ್ಥಿತಿ-ಅಧ್ಯಕ್ಷತೆ :**

**ಶ್ರೀವಿಶ್ವೇಶತೀರ್ಥಶ್ರೀಪಾದರು,** ಶ್ರೀಪೇಜಾವರಮಠಾಧೀಶರು ಹಾಗೂ

**ಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು,** ಶ್ರೀಪೇಜಾವರಮಠ (ಕಿರಿಯಪಟ್ಟ)

**ಕಾರ್ಯಕ್ರಮಗಳು :**

ಪಂಡಿತರ ಉಪನ್ಯಾಸ, ವಾಕ್ಯಾರ್ಥಗೋಷ್ಠಿ, ದಾಸವಾಣಿ, ಶ್ರೀವೇದವ್ಯಾಸ-ಶ್ರೀಮಧ್ವ-ಶ್ರೀವಿದ್ಯಾಮಾನ್ಯ ಶೋಭಾಯಾತ್ರೆ, ಸ್ತ್ರೀ-ಪುರುಷರಿಗೆ ಧಾರ್ಮಿಕಶಿಕ್ಷಣ ಶಿಬಿರ, ಶ್ರೀವೇದವ್ಯಾಸತುಲಾಭಾರ, ಶ್ರೀವಿಶ್ವೇಶತೀರ್ಥರ ತುಲಾಭಾರ, ಭಜನಾಕಾರ್ಯಕ್ರಮ, ಪಂಡಿತರಿಗೆ ಪ್ರಶಸ್ತಿಪೂರ್ವಕ ಸನ್ಮಾನ, ಶ್ರೀರಾಮದೇವರ ಪೂಜಾ, ಅನ್ನಸಂತರ್ಪಣೆ ಮುಂತಾದವುಗಳು

**ಈ ಎಲ್ಲ ಕಾರ್ಯಕ್ರಮಗಳು ಶ್ರೀಭಂಡಾರಕೇರಿ ಮಠಾಧೀಶರಾದ ಶ್ರೀವಿದ್ಯೇಶತೀರ್ಥರ ನೇತೃತ್ವದಲ್ಲಿ ನಡೆಯಲಿವೆ.**

**ಸಹಯೋಗ:**

ದಾಸಸಾಹಿತ್ಯಪ್ರಾಜೆಕ್ಟ್, ತಿರುಮಲದೇವಸ್ಥಾನಂ ಹಾಗೂ
ಶ್ರೀವಿದ್ಯಾಮಾನ್ಯಭಕ್ತಮಂಡಳಿ, ಮಾನ್ವಿ-ರಾಯಚೂರು

**ಭಗವದ್ಭಕ್ತರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹರಿಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುತ್ತೇವೆ.**

- ವ್ಯವಸ್ಥಾಪಕರು

**ಶ್ರೀಭಂಡಾರಕೇರಿಮಠ**

# ಚಿಕ್ಕೋಡಿ ಶ್ರೀಭಗವಂತರಾಯರು

(ದ್ವೈತವೇದಾಂತದ ಇತಿಹಾಸದಲ್ಲಿ ಯತಿಗಳು, ಪೀಠಾಧೀಶರಂತೆ ಅನೇಕ ಗೃಹಸ್ಥ ವಿದ್ವಾಂಸರೂ ಅಪೂರ್ವಕೃತಿಗಳನ್ನು ರಚಿಸಿ ಪ್ರಖ್ಯಾತರಾಗಿರುವರು. ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀತ್ರಿವಿಕ್ರಮಪಂಡಿತಾಚಾರ್ಯರು ಹಾಗೂ ಶ್ರೀಶಂಕರಪಂಡಿತಾಚಾರ್ಯರು, ತ್ರಿವಿಕ್ರಮಪಂಡಿತಾಚಾರ್ಯರ ಪುತ್ರ ಶ್ರೀನಾರಾಯಣಪಂಡಿತಾಚಾರ್ಯರು ಇಂತಹವರಲ್ಲಿ ಅತ್ಯಂತ ಪ್ರಮುಖರು. ಅನಂತರ ಕಾಲದಲ್ಲಿ ಶ್ರೀಯದುಪತ್ಯಾಚಾರ್ಯರು ಹಾಗೂ ಬಿದರಹಳ್ಳಿ ಶ್ರೀನಿವಾಸತೀರ್ಥರು. ಶ್ರೀರಾಘವೇಂದ್ರಸ್ವಾಮಿಗಳ ಪೂರ್ವಾಶ್ರಮದ ಪುತ್ರರಾದ ಶ್ರೀಲಕ್ಷ್ಮೀನಾರಾಯಣಾಚಾರ್ಯರು, ಶಿಷ್ಯರಾದ ಸ್ಮೃತಿಮುಕ್ತಾವಲೀ ಕೃಷ್ಣಾಚಾರ್ಯರು, ತಾಮ್ರಪರ್ಣಿ ವಿಠಲಾಚಾರ್ಯರು, ತಾಮ್ರಪರ್ಣಿ ಆನಂದತೀರ್ಥಾಚಾರ್ಯರು ಹಾಗೂ ತಾಮ್ರಪರ್ಣಿ ಶ್ರೀನಿವಾಸಾಚಾರ್ಯರು, ಛಲಾರೀ ನರಸಿಂಹಾಚಾರ್ಯರು, ಛಲಾರೀ ಶೇಷಾಚಾರ್ಯರು ಮೊದಲಾದವರು ಅನಂತರ ಕಾಲದ ಶ್ರೇಷ್ಠಗ್ರಂಥಕಾರರು. ಅನಂತರದ ಕಾಲದಲ್ಲಿನ ಶ್ರೇಷ್ಠ ಗೃಹಸ್ಥ ಗ್ರಂಥಕಾರರಲ್ಲಿ ಚಿಕ್ಕೋಡಿ ಶ್ರೀಭಗವಂತರಾಯರೂ ಒಬ್ಬರು. ಲೌಕಿಕ ವೃತ್ತಿಯಲ್ಲಿದ್ದೂ ಅಪಾರ ವೈದಿಕಪಾಂಡಿತ್ಯದ ವಿಶಿಷ್ಟ ವ್ಯಕ್ತಿತ್ವ ಇವರದು. ಹರಪನಹಳ್ಳಿಯ ಭಾಸ್ಕರೀ(ಭಕ್ರಿ) ವೆಂಕಟವರಾಹಾಚಾರ್ಯರ ಶಿಷ್ಯರಾಗಿ ಇವರು ಅನೇಕ ಟಿಪ್ಪಣಿಗ್ರಂಥಗಳನ್ನು ರಚಿಸಿರುವರು. ಅವರ ಕೃತಿಗಳು ಪರಿಷ್ಕೃತಪಾಂಡಿತ್ಯಕ್ಕೆ ಶ್ರೇಷ್ಠನಿದರ್ಶನ. ಅವರ ಬ್ರಹ್ಮಸೂತ್ರಭಾಷ್ಯ ಭಾವಪ್ರದೀಪ, ಬ್ರಹ್ಮಸೂತ್ರಭಾಷ್ಯದ ಭಾವಗ್ರಹಣಕ್ಕೆ ಅತ್ಯುತ್ತಮ ಸಹಾಯಕಗ್ರಂಥ. ಕೇವಲ ಅದರ ಅನುವಾದವೂ ಸಹ ಬ್ರಹ್ಮಸೂತ್ರಭಾಷ್ಯದ ವಿಶಿಷ್ಟ ಅನುವಾದವೆನ್ನಿಸಿ ಮಾನ್ಯವಾಗುವುದು ಖಚಿತ. ಅನೇಕ ಪ್ರಾಚೀನವಿದ್ವಾಂಸರು ಅದನ್ನು ಆಧರಿಸಿಯೇ ಬ್ರಹ್ಮಸೂತ್ರ- ಭಾಷ್ಯ ಪಾಠ ನೆರವೇರಿಸದ್ದನ್ನು ನಾನು ಕಂಡಿದ್ದೇನೆ. ಅವರ ಬೃಹತೀಸಹಸ್ರ ವ್ಯಾಖ್ಯಾನ - ಮುಕ್ತಾಮಂಜರೀ ಉತ್ತಮ ಶ್ರೇಣಿಯ ವೇದವ್ಯಾಖ್ಯಾನವಾಗಿದೆ. ಪ್ರೌಢಭಾಷೆ, ನೇರ ನಿರೂಪಣೆಗಳಿಂದ ಅವರ ಕೃತಿಗಳು ಜಿಜ್ಞಾಸುಗಳಿಗೆ ತುಂಬಾ ಉಪಯುಕ್ತವೆನ್ನಿಸುವುವು. ಸಮಗ್ರ ಭಾಗವತತಾತ್ಪರ್ಯಕ್ಕೆ ಭಾವಪ್ರದೀಪವೆಂಬ ಟಿಪ್ಪಣಿಯನ್ನು ರಚಿಸಿದ್ದು ಆದು ನನ್ನ ಸಂಗ್ರಹದಲ್ಲಿ ಉಪಲಬ್ಧವಿದೆ. ಗುರುಪರಂಪರಾಸ್ತುತಿ ಎಂಬ ಯಮಕಶ್ಲೋಕಗಳ ಕೃತಿ ಅವರ ಪ್ರೌಢಪಾಂಡಿತ್ಯಕ್ಕೆ ನಿದರ್ಶನ ; ಇದು ಸಹ ನನ್ನ ಸಂಗ್ರಹದಲ್ಲಿದೆ ಹಾಗೂ ಪ್ರಸ್ತುತ ಲೇಖನವು ಅವರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತದೆ. ಇದರ ಮುದ್ರಿತ ಪ್ರತಿ ನನ್ನ ಸಂಗ್ರಹದಲ್ಲಿ ಅಸಮಗ್ರವಾಗಿ ದೊರೆತಿದ್ದು ಹರಪನಹಳ್ಳಿಯ ಅಣ್ಣಾಚಾರ್ಯರು ಎಂಬುವರು ಇದರ ಲೇಖಕರು. ಇದು ಮುದ್ರಿತವಾದ ಆಕರ ಖಚಿತವಾಗಿ ತಿಳಿಯುವಂತಿಲ್ಲ. ಶ್ರೀಭಗವಂತರಾಯರ ಬಗ್ಗೆ ಅಪೂರ್ವ ಮಾಹಿತಿಯನ್ನು ಒಳಗೊಂಡ ಲೇಖನ ಎಂಬ ಕಾರಣಕ್ಕಾಗಿ ಅದರ ದೊರೆತಷ್ಟು ಭಾಗವನ್ನು ಇಲ್ಲಿ ಮುದ್ರಿಸಲಾಗಿದೆ.)

ಶ್ರೀಮನ್ಮಧ್ವಶಾಸ್ತ್ರದಲ್ಲಿ ದೀಕ್ಷೆಯುಳ್ಳ ನಾಗೇಶರಾಯರೆಂಬ ಮಹಾನುಭಾವರೊಬ್ಬರು ಚಿಕ್ಕೋಡಿ ಎಂಬ ಗ್ರಾಮದಲ್ಲಿ ವಾಸವಾಗಿದ್ದವರು. ಸಂಸಾರಸಹಿತವಾಗಿ ಬಳ್ಳಾರಿನಗರಕ್ಕೆ

ಬಂದು ವಾಸವಾಗಿದ್ದರು. ಇವರಿಗೆ ಪಾರ್ಸಿಭಾಷೆ ಮಾತ್ರ ಕೊಂಚ ಪರಿಚಯವಿದ್ದು ಸಾಮಾನ್ಯವಾಗಿ ವಿದ್ಯಾಭಿಮಾನಿಗಳಾಗಿದ್ದರು. ಇವರ ಗರ್ಭದಲ್ಲಿಯೇ ನಮ್ಮ ಕಥಾ-ನಾಯಕರಾದ ಶ್ರೀಭಗವಂತರಾಯರೆಂಬುವರು ಉದಯಿಸಿದರು.

**''ಕಿಂ ಜನ್ಮನಾ ಚ ಮಹತಾಂ ಪಿತೃಪೌರುಷೇಣ**
**ಶಕ್ತ್ಯಾ ಹಿ ಯಾತಿ ನಿಜಯಾ ಪುರುಷಃ ಪ್ರತಿಷ್ಠಾಮ್ ।**
**ಕುಂಭಾ ನ ಕೂಪಮಪಿ ಶೋಷಯಿತುಂ ಸಮರ್ಥಾ**
**ಕುಂಭೋದ್ಭವೇನ ಮುನಿನಾಽಂಬುಧಿರೇವ ಪೀತಃ ॥''**

-ಎಂಬಂತೆ ಶ್ರೀಭಗವಂತರಾಯರು ಸ್ವಯಂ ಶೂರರು, ದೊಡ್ಡ ಜ್ಞಾನಿಗಳು, ಬಹುಗ್ರಂಥರಚನಾಕುಶಲರು. ಇವರು ತಮ್ಮ ೧೮-೧೯ನೇ ವಯಸ್ಸಿನಲ್ಲಿಯೇ ಪಾರ್ಸಿ, ಇಂಗ್ಲಿಷು, ಸಂಸ್ಕೃತಭಾಷೆಗಳಲ್ಲಿ ನಿಷ್ಣಾತರಾಗಿದ್ದು ತಮ್ಮ ೨೦ನೇ ವಯಸ್ಸಿನಲ್ಲಿ ಪ್ರಸಿದ್ಧರಾದರು. ಸದ್ವಂಶೀಯರಿಗೆ ದೊಡ್ಡ ದೊಡ್ಡ ಉದ್ಯೋಗಗಳನ್ನು ಕೊಡುವ ಆಂಗ್ಲೇಯರ ಪದ್ಧತಿಯಂತೆ ಒಬ್ಬ ಪಾಶ್ಚಾತ್ಯ ದೊರೆಯು ರಾಯರಲ್ಲಿ ಅಭಿಮಾನ-ವುಳ್ಳವನಾಗಿ ಇವರಿಗೆ ಸರ್ಕಾರದಲ್ಲಿ ದೊಡ್ಡ ಉದ್ಯೋಗವನ್ನು ಕೊಟ್ಟನು. ೨-೩ ವರುಷ-ಗಳಲ್ಲಿಯೇ ಭಗವಂತರಾಯರು ತಮ್ಮ ಪ್ರತಿಭೆಯನ್ನು ತೋರಿಸಿ ತಹಶೀಲ್ದಾರಾಗುವುದಕ್ಕೆ ತಕ್ಕ ಯೋಗ್ಯತೆಯುಳ್ಳವರಾದರು. ಗುಣಗ್ರಾಹಿಯಾದ ಮೇಲಧಿಕಾರಿಯು ಕೂಡ ರಾಯರಿಗೆ ಪ್ರಥಮದಲ್ಲಿಯೇ ರಾಯದುರ್ಗವೆಂಬ ತಾಲ್ಲೂಕು ತಹಸೀಲ್ದಾರ ಉದ್ಯೋಗವನ್ನು ಕೊಟ್ಟನು. ಅಲ್ಲಿ ಒಂದು ವರುಷ ಪರ್ಯಂತ ಮಾಮಲೆ ಮಾಡಿದ ನಂತರ ರಾಯರನ್ನು ಗುತ್ತಿ ತಾಲ್ಲೂಕು ತಹಸೀಲ್ದಾರರನ್ನಾಗಿ ವರ್ಗಾಯಿಸಿದರು. ಅಲ್ಲಿ ಆರು ತಿಂಗಳು ಮಾತ್ರವೇ ಇದ್ದು, ತರುವಾಯ ಭಗವಂತರಾಯರ ಜನ್ಮಭೂಮಿಯಾದ ಚಿಕ್ಕೋಡಿ ಎಂಬ ತಾಲ್ಲೂಕಿಗೆ ವರ್ಗವಾಗಿ ಬಂದರು. ಶ್ರೀರಾಯರು ಲೌಕಿಕಕಾರ್ಯದಲ್ಲಿ ಇದ್ದವರಾದಾಗ್ಯೂ ಸ್ನಾನ, ಸಂಧ್ಯ, ಜಪ, ತಪ, ಅನುಷ್ಠಾನಗಳನ್ನು ಮಾತ್ರ ಬಿಟ್ಟಿರಲಿಲ್ಲ, ಬಹುಶ್ರದ್ಧೆಯಿಂದ ನಡೆಸುತ್ತಲೇ ಇದ್ದರು.

ನಿಸ್‌ಬಟ್ ಎಂಬ ದೊರೆಯು ಧಾರವಾಡ ಜಿಲ್ಲಾ ಕಲೆಕ್ಟರಾಗಿ ಬಂದಾಗ್ಯೆ ಶ್ರೀ ರಾಯರನ್ನು ಚಿಕ್ಕೋಡಿ ತಾಲ್ಲೂಕು ತಹಶೀಲ್ದಾರರನ್ನಾಗಿ ಚುನಾಯಿಸಿದ್ದನು. ಇಲ್ಲಿ ರಾಯರಿಗೆ ಅಕಸ್ಮಾತ್ತಾಗಿ ಒಂದು ಧರ್ಮಸಂಕಟ ಉಂಟಾಯಿತು. ಅದೇನೆಂದರೆ, ಚಿಕ್ಕೋಡಿ ತಾಲ್ಲೂಕು ಮದಿಹಳ್ಳಿ ಎಂಬ ಗ್ರಾಮವು ಒಂದು ಇನಾಂ ಗ್ರಾಮ. ಅಲ್ಲಿ 'ಬಾಬಾ' ಎಂಬ ಒಬ್ಬ ಹಿಂದೂ ಗೃಹಸ್ಥನ ತಂದೆಯು ಮೃತನಾಗಲು, ತಾಯಿಯು ಸಹಗಮನ ಮಾಡಲು ಆಸೆಯುಳ್ಳಾಕೆಯಾಗಿ ರಾಯರಿಗೆ ಅರ್ಜಿಯನ್ನು ಇಟ್ಟುಕೊಂಡಳು. ಅವಳು ಬಹಳ ವಿನಯದಿಂದ ವಿಜ್ಞಾಪಿಸುವುದನ್ನು ಕಂಡು ಕಾರುಣ್ಯದಿಂದ ಕರಗಿ ನೀರಾಗಿ ಧರ್ಮವ್ಯತಿರಿಕ್ತಕ್ಕೆ ಭೀತರಾಗಿ 'ತಥಾಸ್ತು' ಎಂದು ಅನುಜ್ಞೆಯನ್ನಿತ್ತರು. ಸಹಗಮನವು ನಡೆದುಹೋಯಿತು. 'ಸತಿ' ಎಂಬುವುದನ್ನು ಪ್ರತಿಬಂಧಿಸಿ ಇನ್ನೂ ಸ್ವಲ್ಪೇ ದಿನಗಳಾಗಿದ್ದು ಲಾರ್ಡ್ ವಿಲಿಯಂ ಬೆಂಟಿಂಕ್‌ನ ಚಂಡಶಾಸನವು ಕ್ರೂರವಾಗಿಯೇ ಇತ್ತು. ಕಪಟಿಗಳು

ಈ ರಾಯರು ಸರ್ಕಾರಕ್ಕೆ ವಿರೋಧಿಗಳಾಗಿ ನಡೆದುಕೊಂಡಿದ್ದಾರೆಂದು ಮೇಲಿನವರಿಗೆ ತಿಳಿಸಿಬಿಟ್ಟರು. ರಾಯರಿಗೆ ಕೆಲಸದಿಂದ ತೆಗೆದುಹಾಕಿದಂತೆ ಆಜ್ಞೆಯು ಬಂದಿತು. ಅದಕ್ಕೆ ಬೆದರದೆ ಚಿಕ್ಕೋಡಿಯಿಂದ ಬಳ್ಳಾರಿಗೆ ಬಂದು ಸುಖವಾಗಿ ವಾಸಮಾಡಿದರು. ಶ್ರೀ ರಾಯರನ್ನು ಚಿಕ್ಕೋಡಿ ಮಾಮಲೆದಾರರನ್ನಾಗಿ ಕರೆತಂದ ದೊರೆಯು ಇಂಗ್ಲೆಂಡಿಗೆ ತೆರಳಿದ್ದರಿಂದ ಈಗ ರಾಯರು ನಿರಾಧಾರಿಗಳಾದರು. ಸದರಿ ದೊರೆಯು ಪುನಃ ಇಂಡಿಯಾಗೆ ಬಂದೊಡನೆ ಈ ವೃತ್ತಾಂತವನ್ನು ಕೇಳಿ ತನ್ನ ಯಾವಚ್ಛಕ್ತಿಯಿಂದ ಪ್ರಯತ್ನಮಾಡಿ ರಾಯರನ್ನು ಪುನಃ ಕೆಲಸದಲ್ಲಿ ಸೇರಿಸಿಕೊಳ್ಳುವಂತೆ ಅಪ್ಪಣೆಯನ್ನು ತರಿಸಿ ಬೆಳಗಾವಿ ತಾಲ್ಲೂಕು ತಹಶೀಲ್ದಾರರನ್ನಾಗಿ ನಿಯಮಿಸಿದನು. ಅಲ್ಲಿ ನಾಲ್ಕು ವರ್ಷ ಪರ್ಯಂತವಾಗಿ ಕೆಲಸ ಮಾಡುತ್ತಾ ಇದ್ದು 'ಭಾಷ್ಯಪ್ರದೀಪ' ಎಂಬ ಗ್ರಂಥವನ್ನು ರಚಿಸಿದರು.

ಈ ಬೆಳಗಾವಿ ಗ್ರಾಮದಲ್ಲಿಯೂ ರಾಯರಿಗೆ ಮತ್ತೊಮ್ಮೆ ಧರ್ಮಸಂಕಟ ಬಂದಿತು. ಅದೇನೆಂದರೆ ಅಲ್ಲಿ ರೋಡು ಹಾಕಿಸಬೇಕೆಂದು ನಕಾಶೆಗಳು ತಯಾರಿಸುವಾಗ್ಯೆ ಮಧ್ಯೆ ಒಂದು ಆಂಜನೇಯ ಗುಡಿ ಬಂದಿತು. ಅದನ್ನು ಕೆಡವಿ ದೇವರನ್ನು ಕಿತ್ತು ಅನ್ಯತ್ರ ಇಡಬೇಕೆಂದು ಅದರ ವಿಚಾರವಿದ್ದಿತು. ಅದು ರಾಯರ ಮನಸ್ಸಿಗೆ ಬರಲಿಲ್ಲ. ಪ್ರತಿಬಂಧಕ ಆಜ್ಞೆಯನ್ನಿತ್ತರು. ಇದು ಸರ್ಕಾರದವರ ಕಾರ್ಯಕ್ಕೆ ವಿರೋಧವಿರುವುದೆಂತಲೂ ರಾಯರ ಆಜ್ಞೆಯನ್ನು ರದ್ದುಗೊಳಿಸಿದಂತೆಯೂ ಮೇಲಿನವರಿಂದ ಉತ್ತರವು ಬಂದಿತು. ಒಡನೆಯೆ ರಾಯರು ಕುಪಿತರಾಗಿ ಕೆಲಸಕ್ಕೆ ರಾಜೀನಾಮೆಯನ್ನಿತ್ತು ಬಳ್ಳಾರಿಗೆ ಮರಳಿ ಬಂದರು.

ನಂತರ ರಾಯರಿಗೆ ಮೂರುವರ್ಷ ಸುಮಾರು ಕೆಲಸವಿಲ್ಲದೆ ಬಹಳ ತೊಂದರೆಯಾಯಿತು. ಶ್ರೀಭಗವಂತರಾಯರಿಗೆ ವಿದ್ಯಾಗುರುಗಳಾದ ಶ್ರೀ॥ಮ॥ಪ॥ ಆಚಾರ್ಯರಾದ ಹರಪನಹಳ್ಳಿ ಭಾಸ್ಕರೀ(ಭಕ್ರಿ) ವರಾಹಾಚಾರ್ಯರು ದಯಮಾಡಿಸಿ ಈ ಕಾಲಾವಧಿಯಲ್ಲಿ ಶ್ರೀಮದ್ಭಾಗವತವನ್ನು ತಾತ್ಪರ್ಯಸಹಿತವಾಗಿ ಪಾಠ ಹೇಳಿ ಹರಪನಹಳ್ಳಿಗೆ ಬಂದರು. ಸದರಿ ಪಾಠವನ್ನು ಚಿಂತನೆಮಾಡುತ್ತಾ ರಾಯರು ಸುಖವಾಗಿ ವಾಸವಾಗಿದ್ದರು. ಎರಡು ವರ್ಷಗಳಾದನಂತರ ಗುರುಗಳ ದರ್ಶನವಿಲ್ಲದೆಯೂ, ಅನೇಕ ಸಂಸಾರತಾಪತಪ್ತರಾಗಿಯೂ ರಾಯರು ತಮ್ಮ ಗುರುಪುತ್ರರಾದ ವಿಠಲಾಚಾರ್ಯರಿಗೆ ಒಂದು ಪತ್ರವನ್ನು ಬರೆದಿರುವರು. ಅದನ್ನು ಈ ಕೆಳಗೆ ಯಥಾವತ್ತಾಗಿ ಲೇಖನ ಮಾಡುವೆವು :

ಶ್ರೀಮತ್ಪೂಜ್ಯಚರಣ ವಿಠಲಾಚಾರ್ಯರ ಚರಣ ಸನ್ನಿಧಾನಕ್ಕೆ.

ಬಾಲಕ ಭಗವತ್ಕೃತಾನಂತ ಪ್ರಣಾಮಪೂರ್ವಕ ವಿಜ್ಞಾಪನೋಪರಿ. ನಾನು ತಮ್ಮಾ-ಶೀರ್ವಾದದಿಂದ ಈ ಅಧಿಕ ಆಷಾಢ ಬಹುಳ ದ್ವಾದಶೀ ಪರ್ಯಂತ ಕ್ಷೇಮ. ತಮ್ಮ ಸುಕ್ಷೇಮಾತಿಶಯಗಳಿಗೆ ಆಗಿಂದಾಗ್ಯೆ ಆಜ್ಞಾಪಿಸುತ್ತಾ ಬರಬೇಕು. ತರುವಾಯ, ತಾವು ಸವಿಸ್ತಾರ ಆಜ್ಞಾಪಿಸಿದ ಪತ್ರವು ಮುಟ್ಟಿ ಸಕಲವೂ ತಿಳಿಯಲಾಯಿತು. ಬೆಂಗಳೂರಿಂದ ಬಳ್ಳಾರಿಗೆ ಬಂದು ತಿಂಗಳಾಯಿತು. ಚಿ॥ಮಧ್ವರಾಯನ ಉಪನಯನವು ಜ್ಯೇಷ್ಠ ಬಹುಳ

ನವಮಿಯಲ್ಲಿ ಮಾಡಿದಹಾಗಾಯಿತು. ತೀ॥ ಶ್ರೀಮತ್ಪೂಜ್ಯಚರಣ ಆಚಾರ್ಯರವರನ್ನ ತಮ್ಮನ್ನ ಸಹ ಕರಿಸಿಕೊಂಡು ತರುವಾಯ ಉಪನಯನ ಮಾಡಬೇಕೆಂದು ಅಪೇಕ್ಷೆ ಮಾತ್ರ ಇತ್ತು ಹೊರತು ಪರಂತು ದಾವದಕ್ಕೂ ಸಂದರ್ಭ ಒದಗಲಿಲ್ಲ. ಮುಖ್ಯ ಶ್ರೀಹರಿಗುರುಗಳು ಈ ಕಾಲಕ್ಕೆ ತಮ್ಮಲ್ಲಿ ದಾವಬಗೆಯಿಂದ ಅನುಗ್ರಹೋನ್ಮುಖರಾಗಿರಲಿಲ್ಲದೇ ಇದ್ದುದರಿಂದ ದಾವದು ಮಾಡಿದ ಪ್ರಯತ್ನ ವಿಗತಾರ್ಥ ವಿರುದ್ಧಾರ್ಥ ಪರ್ಯವಸಾಯಿ ಆಗುತ್ತ ಬರುತ್ತೆ. ಶ್ರೀ ಆಚಾರ್ಯರವರ ಪಾದ ಸಂದರ್ಶನವಿಲ್ಲದೇ ನಾಲ್ಕು ವರ್ಷ ಮೀರಿ ಐದನೇ ಸಂವತ್ಸರ ನಡೆಯುತ್ತದೆ. ದುಷ್ಕರ್ಮಪರಿಪಾಕಪರ್ಯವಸಾನ ಇದುವರೆಗೂ ಕಾಣಲಿಲ್ಲ ಎಂದು ತಮ್ಮದೂ ಶ್ರೀಗಳದೂ ಪಾದದರ್ಶನವಾದೀತೋ ಆಗಲೇ ದುರಿತನಿವೃತ್ತಿ ಅನುಭವಕ್ಕೆ ಬಂದೀತು. ಮಿಗಿಲಾದ ವರ್ತಮಾನವು ವಿಜ್ಞಾಪನೆ ಮಾಡಲಾಗಿ ಚಿತ್ತಕ್ಕೆ ಬಂದೀತು.

**ತ್ರೈವರ್ಗಿಕಾಯಾಸವಿಘಾತಮಸ್ಮತ್ಪತಿರ್ವಿಧತ್ತೇ ಪುರುಷಸ್ಯ ಶಕ್ರ**
**ತೇನಾನುಮೇಯೋ ಭಗವತ್ಪ್ರಸಾದೋ ಯೋ ದುರ್ಲಭೋ ಕಿಂಚನ ಗೋಚರೋ ಸತಾಂ ॥**

ಅಂತ ಹೇಳಿದ್ದರೊಳಗೆ ಪೂರ್ವಾರ್ಧ ವಾಕ್ಯಾರ್ಥ ಮಾತ್ರ ಅನುಭವಕ್ಕೆ ಬಂದಿದೆ. ಉತ್ತರಾರ್ಧ ವಾಕ್ಯಾರ್ಥ ಎಂಥಾದ್ದೋ ತಿಳಿಯಲಿಲ್ಲ. ಹರಪನಹಳ್ಳಿಗೆ ಕರ್ಕಟ ಭಾಗೀರಥೀ ಸ್ನಾನಕ್ಕೆ ಬರೋದು ಎಂತ ಆಜ್ಞಾ. ಅದಕ್ಕೆ ಸಂಗಾತಪರಿಚಾರಕಾದ್ಯಾನುಕೂಲ್ಯ ಕಡಿಮೆ. ಆದ್ದರಿಂದ ಅದಕ್ಕೆ ಸರಿಬೀಳಲಿಲ್ಲ. ಮುಖ್ಯ ತಾವೇ ಬಂದು ಅನುಗ್ರಹಮಾಡಿ ದರ್ಶನಕೊಟ್ಟು ಹೋಗತಕ್ಕದ್ದು. ಈ ಪತ್ರ ಶ್ರೀಮತ್ತೀರ್ಥರೂಪಚರಣರಿಗೂ ತೋರಿಸುವುದು. ಈ ವಿಷಯಕ್ಕೆ ವಿಶೇಷ ವಿಜ್ಞಾಪ್ಯವೇನದೆ ; ಇತಿ ನತಿತತಿಃ.

ಇನ್ನೊಂದು ಪತ್ರದಲ್ಲಿ ಶುಕ್ಲಪರ್ಯಂತ ಕ್ಷೇಮ... ತಾವು ಬರೆದ ಮೂರು ನಾಲ್ಕು ಪತ್ರಗಳಿಗೆ ಉತ್ತರ ಬರಿಯಲಿಲ್ಲವೆಂತ ಶಬ್ದ ಇಟ್ಟು ಬರಿಯೋಣ ಆಗಿತ್ತು. ನಾನಾ ಕ್ಲೇಶ ತರಂಗಗಳಿಂದ ಗ್ರಸ್ತವಾದ್ದರಿಂದ ಬರಿಯಲಿಲ್ಲ. ಅಪರಾಧ ಕ್ಷಮಿಸಬೇಕು ಎಂತಲೂ ಬರೆದಿದ್ದಾರೆ. ಇವರಿಗೆ ಕೆಲಸವಿಲ್ಲದೆ ಬಹಳ ತೊಂದರೆಯಾಗಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆ.

ಶ್ರೀಭಗವಂತರಾಯರು ಸಂಪೂರ್ಣವಾಗಿ ಭಾಗವತವನ್ನು ಅವಲೋಕಿಸಿ ಶ್ರೀಮದಾಚಾರ್ಯರ ತಾತ್ಪರ್ಯಕ್ಕೆ ಟಿಪ್ಪಣಿಯನ್ನು ಸಹ ರಚಿಸಿದರು : ಈ ಪುಣ್ಯಪ್ರಭಾವದಿಂದ ಇವರಿಗೆ ಶ್ರೀಹರಿವಾಯುಗಳ ಅನುಗ್ರಹವಾಗಿ ಪುನಃ ಬಳ್ಳಾರಿ ಜಿಲ್ಲಾ ಹುವ್ವಿನಹಡಗಲಿ ತಾಲ್ಲೂಕು ತಹಶೀಲ್ದಾರರನ್ನಾಗಿ ನಿಯಮಿಸಿದಂತೆ ಆಜ್ಞೆ ಬಂದಿತು. ಈ ಹಡಗಲಿಯಲ್ಲಿ ಮಾತ್ರ ರಾಯರಿಗೆ ಏನೊಂದೂ ತೊಂದರೆಯಿಲ್ಲದೆ ಐದುವರ್ಷಗಳು ಕೆಲಸವು ಅವಿಚ್ಛಿನ್ನವಾಗಿ ನಡೆಯಿತು. ಈ ಕಾಲದಲ್ಲಿ ಇವರು ಅನೇಕ ಗ್ರಂಥಗಳಿಗೆ ಟಿಪ್ಪಣಿಗಳನ್ನು ರಚಿಸಿದರು. ಪ್ರತಿನಿತ್ಯವೂ ಹಡಗಲಿಗೆ ಏಳುಮೈಲಿ ದೂರದಲ್ಲಿರುವ ಮೊದಲುತಟ್ಟಿ (ಮದಲಗಟ್ಟಿ) ಎಂಬ ಹಳ್ಳಿಯಲ್ಲಿರುವ ಶ್ರೀಜನಮೇಜಯ ಪ್ರತಿಷ್ಠಿತವೂ ಶ್ರೀವ್ಯಾಸತೀರ್ಥರಿಂದ ಸುಪ್ರೋಕ್ಷಿತವೂ ಆದ ಶ್ರೀಪ್ರಾಣದೇವರ ದರ್ಶನಕ್ಕೆ ಹೋಗಿ

ತುಂಗಭದ್ರಾ ಸ್ನಾನಾನಂತರ ಪ್ರತಿಮಾರ್ಚನೆ ಮಾಡಿಕೊಂಡು ಕಚೇರಿಗೆ ಸರಿಯಾಗಿ ಸಕಾಲಕ್ಕೆ ಬರುತ್ತಾ ಸುಖವಾಗಿದ್ದರು. ಈಗ್ಯೆ ಅತಿ ವೃದ್ಧರಾದ ಗುರುಗಳಾದ ಶ್ರೀಮತ್ಪೂಜ್ಯ ವರಾಹಾಚಾರ್ಯರಿಗೆ ಪುಷ್ಕಳ ಧನಧಾನ್ಯ ವಸ್ತ್ರಾದಿಗಳಿಂದ ಪೂಜಾ ಸಲ್ಲಿಸಿದರು. ಐದು ವರುಷಗಳಾದ ನಂತರ ಪೆನ್‌ಷನ್ ಸಲ್ಲಿಸಿದರು. ಹೀಗೆ ಸೇವಾ ನಿವೃತ್ತರಾಗಿ ಬಳ್ಳಾರಿಗೆ ಬಂದು ಸೇರಿದರು. ಕೆಲವು ಕಾಲ ಹೀಗೆ ಜರುಗಲು ಶ್ರೀಮತ್ಪೂಜ್ಯ ಆಚಾರ್ಯರು ಅಸ್ತಂಗತರಾದರು. ಶ್ರೀವಿಠಲಾಚಾರ್ಯರು ಸಹ ಸ್ವರ್ಗಸ್ಥರಾದರು. ಗುರುಗಳ ವಂಶದಲ್ಲಿ ಜನಿಸಿ ಹನ್ನೆರಡು ವರ್ಷದ ಬಾಲಕರಾಗಿದ್ದ ವೆಂಕೋಬಾಚಾರ್ಯರೆಂಬುವರನ್ನು ರಾಯರು ಬಳ್ಳಾರಿಗೆ ಕರೆದೊಯ್ದು ಅವರಿಗೆ ಸಾಂಗವಾಗಿ ವಿದ್ಯೆಯನ್ನು ಕಲಿಸಿದರು. ಪಾಠ ಹೇಳುವ ಕ್ರಮವಾದರೋ ಹೀಗೆ ಇದ್ದಿತು. ತಾವೇ ಸ್ವಯಂ ಗೋಮಯವನ್ನು ತಂದು ಸಾರಿಸಿ ಮಣೆಯನ್ನು ಹಾಕಿ ಗುರುಪುತ್ರರನ್ನು ಅದರ ಮೇಲೆ ಕುಳ್ಳಿರಿಸಿ ತಾವು ಅವರ ಎದುರಿನಲ್ಲಿ ಶಿಷ್ಯಸ್ಥಾನದಲ್ಲಿ ಕುಳಿತು ಪಾಠ ಹೇಳುತ್ತಿದ್ದರು. ಇದಲ್ಲವೇ ನಿಜವಾದ ಗುರುಭಕ್ತಿಯು ! ಇವರಿಗೆ ಭಾಷ್ಯಾಂತ ಪಾಠ ಹೇಳಿ ಹರಪನಹಳ್ಳಿಗೆ ಕಳುಹಿಸಿಕೊಟ್ಟರು.

ಇಷ್ಟಾದರೂ ರಾಯರಿಗೆ ಕಾವ್ಯಗೋಷ್ಠಿಯಲ್ಲಿ ಪುಷ್ಕಳ ಅಭಿಮಾನ. ಪಾರ್ಸಿಭಾಷೆ-ಯಲ್ಲಿಯೂ ಮರಾಠಿ ಭಾಷೆಯಲ್ಲಿಯೂ ಕವಿತೆಗಳನ್ನು ರಚಿಸುವುದು ಇವೇ ಮುಂತಾದ ಕಾರ್ಯಗಳಲ್ಲಿ ತೊಡಗುತ್ತಾ ಇದ್ದರು.

ಹೀಗಿರಲು ಒಂದು ದಿನ ಶ್ರೀಮತ್ ಜಗನ್ನಾಥದಾಸವರ್ಯರು ಬಳ್ಳಾರಿಗೆ ದಿಗ್ವಿಜಯಮಾಡಿದರು. ಶ್ರೀಭಗವಂತರಾಯರ ವಿಷಯವು ಅವರಿಗೆ ತಿಳಿದಿತ್ತು. ಪ್ರಸಿದ್ಧ ರಾಯರಿಗೆ ದಾಸರು ದರ್ಶನ ಲಾಭವನ್ನಿತ್ತು ಸದುಪದೇಶಮಾಡಲು ಅಭಿಲಾಷೆಯು ಉತ್ಪನ್ನವಾಯಿತು. ಸಂಕಲ್ಪಿಸಿದಂತೆ ದಾಸರಾಯರು ರಾಯರ ಮನೆಗೆ ದಿಗ್ವಿಜಯ ಮಾಡಿದರು. ರಾಯರಾದರೂ ಪ್ರತ್ಯುತ್ಥಾನಾದಿ ಸರ್ವಪೂಜಾದಿಗಳನ್ನು ದಾಸವರ್ಯರಿಗೆ ಸಲ್ಲಿಸುವಂತೆ ಆಚರಿಸಿದರು. ಸ್ವಲ್ಪ ಯೋಗಕ್ಷೇಮ ವಿಚಾರವಾದೊಡನೆ ವಿದ್ಯಾಮದದ ವಿಷಯ ಪ್ರಸಕ್ತವಾಗಲು ದಾಸರು ತಮ್ಮ ಪೂರ್ವೇತಿಹಾಸವನ್ನೆಲ್ಲಾ ರಾಯರಿಗೆ ತಿಳುಹಿಸಿ, ''ರಾಯರೇ ಪಾರ್ಸಿ ಗ್ರಂಥಾದಿಗಳ ಅಧ್ಯಯನದಿಂದ ಕಾಲಹರಣ ಮಾಡುವುದಕ್ಕಿಂತ ಶ್ರೀಮತ್ಸಮೀರಸಮಯಾಭ್ಯಾಸದಿಂದ ಕಾಲವನ್ನು ಸಾರ್ಥಕ ಮಾಡುವುದು ಉಚಿತವಾದದ್ದು. ಯಾವ ಜನ್ಮದಲ್ಲಿ ಶ್ರೀಹನುಮದ್ಭಾಷ್ಯಾರ್ಥರೂಪ ಮಕರಂದಾಸ್ವಾದನ ಮಾಡುವುದರಲ್ಲಿ ಪ್ರಮಾದ ಹೊಂದುವವೋ ಆ ಜನ್ಮವನ್ನೆತ್ತಿದವರಿಗೆ ಮಾತ್ರ ವನಹಾರಿಗಳೆಂದಿಷ್ಟೇ ಹೆಸರು ಬರುವುದಲ್ಲದೆ ಬೇರೆಯೇನೂ ಇಲ್ಲ''ವೆಂದು ಹೇಳಿ ಹೊರಟುಹೋದರು. ಉಪದೇಶವು ನಾಟಿಕೊಂಡಿತು. ವಿದ್ಯೆಯಿಂದ ಉತ್ಪನ್ನವಾದ ಮದವು ಸ್ರವಿಸಿಹೋಯಿತು. ರಾಯರು ಪರಮವಿರಕ್ತರಾಗಿ ಸರ್ವಜ್ಞಶಾಸ್ತ್ರಾಧ್ಯಯನೈಕ ತತ್ಪರರಾದರು. ತಮ್ಮ ವಿದ್ಯಾಗುರುಗಳಾದ ಶ್ರೀಮದ್ಭಾಸ್ಕರೀ ವೆಂಕಟವರಾಹಾಚಾರ್ಯರನ್ನು, ಶ್ರೀಜಗನ್ನಾಥದಾಸರನ್ನೂ ಸಹ ಸಂತತ ಸ್ಮರಿಸುತ್ತಾ ಅವಶಿಷ್ಟಕಾಲವನ್ನು ಸಾರ್ಥಕಗೊಳಿಸಿದರು. ಶ್ರೀಭಗವಂತರಾಯರು ರಚಿಸಿದ ಗ್ರಂಥಗಳು ಅನೇಕವೆಂದು ಹೇಳುತ್ತಾರೆ. ಅವುಗಳ ಹೆಸರನ್ನು ಕೊಡುತ್ತೇನೆ. ಆ ಪೈಕಿ ಉಪಲಬ್ಧವಾದವುಗಳನ್ನು ಬರೆ ಕೊಡುತ್ತೇನೆ.

## ಗ್ರಂಥಗಳು

೧. ಭಾಷ್ಯಭಾವದೀಪ[೧]

೨. ಭಾಗವತತಾತ್ಪರ್ಯ ಟಿಪ್ಪಣಿ[೨]

೩. ಬ್ರಹ್ಮಸೂತ್ರಭಾಷ್ಯ ತತ್ತ್ವಪ್ರಕಾಶಿಕೋಕ್ತ ಪೂರ್ವಪಕ್ಷ ಸಿದ್ಧಾಂತ ಸಂಗ್ರಹ[೩]

೪. ಮಹೈತರೇಯಭಾಷ್ಯ ಟಿಪ್ಪಣಿ

೫. ಮಹೈತರೇಯ ಉಪನಿಷತ್ ಖಂಡಾರ್ಥ[೪]

೬. ವಾಯುಸ್ತುತಿ (ಹರಿವಾಯುಪರ ಟಿಪ್ಪಣಿ)[೫]

೭. ಬೃಹತೀಸಹಸ್ರ ಟಿಪ್ಪಣಿ[೫]

೮. ಅಂಭ್ರಣೀ ಸೂಕ್ತ ಟಿಪ್ಪಣಿ[೫]

೯. ಬಳಿತ್ಥಾಸೂಕ್ತ ಟಿಪ್ಪಣಿ[೫]

೧೦. ಮನ್ಯುಸೂಕ್ತ ಟಿಪ್ಪಣಿ

೧೧. ವಿಷ್ಣುಸೂಕ್ತ ಟಿಪ್ಪಣಿ

೧೨. ಘರ್ಮಸೂಕ್ತ ಟಿಪ್ಪಣಿ

೧೩. ತತ್ವಸಂಖ್ಯಾನ ಟಿಪ್ಪಣಿ[೬]

ಇವರು ಉಪನ್ಯಾಸಕ್ರಮವನ್ನು ವಿಶೇಷವಾಗಿ ಅವಲಂಬನೆ ಮಾಡಿದ್ದರು. ಆಗಿನ ಕಾಲದ ಪಂಡಿತರುಗಳು ಈ ಪದ್ಧತಿಯನ್ನು ಅನುಮೋದಿಸಲಿಲ್ಲ. ರಾಯರನ್ನು ಆಕ್ಷೇಪಮಾಡುತ್ತಿದ್ದರು. ಒಂದು ಸಭೆಯಲ್ಲಿ ಈ ವಿಷಯವು ಪ್ರಸಕ್ತವಾಲು 'ಶ್ರೀಮದಾ-ನಂದತೀರ್ಥರು ಉಪನ್ಯಾಸವನ್ನು ಕೊಡುತ್ತಿದ್ದರೆಂದು ಶ್ರೀಸುಮಧ್ವವಿಜಯದಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಅವರ ವಾಣಿಗೆ ಉಪನ್ಯಾಸ ಭಾರತಿ ಎಂದು ಹೆಸರಿಟ್ಟಿದ್ದಾರೆ. ಈ ಕ್ರಮವು ತಪ್ಪಲ್ಲ ಆದರೆ ಈ ಉಪನ್ಯಾಸವನ್ನು ಅಯೋಗ್ಯ ಸಭೆಯಲ್ಲಿ ಮಾಡಲಾಗದು. ಯೋಗ್ಯ ಜನಸಮುದಾಯದಲ್ಲಿ ಅವಶ್ಯ ಉಪನ್ಯಾಸಗಳನ್ನು ಹೇಳಿಯೇ ತೀರಬೇಕೆಂದು' ಎಲ್ಲರನ್ನೂ ಮನಮೆಚ್ಚಿಸಿದರೆಂದು ಐತಿಹ್ಯವಿದೆ. ಶ್ರೀ ಸರ್ವಜ್ಞರ ಗ್ರಂಥಗಳಲ್ಲಿರುವ ಮಾಧುರ್ಯವನ್ನು ಲಲಿತಪದಗಳಿಂದ ಅನುವಾದಮಾಡಿ ಆಯಾ ಗ್ರಂಥಗಳ ಅಧ್ಯಯನಾವಲೋಕನಗಳಲ್ಲಿ ಜನರಿಗೆ ಪ್ರವೃತ್ತಿಯುಂಟಾಗುವಂತೆ ಮಾಡುವುದು ಒಂದು ಭಗವತ್ಪ್ರೀತಿಕರವಾದ ಧರ್ಮವೆಂದು ಇವರು ಪ್ರಬಲವಾಗಿ ನಂಬಿದ್ದರು[೭].

---

೧. ಬ್ರಹ್ಮಸೂತ್ರಭಾಷ್ಯಭಾವಪ್ರದೀಪ

೨. ಭಾಗವತತಾತ್ಪರ್ಯಭಾವಪ್ರದೀಪ

೩. ಬ್ರಹ್ಮಸೂತ್ರಭಾಷ್ಯ ತತ್ತ್ವಪ್ರಕಾಶಿಕೋಕ್ತ ಪೂರ್ವಪಕ್ಷ ಸಿದ್ಧಾಂತ ಯುಕ್ತಿಸಂಗ್ರಹ

೪. ಮುದ್ರಿತ - ಜಿ.ಆರ್. ಸವಣೂರು, ಧಾರವಾಡ

೫. ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ, ವ್ಯಾಸನಕೆರೆ

೬. ಮುದ್ರಿತ

೭. 'ಮತ್ಸರಮಷಿಕಮಲಿನೋ ಜಗದಧಿಪತಿರಚಿತೋಽಪಿ ಭಾವದೀಪೋಽಯಮ್ ।
ಭಾವಸುಬೋಧವಿರೋಧೀ ನ ಲಸತಿ ನಿತರಾಂ ಯಥಾಗಮೋ ಬೌದ್ಧಃ '॥
- ಈ ಶ್ಲೋಕವು ಅವರ ರಚನೆ ಎಂದು ಪ್ರತೀತಿ.

ಶ್ರೀಭಗವಂತರಾಯರು ತಾವು ಉತ್ಕೃಷ್ಟಪಂಡಿತರಾಗಿದ್ದಾಗ್ಯೂ, ಕೆಲವು ತಪ್ಪುಗಳಿಂದ ಕೂಡಿದ ವೈದಿಕಬ್ರಾಹ್ಮಣರ ಬಾಯಿಂದ ಬಂದ ಶಬ್ದಗಳನ್ನು ಪರಮಪವಿತ್ರವೆಂದು ಭಾವಿಸುತ್ತಿದ್ದರು. ಸಿದ್ಧಾಂತಕ್ಕೆ ವಿರೋಧವೆಂದು ತಮಗೆ ತೋರಿದರೆ ಸದರಿ ಆಚಾರ್ಯರು ಇದ್ದೆಡೆಗೆ ಹೋಗಿ ವಿಜ್ಞಾಪನೆಮಾಡಿಕೊಂಡು ಬರುವ ಸಂಪ್ರದಾಯವುಳ್ಳವರು. ತಾವು ಪಾಠ ಹೇಳುತ್ತಾ ಪುರಾಣ ಹೇಳುತ್ತಾ ಕುಳಿತಾಗ್ಯೆ ಆಚಾರ್ಯರುಗಳು ಯಾರೇ ಬರಲಿ ಪ್ರತ್ಯುತ್ಥಾನಮಾಡಿಯೇ ಮುಂದಕ್ಕೆ ಸಾಗುತ್ತಿದ್ದರು. ಈಗಿನ ಕೆಲವು ಅಕ್ಷರ ಸಂಯುಕ್ತ ಗೃಹಸ್ಥರಂತೆ ಆಚಾರ್ಯರುಗಳನ್ನು ತೃಣಪ್ರಾಯಮಾಡಿ ದ್ರೋಹ ಸಂಪಾದನೆ ಮಾಡುತ್ತಿರಲಿಲ್ಲ.

ಶ್ರೀ ರಾಯರು ವೈದಿಕಮಾರ್ಗಾವಲಂಬಿಗಳಾದ ಲೌಕಿಕ ಮಹಾಜನಗಳಿಗೆ ಆದರ್ಶ-ಪ್ರಾಯರಾಗಿದ್ದರು. ಇವರನ್ನು ಅನುಸರಸಿಯೇ 'ಮಧ್ವಪತಿ', 'ಕಂದಿ', 'ಕಾಕೂರು' ಇತ್ಯಾದಿ ಸದ್ವಂಶೀಯ ಗೃಹಸ್ಥರು ಸದ್ವೈಷ್ಣವದೀಕ್ಷಾಸಂಪನ್ನರಾಗಿ ಇರುತ್ತಾರೆ.

ಇವರ ವಿರಕ್ತಿಯು ಸಹಜವಾದದ್ದು. ನಿದರ್ಶನಾರ್ಥವಾಗಿ ಒಂದು ದೃಷ್ಟಾಂತ ಕೊಡುವೆವು. ಮನೆಯಲ್ಲಿ ಇದ್ದದ್ದನ್ನೇ ಪಾಕಮಾಡಿಕೊಂಡು ತಾವು ಅಷ್ಟೇ ಭೋಜನ ಮಾಡುತ್ತಿದ್ದರು. ಶಿಷ್ಯರಿಗೂ ಅದೇ ಅನ್ನವನ್ನೇ ಹಾಕಿಸುತ್ತಿದ್ದರು. ಶ್ರೀವೆಂಕಟೇಶ ನವರಾತ್ರಿಯು ಬರಲು ಶಿಷ್ಯವರ್ಗದಲ್ಲಿ ತಮ್ಮ ಗುರುಪುತ್ರರಾದ ವೆಂಕೋಬಾಚಾರ್ಯರೂ ಸಹ ಇದ್ದರು. ''ಹುಡುಗರು ಸೌಷ್ಠವ ಭೋಜನೇಚ್ಛುಗಳಾಗಿರುತ್ತಾರೆ. ಅವರವರ ಮನೆಗಳಿಗೆ ಹಬ್ಬ ಮುಗಿಯುವವರೆಗೂ ಹೋಗಿಬರಲಿ'' ಎಂದು ಎಲ್ಲರಿಗೂ ನಿಮ್ಮ ಊರುಗಳಿಗೆ ಹೋಗಿ ಹಬ್ಬ ಆದೊಡನೆ ಬರಬಹುದೆಂದು ಸೂಚಿಸಿದರು. ಶಿಷ್ಯರು ಇದಕ್ಕೆ ಸಮ್ಮತಿಸಲಿಲ್ಲ. ''ಸ್ವಾಮಿ ತಮ್ಮ ಸನ್ನಿಧಿಯಲ್ಲಿ ಇರುವುದೇ ನಮಗೆ ಹಬ್ಬ, ಉಪ್ಪು, ಅನ್ನ, ಎರಡೇ ಆದರೂ ಚಿಂತೆಯಿಲ್ಲ. ಪಾಠಕ್ಕೆ ವಿಚ್ಛಿತ್ತಿ ಬರುವುದಾದ್ದರಿಂದ ನಾವು ಇಲ್ಲಿಯೇ ಇರುತ್ತೇವೆ''ಎಂದು ಬಿನ್ನವಿಸಿದರು. ರಾಯರು ಸುಮ್ಮನಾದರು. ಅಕಸ್ಮಾತ್ತಾಗಿ ದೇವಾಲಯಕ್ಕೆ ಹೋಗುವಾಗ್ಯೆ ಬಳ್ಳಾರಿ ಜಿಲ್ಲಾ ಕಲೆಕ್ಟರವರ ದಿವಾನರಾಗಿದ್ದ ನೀಲಕಂಠರಾಯರ ಮನೆಯು ಅಲ್ಲಿಯೇ ಸಮೀಪದಲ್ಲಿತ್ತು. ರಾಯರು ಅವರ ಮನೆಗೆ ಕಾಲಟ್ಟ ತಕ್ಷಣವೇ ಬಹು ಭಯಭಕ್ತಿಗಳಿಂದ ನೀಲಕಂಠರಾಯರು ಇವರನ್ನು ಒಳಗೆ ಕರೆದುಕೊಂಡುಹೋಗಿ ಯೋಗಕ್ಷೇಮ ವಿಚಾರಮಾಡುತ್ತಾ ಕುಳಿತುಕೊಂಡರು. ಮಧ್ಯೆ ಶ್ರೀನೀಲಕಂಠರಾಯರಿಗೆ ಹೀಗೆ ಸ್ಫುರಣವಾಯಿತು. ಶ್ರೀಭಗವಂತರಾಯರು ದೊಡ್ಡ ವಿರಕ್ತರು. ಇವರು ನಿಷ್ಕಾರಣವಾಗಿ ಬಂದಿರಲಾರರು. ಏನೋ ನನ್ನಲ್ಲಿ ಅನುಗ್ರಹಮಾಡುವುದಕ್ಕಾಗಿಯೇ ಬಂದಿರಬೇಕೆಂದು ತಿಳಿದು ದ್ವಾರಾಂತರದಿಂದ ಹೊರಕ್ಕೆ ಬಂದು ಅಲ್ಲಿ ನಿಂತು ಗುಜುಗುಟ್ಟುತ್ತಿರುವ ಶಿಷ್ಯವರ್ಗದಿಂದ ರಾಯರಿಗೆ ಖರ್ಚಿಗೆ ಸ್ವಲ್ಪ ತೊಂದರೆಯಾಗಿದೆ ಎಂದು ಗ್ರಹಿಸಿ ಮೂರುತಿಂಗಳಿಗೆ ಸಾಕಾಗುವಷ್ಟು ಸಾಹಿತ್ಯವನ್ನು ಶ್ರೀನೀಲಕಂಠರಾಯರು ಭಗವಂತರಾಯರ ಮನೆಗೆ ಮಾರ್ಗಾಂತರದಿಂದ ಕಳುಹಿಸಕೊಟ್ಟು ಒಳಕ್ಕೆ ಬಂದು ಪುನಃ ರಾಯರೊಂದಿಗೆ ಸಂಭಾಷಣಕ್ಕೆ ಕುಳಿತುಕೊಂಡರು. ''ವೇಳೆ

ಆಯಿತು ಹೋಗಿಬರುತ್ತೇ''ವೆಂದು ಭಗವಂತರಾಯರು ಏಳಲು ''ಅವಶ್ಯವಾಗಿ ಆಗಲಿ ಹೋಗಿ ಬರಬೇಕು. ಹೀಗೆಯೇ ನನ್ನ ಮೇಲೆ ಕೃಪೆಯಿಟ್ಟು ಆಗಾಗ್ಯೆ ದಯಮಾಡಿ-ಸುತ್ತಿರಬೇಕು'' ಎಂದು ಬೀಳ್ಕೊಟ್ಟರು. ಶ್ರೀಭಗವಂತರಾಯರು ಮನೆಗೆ ಬಂದು ಈ ಧಾನ್ಯಸಮೃದ್ಧಿಯನ್ನು ಕಂಡು ವೃತ್ತಾಂತವನ್ನೆಲ್ಲಾ ತಿಳಿದು ಇದೆಲ್ಲವೂ ಶ್ರೀಹರಿವಾಯುಗಳ ಕೃಪೆ ಎಂದು ಭಾವಿಸುತ್ತಾ ನವರಾತ್ರೋತ್ಸವವನ್ನು ಸಾಂಗವಾಗಿ ನೆರವೇರಿಸಿದರು.

*****

# ಮುಖಪುಟ ಹಾಗೂ ರಕ್ಷಾಪುಟ ಚಿತ್ರಗಳ ಬಗ್ಗೆ ಲೇಖನ

–ವಿಪ್ರ

## ರಕ್ಷಾಪುಟ – ೧ : ಶ್ರೀವಿಮಾನ ಶ್ರೀನಿವಾಸದೇವರು, ತಿರುಪತೀಕ್ಷೇತ್ರ

ತಿರುಪತಿ ಎಂದರೆ ಭೂವೈಕುಂಠ, ಶ್ರೀನಿವಾಸನ ದರ್ಶನ ಎಂದರೆ ಸಾಕ್ಷಾತ್ ಶ್ರೀಹರಿಯ ದರ್ಶನ. ಇದು ಶಾಸ್ತ್ರದ ಪ್ರತಿಪಾದನೆಯಂತೆ ಆಸ್ತಿಕ ಜನತೆಯ ನಂಬಿಕೆಯೂ ಆಗಿದೆ. ಗಂಟೆಗಟ್ಟಲೆ ಕಾದು ನೂರಾರು ರೂಪಾಯಿಗಳನ್ನು ತೆತ್ತು, ಕೇವಲ ಒಂದೆರಡು ಸೆಕೆಂಡುಗಳ ದರ್ಶನಕ್ಕಾಗಿ ಹತ್ತಾರು ತಾಸುಗಳ ಕಾಲ ಕಾಯುವುದು ಈ ಕ್ಷೇತ್ರದ ವೈಶಿಷ್ಟ್ಯ. ಸಿನಿಮಾ ನಾಟಕಗಳಿಗೂ ಇಲ್ಲದ ಕಾತರ ಲಕ್ಷಗಟ್ಟಲೆ ಜನರಲ್ಲಿ ಶ್ರೀನಿವಾಸನ ಬಗ್ಗೆ ಇದೆ ಎಂದರೆ ಅದು ಒಂದು ಮಹಾಸೋಜಿಗ. ಒಂದೆಡೆ ಮನೆಯಲ್ಲೂ ದೇವರಿನ್ನಿರಿಸಿಕೊಳ್ಳದ ನಾಸ್ತಿಕ್ಯ; ಮತ್ತೊಂದೆಡೆ ಇಂತಹ ಊಹೆಗೂ ಮೀರಿದ ಆಸ್ತಿಕ್ಯ. ಇವು ಇಂದಿನ ಅಚ್ಚರಿಗಳಲ್ಲೊಂದು. ಹಾಗೆ ದಿನಗಟ್ಟಲೆ ಕಾದರೂ ದರ್ಶನವಿಲ್ಲದೆ ಹೋಗುವ ಪ್ರಸಂಗಗಳು ಹಿಂದಿನ ಕಾಲದಿಂದಲೂ ನಡೆದು ಬಂದಿವೆ. ಕೆಲವರಿಗಂತೂ ದರ್ಶನವಿಲ್ಲದೆ ಭೋಜನ ನಿಷಿದ್ಧ ಎಂಬ ಅಪೂರ್ವ ಶ್ರದ್ಧೆ. ಅದಕ್ಕೆಲ್ಲಾ ಪರಿಹಾರವಾಗಿ ಶ್ರೀನಿವಾಸ ದೇವಸ್ಥಾನದ ಗರ್ಭಗುಡಿಯ ಮೇಲಿನ ಗೋಪುರದಲ್ಲಿ ಕಂಗೊಳಿಸುವ ಮೂರ್ತಿಯೇ ಈ ವಿಮಾನ ಶ್ರೀನಿವಾಸದೇವರು. ಇದು ಪ್ರಾಯಃ ಗೋಪುರದಷ್ಟೇ ಪ್ರಾಚೀನವಾದ ಮೂರ್ತಿ. ಆದರೆ ಇದರ ದರ್ಶನದ ಪ್ರಾಮುಖ್ಯವನ್ನು ನಿರೂಪಿಸಿದ ಶ್ರೇಯಸ್ಸು ಶ್ರೀಚಂದ್ರಿಕಾಚಾರ್ಯರೆಂದೇ ಪ್ರಸಿದ್ಧರಾದ ಶ್ರೀವ್ಯಾಸತೀರ್ಥರು. ಅವರ ಕಾಲದಲ್ಲಿ ತಿರುಪತಿಯು ಶುದ್ಧವೈಷ್ಣವ ಕ್ಷೇತ್ರವಾಗಿ ೧೨ ವರ್ಷಗಳ ಕಾಲ ದಾಖಲಾಗಿದ್ದು ಇತಿಹಾಸ. ಅವರಿಂದ ವೈಷ್ಣವ ಲೋಕಕ್ಕೆ ಸಂದಿರುವ ಕಾಣಿಕೆ ಅದ್ಭುತವಾದದ್ದು. ಈ ಮೂರ್ತಿಯೊಂದಿಗೆ ಶ್ರೀವ್ಯಾಸರಾಜರ ಅನುಗ್ರಹವನ್ನು ಚಿಂತಿಸಿದಲ್ಲಿ ಇದರ ದರ್ಶನ ಇನ್ನೂ ಹೆಚ್ಚು ಸಾರ್ಥಕವಾದುದು. ಮಧ್ವಾಂತರ್ಗತ ಶ್ರೀನಿವಾಸ ನಿಜ ಅರ್ಥದಲ್ಲಿ ಪರಮಾನುಗ್ರಹ ಮಾಡುವನು.

*****

# ಶ್ರೀಕನಕದಾಸರ ಹರಿಭಕ್ತಿಸಾರ

ಅನುವಾದ – ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

(ಹಿಂದಿನ ಸಂಚಿಕೆಯಿಂದ)

**ವೇದಗೋಚರ ವೇಣುನಾದವಿ-**
**ನೋದ ಮಂದರಶೈಲಧರ ಮಧು-**
**ಸೂದನಾಚ್ಯುತ ಕಂಸದಾನವರಿಪು ಮಹಾಮಹಿಮ ।**
**ಯಾದವೇಂದ್ರ ಯಶೋದೆನಂದನ**
**ನಾದಬಿಂದುಕಳಾತಿಶಯ ಪ್ರ-**
**ಹ್ಲಾದರಕ್ಷಕ ವರದ ರಕ್ಷಿಸು ನಮ್ಮನನವರತ ॥೭॥**

ವೇದಗಳಿಂದ ತಿಳಿಯಲ್ಪಡುವವನೇ ! ವೇಣುನಾದಪ್ರಿಯನೇ ! ಮಂದರಪರ್ವತವನ್ನು ಧರಿಸಿವನೇ ! ಮಧುಸೂದನನೇ ! ಅಚ್ಯುತನೇ ! ಕಂಸ ಮೊದಲಾದ ರಕ್ಕಸರ ವೈರಿಯೇ ! ಮಹಾಮಹಿಮನೇ ! ಯಾದವಶ್ರೇಷ್ಠನೇ ! ಯಶೋದೆಯ ಕುಮಾರನೇ ! ನಾದ, ಬಿಂದು, ಕಲಾಗಳಿಂದ ಅತಿಶಯನೆಂಬುದಾಗಿ ಸ್ತುತಿಸಲ್ಪಡುವವನೇ, ಪ್ರಹ್ಲಾದನನ್ನು ರಕ್ಷಿಸಿದವನೇ, ವರವನ್ನು ನೀಡುವವನೇ, ನಮ್ಮನ್ನು ಸದಾ ರಕ್ಷಿಸು.

೧. **ವೇದಗೋಚರ :** ವೇದಗಳಿಂದ ತಿಳಿಯಲ್ಪಡುವವನು ಎಂದರೆ ಸದಾಗಮೈಕವೇದ್ಯ (ಸಚ್ಛಾಸ್ತ್ರಗಳಿಂದ ಮಾತ್ರವೇ ತಿಳಿಯಲ್ಪಡುವವನು) ಎಂದರ್ಥ. ಇದು ಶಾಸ್ತ್ರಯೋನಿತ್ವಾತ್ ಎಂಬ ಬ್ರಹ್ಮಸೂತ್ರದ ಅರ್ಥವೂ ಆಗಿದೆ. ವೇದಗಳಿಂದ ತಿಳಿಯಲ್ಪಡುವವನು ಎಂಬುದಕ್ಕೆ ಸಕಲವೇದಪ್ರತಿಪಾದ್ಯ ಎಂಬ ಅರ್ಥವೂ ವಿವಕ್ಷಿತ. ಆದರೆ ಸಕಲವೇದಗಳಿಂದಲೂ ಸಮಗ್ರವಾಗಿ ತಿಳಿಯಲ್ಪಡದವನು ಎಂಬ ವಿಶೇಷವನ್ನು ಗಮನಿಸಬೇಕು. ವೇದಾಭಿಮಾನಿ ದೇವತೆಗಳಿಗೆ ಸಾಕ್ಷಾತ್ತಾಗಿ ಗೋಚರಿಸುವವನು ಎಂದೂ ಅರ್ಥವಾಗುವುದು.

೨. **ವೇಣುನಾದವಿನೋದ** : ವೇಣುವಿನ ಧ್ವನಿಯಿಂದ ಗೋಗೋಪರನ್ನು, ಗೋಪಿಯರನ್ನು ಆನಂದ ಪಡಿಸಿದವನು ಎಂದರ್ಥ. ವೇಣು ಮೊದಲಾದ ವಾದ್ಯಗಳ ಧ್ವನಿಗಳಿಗೆ ಒಲಿಯುವವನು ಎಂಬರ್ಥವೂ ವಿವಕ್ಷಿತ. ಇದು ಕೃಷ್ಣಾವತಾರಕ್ಕೆ ಅನ್ವಯಿಸುವ ವರ್ಣನೆ.

೩. **ಮಂದರಶೈಲಧರ** : ಮಂದರವೆಂಬ ಪರ್ವತವನ್ನು ಧರಿಸಿದವನು; ಮಂದರವೆಂಬುದು ಸಪ್ತಕುಲಪರ್ವತಗಳಲ್ಲಿ ಒಂದು; ಚಿನ್ನದ ಪರ್ವತ ಎಂಬುದು ಇದರ ವಿಶೇಷ . ಶಿವನ ವರದಿಂದಾಗಿ ಇತರರಿಂದ ಧರಿಸಲಾಗದ್ದು ಎಂಬ ವಿಶೇಷ ಉಲ್ಲೇಖ ಇದರ ಬಗ್ಗೆ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಬಂದಿದೆ. ಕ್ಷೀರಸಮುದ್ರದ ಮಥನಕ್ಕೆ ಕಡಗೋಲಾಗಿ ಇದು ಉಪಯೋಗಿಸಲ್ಪಟ್ಟಿತು. ಅದನ್ನು ಲೀಲಾಜಾಲವಾಗಿ ಕೂರ್ಮರೂಪದಿಂದ ಧರಿಸಿದ ಹಿರಿಮೆ ಶ್ರೀಹರಿಯದು. ಇದರಿಂದಾಗಿ ಅಮೃತಮಥನ–ಕಾರ್ಯ ಸಾಧ್ಯವಾಗಿ, ದೇವತೆಗಳು ಅಮೃತವನ್ನು ಪಡೆಯಲು ಕಾರಣವಾಯಿತು.

೪. **ಮಧುಸೂದನ :** ಮಧು ಎಂಬ ಅಸುರನನ್ನು ಸಂಹರಿಸಿದವನು; ಮಧು ಎಂಬುವನು ಮಧುಕೈಟಭರಲ್ಲಿ ಒಬ್ಬನು. ಇವನ ಸಂಹಾರದ ಬಳಿಕ ಇವನ ರೇತಸ್ಸಿನಿಂದಲೇ ಭೂಮಿಯು ನಿರ್ಮಾಣವಾಗಿ ಮೇದಿನೀ ಎಂದು ಹೆಸರಾಯಿತು. ಬ್ರಹ್ಮವರದಿಂದಾಗಿ ಅವಧ್ಯನಾಗಿದ್ದ ಇವನನ್ನು ಶ್ರೀಹರಿಯು ಸಂಹರಿಸಿದ ಉಲ್ಲೇಖ ಪುರಾಣಗಳಲ್ಲಿದೆ. ಇದು ಕೇಶವಾದಿ ಚತುರ್ವಿಂಶತಿ ರೂಪಗಳಲ್ಲಿ ಹಾಗೂ ವಿಶ್ವಾದಿ ಸಾವಿರರೂಪಗಳಲ್ಲೂ ಮಧುಸೂದನ ರೂಪಗಳೂ ಬಂದಿವೆ.

೫. **ಅಚ್ಯುತ :** ಯಾವುದೇ ಬಗೆಯ ನಾಶವನ್ನೂ ಹೊಂದದವನು; ಈ ಬಗ್ಗೆ ಈಗಾಗಲೇ ವಿವರಗಳನ್ನು ನೀಡಲಾಗಿದೆ. ಇದೂ ಸಹ ಕೇಶವಾದಿ ಚತುರ್ವಿಂಶತಿ ರೂಪಗಳಲ್ಲೂ ಹಾಗೂ ವಿಶ್ವಾದಿ ಸಾವಿರರೂಪಗಳಲ್ಲೂ ಬಂದಿರುವ ರೂಪ.

೬. **ಕಂಸದಾನವರಿಪು :** ಕಂಸ ಎಂಬ ದಾನವನಿಗೆ ಶತ್ರುವಾದವನು; ಕಂಸ ಶ್ರೀಕೃಷ್ಣನಿಗೆ ಸೋದರಮಾವ. ಅವನು ಸಂಬಂಧದಲ್ಲಿ ಮಾನ್ಯನೆನಿಸಿದರೂ ಯೋಗ್ಯತೆಯಲ್ಲಿ ಅಸುರನಾಗಿದ್ದವನು ಅದರಿಂದಾಗಿಯೇ ಶ್ರೀಕೃಷ್ಣ ಅವನನ್ನು ಸಂಹರಿಸಿದ ಎಂಬ ವಿಶೇಷಾಂಶವನ್ನು ಸೂಚಿಸಲೆಂದು ಕಂಸರಿಪು ಎಂದು ಮಾತ್ರ ಕರೆಯದೆ ಕಂಸದಾನವರಿಪು ಎಂದಿರುವರು ಎಂದು ತಿಳಿಯಬೇಕು.

೭. **ಮಹಾಮಹಿಮ :** ಮಹಿಮೆ ಎಂದರೆ ಹಿರಿತನ ಎಂದರ್ಥ; ಇದು ಅಷ್ಟಸಿದ್ಧಿಗಳಲ್ಲಿ ಒಂದು; ಅಣಿಮಾ ಎಂಬುದು ಚಿಕ್ಕದಾಗುವಿಕೆಯಾದರೆ ಮಹಿಮೆ ಎಂಬುದು ದೊಡ್ಡದಾಗುವಿಕೆ ಎಂದರ್ಥ. ಶ್ರೀಹರಿಯು ತ್ರಿವಿಕ್ರಮರೂಪದಲ್ಲಿ ವಿಶ್ವವನ್ನೇ ವ್ಯಾಪಿಸಿದ್ದು ಸುಪ್ರಸಿದ್ಧ. ಆದ್ದರಿಂದಲೇ ಅವನದು ಕೇವಲ ಮಹಿಮೆಯಷ್ಟೇ ಆಗಿರದೆ ಮಹಾಮಹಿಮೆ-ಯಾಗಿದೆ ಎಂದು ತಿಳಿಯಬೇಕು. ಇದು **ಮಹತೋಮಹೀಯಾನ್** ಎಂಬ ಉಪನಿಷದ್ವಾಕ್ಯದ ವಿವರಣೆಯೂ ಆಗಿದೆ. 'ನಿರವಧಿಕಮಹಿಮಾಸಂಪನ್ನ' ಎಂಬುದು ಇದರ ಒಟ್ಟು ಭಾವ.

೮. **ಯಾದವೇಂದ್ರ :** ಯಾದವರಲ್ಲಿ ಶ್ರೇಷ್ಠನಾದವ; ಶ್ರೀರಾಮರೂಪದಿಂದ 'ರಾಘವೇಂದ್ರ' ಎನ್ನಿಸಿದಂತೆ ಶ್ರೀಕೃಷ್ಣರೂಪದಿಂದ 'ಯಾದವೇಂದ್ರ' ಎನ್ನಿಸಿದ್ದು ಶ್ರೀಹರಿಯ ಮತ್ತೊಂದು ಹಿರಿಮೆ; ಯಾದವನೂ ಇಂದ್ರನೂ ಆದವನು ಎಂದೂ ಅರ್ಥಮಾಡಿ-ಕೊಳ್ಳಬಹುದು, ಆಗ ಯಾದವಕೃಷ್ಣನಾಗಿ ಅವತರಿಸಿದ ಶ್ರೀಹರಿ ಯಜ್ಞನಾಮಕನಾಗಿ ಇಂದ್ರಪದವಿಯಲ್ಲೂ ಇದ್ದ ಎಂಬ ವಿಶೇಷಾರ್ಥ ಲಭಿಸುವುದು.

೯. **ಯಶೋದೆನಂದನ :** ಯಶೋದೆಯ ಮಗ ಎಂಬುದು ಮೇಲ್ನೋಟದ ಅರ್ಥ. ವಾಸ್ತವವಾಗಿ ಅವನು ಯಶೋದಾನಂದನನಲ್ಲ ಎಂಬುದು ತಿಳಿದೇ ಇರುವ ವಿಚಾರ. ನಿಜವಾದ ಅರ್ಥದಲ್ಲಿ ಅವನು ದೇವಕೀನಂದನನೂ ಅಲ್ಲ, ಆದ್ದರಿಂದ ಯಶೋದೆಗೆ ಆನಂದ ನೀಡಿದವನು ಎಂದಷ್ಟೇ ಇದರ ಭಾವ. **'ಏನು ಸುಕೃತವ ಮಾಡಿದಳೋ ಯಶೋದೆ '** ಎಂಬ ಹಿರಿಮೆಯನ್ನು ಯಶೋದೆ ಪಡೆಯುವಂತಾದದ್ದು ಶ್ರೀಕೃಷ್ಣನಿಂದಲೇ

ಅಲ್ಲವೇ ! ಮತ್ತೊಂದು ಅರ್ಥದಲ್ಲಿ ತನ್ನ ಯಶಸ್ಸನ್ನು ಜನತೆಗೆ ತಿಳಿಯಪಡಿಸುವವರಿಗೆ ಆನಂದನೀಡುವವನು ಎಂದಾಗುವುದು.

೧೦. **ನಾದಬಿಂದುಕಳಾತಿಶಯ :** ನಾದ, ಬಿಂದುಗಳನ್ನು, ಕಲೆಗಳನ್ನಾಗಿ ಹೊಂದಿದ ಓಂಕಾರದಿಂದ ಸರ್ವೋತ್ತಮನು ಎಂಬುದಾಗಿ ಪ್ರತಿಪಾದಿತನಾದವನು ಎಂದರ್ಥ. ನಾದ, ಬಿಂದು ಎಂಬವು ಓಂಕಾರದ ಅಕ್ಷರಗಳಲ್ಲಿ ಎರಡು : ಅ, ಉ, ಮ, ನಾದ, ಬಿಂದು, ಘೋಷ, ಶಾಂತ ಹಾಗೂ ಅತಿಶಾಂತ ಎಂಬವು ಓಂಕಾರದಲ್ಲಿನ ಒಟ್ಟು ಎಂಟು ಅಕ್ಷರಗಳು ತಂತ್ರಸಾರಸಂಗ್ರಹ ಮೊದಲಾದ ಗ್ರಂಥಗಳಲ್ಲಿ ಬಂದಿದೆ.

೧೧. **ಪ್ರಹ್ಲಾದರಕ್ಷಕ :** ಪ್ರಹ್ಲಾದನನ್ನು ರಕ್ಷಿಸಿದವನು; ಪ್ರಹ್ಲಾದ ಧ್ರುವನಂತೆ ಬಾಲ್ಯದಲ್ಲೇ ಶ್ರೀಹರಿಯನ್ನು ಸಾಕ್ಷಾತ್ಕರಿಸಿಕೊಂಡ ಭಕ್ತಾಗ್ರೇಸರ. ವಾಯುದೇವರ ಆವೇಶವನ್ನು ಹೊಂದಿದ್ದುದು ಅವನ ವಿಶೇಷ. ಇದರಿಂದ ವಾಯುದೇವರ ಅನುಗ್ರಹಪಾತ್ರರಾದವರಿಗೆ ರಕ್ಷಣೆ ನೀಡುವವನು ಎಂಬ ವಿಶೇಷಾರ್ಥ ಲಭಿಸುತ್ತದೆ. ಪ್ರಹ್ಲಾದರಕ್ಷಕವರದ ಎಂಬುದಾಗಿ ಒಂದೇ ಪದವನ್ನಾಗಿಯೂ ಇದನ್ನು ಓದಿಕೊಳ್ಳಬಹುದು; ಆಗ ಪ್ರಹ್ಲಾದನಿಗೆ ರಕ್ಷಣೆ ನೀಡಿದವನು, ವರನೀಡಿದವನು ಎಂಬ ಅರ್ಥ ಲಭಿಸುವುದು.

೧೨. **ವರದ :** ವರ ನೀಡುವವನು ಎಂದರ್ಥ. ವರಂ ದ್ಯತಿ (ದೋ ಅವಖಂಡನೆ) ಎಂಬ ಮತ್ತೊಂದು ಅರ್ಥವೂ ಇದಕ್ಕೆ ಉಂಟು. ಇದರಿಂದ ವರನೀಡುವವನು ಮಾತ್ರವಲ್ಲದೆ ಬ್ರಹ್ಮರುದ್ರಾದಿ ಇತರರು ನೀಡಿದ ವರಗಳನ್ನು ಉಲ್ಲಂಘಿಸುವವನು ಎಂದು ಅರ್ಥವಾಗುವುದು. ಇದು 'ವರದೇಶ ವರಪ್ರದಂ' ಎಂಬ ದ್ವಾದಶಸ್ತೋತ್ರದ ವಿವರಣೆ ಎಂದು ತಿಳಿಯಬಹುದು.

೧೩. ಕೂರ್ಮ, ಕೃಷ್ಣ, ನರಸಿಂಹ, ಮಧುಸೂದನ ಮೊದಲಾದ ಇತರ ರೂಪಗಳನ್ನು ಇದರಲ್ಲಿ ಉಲ್ಲೇಖಿಸುವ ಮೂಲಕ ಶ್ರೀಹರಿಯ ರೂಪರೂಪಗಳಿಗೆ ಭೇದವಿರದು ಎಂಬ ವಿಶೇಷಾಂಶ ಸೂಚಿತ ಎಂದೂ ತಿಳಿಯಬಹುದು.

**- ಮುಂದುವರಿಯುವುದು**

*****

ಗ್ರಂಥವೆಂದರೆ ೩೨ ಅಕ್ಷರಗಳು, ದ್ವಾತ್ರಿಂಶಲ್ಲಕ್ಷಣೋಪೇತರಾದ ಶ್ರೀಮದಾಚಾರ್ಯರ ಸರ್ವಮೂಲ ಗ್ರಂಥಗಳು ಹಾಗೂ ಅವುಗಳ ವಿವರಣೆಗಳಿಗೆ ಗ್ರಂಥವೆಂಬ ಹೆಸರು ಅನ್ವರ್ಥವೆನಿಸುವುದು.

★★★

ಶಾಸ್ತ್ರಾಧ್ಯಯನವು ಯೋಗ್ಯರಿಗೆ ತಪ್ಪನ್ನು ತಿದ್ದಿಕೊಳ್ಳಲು ನೆರವಾಗುವ ಸಾಧನವಾದರೆ, ಅಯೋಗ್ಯರಿಗೆ ತಮ್ಮ ತಪ್ಪನ್ನು ಸಮರ್ಥಿಸಿಕೊಳ್ಳಲು ಸಾಧನವಾಗುತ್ತದೆ.

# ಮಾಸದ ವಿಶೇಷಗಳು

## ಚೈತ್ರಮಾಸ ಕೃಷ್ಣಪಕ್ಷ

೧೩.೦೪.೧೨ : ಮೇಷ ಸಂಕ್ರಮಣ
(ಪರ್ವಕಾಲ ಮಧ್ಯಾಹ್ನ ೨.೫೧ರಿಂದ ಸೂರ್ಯಾಸ್ತದವರೆಗೆ)

೧೪.೦೪.೧೨ : **ಸೌರಮಾನ ಯುಗಾದಿ**

೧೫.೦೪.೧೨ : ವಿಷ್ಣುಪಂಚಕವ್ರತ

**೧೬.೦೪.೧೨ : ದಶಮೀ**

**೧೭.೦೪.೧೨ : ಸಕಲ ವೈಷ್ಣವರಿಗೆ ಏಕಾದಶೀ (ವರೂಥಿನೀ)**

**೧೮.೦೪.೧೨ : ಅಲ್ಪದ್ವಾದಶೀ, ಬೆಳಗ್ಗೆ ೭.೨೪ರ ಒಳಗೆ**

೨೦.೦೪.೧೨ : ದರ್ಶ

೨೧.೦೪.೧೨ : ವಿಷ್ಣಪಂಚಕವ್ರತ, ಅಮಾವಾಸ್ಯೆ

## ವೈಶಾಖಮಾಸ ಶುಕ್ಲಪಕ್ಷ

**(ಮಾಸನಿಯಾಮಕ : ಕಮಲಾಲಯಾ – ಮಧುಸೂದನ)**

೨೨.೦೪.೧೨ : ಚಂದ್ರದರ್ಶನ

**೨೪.೦೪.೧೨ : ಅಕ್ಷಯತೃತೀಯಾ, ತ್ರೇತಾಯುಗಾದಿ,
ಪರಶುರಾಮಜಯಂತೀ**

೨೮.೦೪.೧೨ : ಗಂಗೋತ್ಪತ್ತಿ, ಗಂಗಾಪೂಜೆ

೩೦.೦೪.೧೨ : ಗುರು ಅಸ್ತ (೨೮.೫.೨೦೧೨ರವರೆಗೆ)

**೦೧.೦೫.೧೨ : ದಶಮೀ**

**೦೨.೦೫.೧೨ : ಸರ್ವರಿಗೂ ಏಕಾದಶೀ (ಮೋಹಿನೀ)**

**೦೩.೦೫.೧೨ : ದ್ವಾದಶೀ, ಪ್ರದೋಷ**

**೦೪.೦೫.೧೨ : ವೇದವ್ಯಾಸಜಯಂತೀ, ನೃಸಿಂಹಜಯಂತೀ**

**೦೫.೦೫.೧೨ : ಕೂರ್ಮಜಯಂತೀ**

೦೬.೦೫.೧೨ : ಹುಣ್ಣಿಮೆ, ವ್ಯಾಸಪೂಜಾ, ವೈಶಾಖಸ್ನಾನಸಮಾಪ್ತಿ ,
ವಿಷ್ಣುಪಂಚಕವ್ರತ, ಶೂರ್ಪಾಲಿ ಮೊದಲಾದ ಕ್ಷೇತ್ರಗಳಲ್ಲಿ
ಶ್ರೀನೃಸಿಂಹದೇವರ ರಥೋತ್ಸವ

## ವೈಶಾಖಮಾಸ ಕೃಷ್ಣಪಕ್ಷ

೧೨.೦೫.೧೨ : ವಿಷ್ಣುಪಂಚಕವ್ರತ

೧೩.೦೫.೧೨ : ಧನಿಷ್ಠಾನವಕ ಆರಂಭ

೧೪.೦೫.೧೨ : ವೃಷಭ ಸಂಕ್ರಮಣ (ಪರ್ವಕಾಲ ಮಧ್ಯಾಹ್ನ ೧೨.೪೬ ರಿಂದ
ಸೂರ್ಯಾಸ್ತದವರೆಗೆ – ವಿಷ್ಣುಪದಪರ್ವಪುಣ್ಯಕಾಲ)

**೧೫.೦೫.೧೨ : ದಶಮೀ**
**೧೬.೦೫.೧೨ : ಸರ್ವರಿಗೂ ಏಕಾದಶೀ (ಅಪರಾ)**
**೧೭.೦೫.೧೨ : ದ್ವಾದಶೀ**
೧೮.೦೫.೧೨ : ಪ್ರದೋಷ
೨೦.೦೫.೧೨ : ದರ್ಶ,ಅಮಾವಾಸ್ಯೆ , ವಿಷ್ಣುಪಂಚಕವ್ರತ , ಶನೈಶ್ಚರ ಜಯಂತೀ

## ಜ್ಯೇಷ್ಠಮಾಸ ಶುಕ್ಲಪಕ್ಷ (ಮಾಸನಿಯಾಮಕ : ರಮಾ - ತ್ರಿವಿಕ್ರಮ)

೨೧.೦೫.೧೨ : ಧನಿಷ್ಠಾನವಕ ಸಮಾಪ್ತಿ, ದಶಹರಾವ್ರತ ಆರಂಭ
೨೨.೦೫.೧೨ : ಚಂದ್ರದರ್ಶನ
೨೮.೦೫.೧೨ : ಗುರೂದಯ
೩೦.೦೫.೧೨ : ದಶಹರಾವ್ರತ ಸಮಾಪ್ತಿ, ಭಾಗೀರಥೀ ಜಯಂತೀ
೩೧.೦೫.೧೨ : ದಶಮೀ - ಹರಿವಾಸರ ರಾತ್ರಿ ೯.೧೫ರ ನಂತರ
**೦೧.೦೬.೧೨ : ಸಕಲ ವೈಷ್ಣವರಿಗೆ ಏಕಾದಶೀ (ನಿರ್ಜಲಾ)**
೦೨.೦೬.೧೨ : ಶುಕ್ರಾಸ್ತ (೧೦.೦೬.೧೨ರವರೆಗೆ)
೦೪.೦೬.೧೨ : ಹುಣ್ಣಿಮೆ, ವಿಷ್ಣುಪಂಚಕವ್ರತ

## ಗುರುಗಳ ಪುಣ್ಯದಿನಗಳು

೧೬.೦೪.೧೨ : ಶ್ರೀಸತ್ಯವಿಜಯತೀರ್ಥರು(ಉ.ಮ.), ಸತ್ಯವಿಜಯನಗರ
೨೨.೦೪.೧೨ : ಶ್ರೀಸತ್ಯಾನಂದತೀರ್ಥರು(ಉ.ಮ.), ಮಳಖೇಡ
೨೨.೦೪.೧೨ : ಶ್ರೀವಿದ್ಯಾನಿಧಿತೀರ್ಥರು(ಶ್ರೀಪಾ.ಮ.), ಪಳ್ಳಿಪಾಳ್ಯ
೨೪.೦೪.೧೨ : ಶ್ರೀವಿದ್ಯಾಧಿರಾಜತೀರ್ಥರು(ಉ.ಮ.), ಜಗನ್ನಾಥಪುರೀ
ಶ್ರೀವಿಜಯಧ್ವಜತೀರ್ಥರು, ಕಣ್ವತೀರ್ಥ
೨೫.೦೪.೧೨ : ಶ್ರೀವಿದ್ಯಾಪತಿತೀರ್ಥರು(ವ್ಯಾ.ಮ.),ಕುಂಭಕೋಣಂ
ಶ್ರೀವಿದ್ಯಾಶ್ರೀನಿವಾಸತೀರ್ಥರು(ವ್ಯಾ.ಮ.),ಸೋಸಲೆ
೨೬.೦೪.೧೨ : ಶ್ರೀರಾಮಚಂದ್ರತೀರ್ಥರು(ಉ.ಮ.), ಯರಗೋಳ
೨೯.೦೪.೧೨ : ಮೊದಲಕಲ್ಲು ಶ್ರೀಶೇಷದಾಸರು
೦೩.೦೫.೧೨ : ಶ್ರೀಸುವ್ರತೀಂದ್ರತೀರ್ಥರು(ರಾ.ಮ.), ಮಂತ್ರಾಲಯ
೦೬.೦೫.೧೨ : ಶ್ರೀರಾಜೇಂದ್ರತೀರ್ಥರು(ವ್ಯಾ.ಮ.),ಯರಗೋಳ
೦೬.೦೫.೧೨ : ಶ್ರೀಲಕ್ಷ್ಮೀನಾಥತೀರ್ಥರು(ಶ್ರೀಪಾ.ಮ.), ಅಬ್ಬೂರು
೧೦.೦೫.೧೨ : ಶ್ರೀಶ್ರೀನಿವಾಸತೀರ್ಥರು(ವ್ಯಾ.ಮ.),ನವವೃಂದಾವನ
೧೨.೦೫.೧೨ : ಶ್ರೀಭುವನೇಂದ್ರತೀರ್ಥರು(ರಾ.ಮ.), ರಾಜವಳ್ಳಿ
೧೪.೦೫.೧೨ : ಶ್ರೀವಿದ್ಯಾರತ್ನಾಕರತೀರ್ಥರು(ವ್ಯಾ.ಮ.),ಸೋಸಲೆ
೧೫.೦೫.೧೨ : ಶ್ರೀಶ್ರೀಪತಿತೀರ್ಥರು(ಶ್ರೀಪಾ.ಮ.), ಮಾರಂಡಹಳ್ಳಿ
೧೭.೦೫.೧೨ : ಶ್ರೀಬ್ರಹ್ಮಣ್ಯತೀರ್ಥರು(ವ್ಯಾ.ಮ.), ಅಬ್ಬೂರು

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

೦೯-೦೪-೨೦೧೨ ರಿಂದ ೧೫-೦೪-೨೦೧೨ರವರೆಗೆ ಪ್ರವಚನ ಸಂಜೆ ೬.೩೦ಕ್ಕೆ

**ವಿಷಯ : ಮಹಾಭಾರತ - ಸಭಾಪರ್ವ**

ಸ್ಥಳ : ಶ್ರೀರಾಘವೇಂದ್ರಸ್ವಾಮಿಗಳ ಮಠ, ಅಮರಜ್ಯೋತಿನಗರ, ಬೆಂಗಳೂರು

*****

೨೮-೦೪-೨೦೧೨ ಪ್ರವಚನ ಸಂಜೆ ೬.೩೦ಕ್ಕೆ

ಸ್ಥಳ : ಶ್ರೀಜಯತೀರ್ಥವೃಂದಾವನ ಸನ್ನಿಧಾನ, ಉತ್ತರಾದಿಮಠ, ಬಸವನಗುಡಿ, ಬೆಂಗಳೂರು

*****

೨೯.೪.೨೦೧೨ ಪ್ರವಚನ (ಶ್ರೀಭಂಡಾರಕೇರಿಮಠ ಪ್ರಾಯೋಜಿತ, ಶ್ರೀವೇದವ್ಯಾಸಜಯಂತಿ ಹಾಗೂ ಶ್ರೀವಿದ್ಯಾಮಾನ್ಯತೀರ್ಥರ ಆರಾಧನಾ ನಿಮಿತ್ತ)

ಸ್ಥಳ : ಶ್ರೀಸಂಜೀವರಾಯರ ಗುಡಿ, ಮಾನ್ವಿ, ರಾಯಚೂರು

*****

೦೧-೦೫-೨೦೧೨ (ಶ್ರೀವಿದ್ಯಾಮಾನ್ಯತೀರ್ಥರ ಆರಾಧನಾ ನಿಮಿತ್ತ)ಪ್ರವಚನ,

ಸ್ಥಳ : ಪಲಿಮಾರು ಮಠ, ಉಡುಪಿ

*****

೦೪-೦೫-೨೦೧೨ 'ಶ್ರೀನರಸಿಂಹಜಯಂತಿ' ನಿಮಿತ್ತ ಪ್ರವಚನ

ಸ್ಥಳ : ಶ್ರೀವ್ಯಾಸಮಧ್ವಸಭಾಂಗಣ, ಬೆಂಗಳೂರು

*****

೧೪.೦೫.೨೦೧೨ರಿಂದ ೨೦.೦೫.೨೦೧೨ರವರೆಗೆ ಪ್ರವಚನ ಸಂಜೆ ೬.೩೦ಕ್ಕೆ

**ವಿಷಯ : ಭಗವದ್ಗೀತೆ - ಮೊದಲ ಅಧ್ಯಾಯ**

ಸ್ಥಳ : ಶ್ರೀವಿಜಯಭಾರತಿ ಶಾಲೆ ಸಭಾಂಗಣ, ಗಿರಿನಗರ, ಬೆಂಗಳೂರು

*****

**ಜಯತಿ ಜಯತಿ ಸೂತ್ರಂ ವ್ಯಾಸದೇವಪ್ರಣೀತಂ**
**ಜಯತಿ ಜಯತಿ ಭಾಷ್ಯಂ ಮಧ್ವರಾಜಪ್ರಣೀತಮ್ ।**
**ಜಯತಿ ಜಯತಿ ಟೀಕಾ ಚಿತ್ರವಾಕ್ಯಾರ್ಥರೂಪಾ**
**ಜಯತಿ ಜಯತಿ ಸರ್ವಂ ವೈಷ್ಣವಂ ಗ್ರಂಥಜಾತಮ್ ॥**

ಹರಿ ಸರ್ವೋತ್ತಮ ವಾಯು ಜೀವೋತ್ತಮ

# ಕಲ್ಪವೃಕ್ಷ ಶ್ರೀರಾಘವೇಂದ್ರಸ್ವಾಮಿಗಳ ಮಠ
# (ಮೃತ್ತಿಕಾ ಬೃಂದಾವನ)

ಮಾಚೋಹಳ್ಳಿ, ೨ನೇ ಹಂತ, ಬಾಪಾ ಗ್ರಾಮ ಅಂಚೆ, ದಾಸನಪುರ ಹೋಬಳಿ,
ಮಾಗಡಿ ಮುಖ್ಯರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು.

**ದೂರವಾಣಿ :** 9091259764, 9341474243, 9880737177, 080-23165454

**ಸಮಯ : ಬೆಳಿಗ್ಗೆ** 7.00 ರಿಂದ 12.00 ಹಾಗೂ ಸಂಜೆ 5.00 ರಿಂದ 8.00

ಈ ಗ್ರಾಮದಲ್ಲಿ 6 ವರ್ಷಗಳ ಹಿಂದೆ ಕಲ್ಪವೃಕ್ಷ ಶ್ರೀರಾಘವೇಂದ್ರಸ್ವಾಮಿ ಮೃತ್ತಿಕಾ ಬೃಂದಾವನವನ್ನು ಸ್ಥಾಪಿಸಿರುತ್ತೇವೆ. ಇಲ್ಲಿಯ ವಿಶೇಷವೆಂದರೆ ಶ್ರೀಗುರುಗಳ ಮೇಲ್ಭಾಗ-ದಲ್ಲಿ ಅಭಯ ಆಂಜನೇಯ ಇದ್ದು, ಶ್ರೀಗಳ ಬಲಭಾಗದಲ್ಲಿ ಮಹಾಲಕ್ಷ್ಮೀದೇವಿ ಹಾಗೂ ಎಡಭಾಗದಲ್ಲಿ ಇಡಗುಂಜಿ ಗಣಪತಿ ಮೂರ್ತಿಗಳು ಪ್ರತಿಷ್ಠಾಪಿಸಲ್ಪಟ್ಟಿವೆ. ಗುರುಗಳ ಬಲಭಾಗದಲ್ಲಿ ಅಶ್ವತ್ಥಕಟ್ಟೆ ಇರುವುದು ಈ ಮಠದ ಮತ್ತೊಂದು ವಿಶೇಷ.

ಈ ಮಠದಲ್ಲಿ ಮಕ್ಕಳ ವಿದ್ಯಾಭ್ಯಾಸ/ಮದುವೆ ಇತ್ಯಾದಿಗಳ ಫಲಾಪೇಕ್ಷೆಯಿಂದ ಕೈಯ್ಯಲ್ಲಿ ತೆಂಗಿನಕಾಯಿ ಹಿಡಿದು ಹರಕೆ ಮಾಡಿಕೊಂಡು ಗುರುಗಳಿಗೆ 9 ಪ್ರದಕ್ಷಿಣೆ ಹಾಕಿ ಸಮರ್ಪಣೆ ಮಾಡಬೇಕು. ಈ ರೀತಿ ಸೇವೆ ಸಲ್ಲಿಸಿ ಈಗಾಗಲೇ ಸಹಸ್ರಾರು ಭಕ್ತಾದಿಗಳು ತಮ್ಮ ಅಭೀಷ್ಟಗಳನ್ನು ಈಡೇರಿಸಿಕೊಂಡಿರುವರಲ್ಲದೇ ಅವರ ಕಷ್ಟಕಾರ್ಪಣ್ಯಗಳೂ ನಿವಾರಣೆಯಾಗಿವೆ. ಪ್ರತಿ ಗುರುವಾರ ಹಾಗೂ ಭಾನುವಾರದಂದು ವಿಶೇಷ ಭಜನೆ, ಆರತಿಯನ್ನು ಆಚರಿಸಲಾಗುತ್ತಿದೆ.

ಈ ಮಠದಲ್ಲಿ ಉಪನಯನ ಅಥವಾ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲು ಅವಕಾಶವಿದೆ. ಭಕ್ತಾದಿಗಳು ಇದರ ಸದುಪಯೋಗವನ್ನು ಪಡೆದು ಮಠಕ್ಕೆ ಸಹಕಾರ ನೀಡಬೇಕೆಂದು ಪ್ರಾರ್ಥನೆ. ತನು, ಮನ, ಧನಗಳಿಂದ ಶ್ರೀರಾಘವೇಂದ್ರ-ಸ್ವಾಮಿಗಳು ಸೇವೆಯನ್ನು ಮಾಡಿ ಆ ಮೂಲಕ ಶ್ರೀಹರಿವಾಯುಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುವ,

ಬಿ. ರಾಮಮೂರ್ತಿ, ಧರ್ಮದರ್ಶಿಗಳು,
ಕಲ್ಪವೃಕ್ಷ ಶ್ರೀರಾಘವೇಂದ್ರಸ್ವಾಮಿ ಮಠ, ಮಾಚೋಹಳ್ಳಿ

ಬಸ್ ಮಾರ್ಗಗಳು :
ಮಾರ್ಕೆಟ್‌ನಿಂದ : 240,240ಇ, 240ಎಮ್ ; ಶಿವಾಜಿನಗರದಿಂದ : 240ಎ
ಯಶವಂತಪುರ-ಮಾಚೋಹಳ್ಳಿ 252 ;
ಜಯನಗರ 4ನೇ ಬ್ಲಾಕ್ - ಮಾಚೋಹಳ್ಳಿ 501ಜೆ
ಮಾಚೋಹಳ್ಳಿ ಗೇಟ್‌ನಿಂದ ಮಠದವರೆಗೆ ಸಾಕಷ್ಟು ಆಟೋಗಳು ದೊರೆಯುತ್ತವೆ.

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

'Pajaka', # 89/24, III Cross, Mount Joy Road, Hanumanthanagar, Bangalore - 560 019.
Website: www.vyasamadhwa.org Ph:26602802 Email: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧. ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨. ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩. 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವ-ಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪. 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫. ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬. ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವಸೇವಾಪ್ರಶಸ್ತಿ'.

೭. ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮. ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯. ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

### ವಿಶೇಷ ಸೂಚನೆ :

೧. ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.

೨. ನಮ್ಮ ಪ್ರತಿಷ್ಠಾನಕ್ಕೆ ನೀಡುವ ಯಾವುದೇ ಬಗೆಯ ದೇಣಿಗೆಗೆ **80G** ಅನ್ವಯ ಆದಾಯ ತೆರಿಗೆ ವಿನಾಯಿತಿ ಉಂಟು.